ಶ್ರೀ ಪ್ರಭು ಸುಣಗಾರ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿ, ಹಾವೇರಿ ಜಿಲ್ಲೆ, ಇವರು ತಮ್ಮ ರಕ್ಷಣಾ ಹೇಳಿಕೆಯಲ್ಲಿನ ಆರೋಪಗಳನ್ನು ನಿರಾಕರಿಸಿದ್ದು, ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗುವಂತೆ ಕಂಡು ಬಂದ ಹಿನ್ನೆಲೆಯಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಕೂಲಂಕಷವಾಗಿ ವಿಚಾರಣೆ ನಡೆಸುವುದು ಸೂಕ್ತವೆಂದು ಸರ್ಕಾರವು ಮನಗಂಡು ಇಲಾಖಾ ವಿಚಾರಣೆಯನ್ನು ನಡೆಸಲು ನಿರ್ಧರಿಸಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧರಿಸಿದ್ದು ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಇಡಿ 18 ಡಿಜಿಟಿ 2011 ಬೆಂಗಳೂರು, ದಿನಾಂಕ : 09ನೇ ಮಾರ್ಚ್ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಪ್ರಭು ಸುಣಗಾರ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿ, ಹಾವೇರಿ ಜಿಲ್ಲೆ, ಹಾಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಶಿವಮೊಗ್ಗ ಇವರುಗಳ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಕರ್ನಾಟಕ

ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11(2)ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಶ್ರೀ ಎಸ್.ವೈ. ಕುಂಬಾರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಅವರನ್ನು ಈ ಪ್ರಕರಣದ ವಿಚಾರಣಾಧಿಕಾರಿಯಾಗಿಯೂ ಹಾಗೂ ನಿಯಮ 11(5)(ಸಿ) ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಾಂಶುಪಾಲರು, ಡಯಟ್, ಹಾವೇರಿ ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

ವಿಚಾರಣೆ ನಡೆಸಲು ಸ್ಥಳಾವಕಾಶವನ್ನು ನೀಡಲು ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗಳಿಗೆ ಒದಗಿಸಲು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ.

ವಿಚಾರಣೆ ನಂತರ ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ ನಂತರ ಅವರಿಗೆ ರೂ. 15,000/– ಗಳ ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ) ಪಾವತಿಸಲು ಸೂಚಿಸಿದೆ.

ವಿಚಾರಣಾಧಿಕಾರಿಗಳು ಪ್ರತಿ ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗೆ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 923 ಶಿಕ್ಷಣ ಇಲಾಖೆ (ಸಮಿತಿಗಳು ಮತ್ತು ಆಡಳಿತ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ಹುದ್ದೆಯನ್ನು ಸೃಜಿಸುವ ಬಗ್ಗೆ ಆದೇಶ.–

ಓದಲಾಗಿದೆ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರ ಸಂಖ್ಯೆ: AI IFS CR-40/2011-12, dated 16-01-2012.

ಪ್ರಸ್ತಾವನೆ:

Sri Awtar Singh, IFS ಇವರನ್ನು ದಿನಾಂಕ 24–12–11ರ ಅಧಿಸೂಚನೆ ಸಂಖ್ಯೆ: DPAR 124 SFP 11 ರಲ್ಲಿ ಬಡ್ತಿ ನೀಡಿ, Chief Conservator of Forest, Chickmagalur Circle, Chickmagalur ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿದ್ದು, ಇವರು ದಿನಾಂಕ 26–12–11 ರಂದು ಈ ಹುದ್ದೆಗೆ ಕಾರ್ಯವರದಿ ಮಾಡಿಕೊಂಡಿರುವುದರಿಂದ, ವೃಂದ ಹುದ್ದೆಯಾದ Conservator of Forest, Chickmagalur Circle, Chickmagalur ಹುದ್ದೆಯನ್ನು ನಿಲಂಬನೆಯಲ್ಲಿಟ್ಟು Chief Conservator of Forest, Chickmagalur Circle, Chickmagalur ವೃಂದೇತರ ಹುದ್ದೆಯನ್ನು ದಿನಾಂಕ 26–12–2011 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಥವಾ ವೃಂದ ಪರಿಷ್ಕರಣೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಸೃಜಿಸಿ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಕೋರಲಾಗಿದೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 024 ಅಪಸೇ 2012, ಬೆಂಗಳೂರು, ದಿನಾಂಕ 14–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ವೃಂದ ಹುದ್ದೆಯಾದ Conservator of Forest, Chickmagalur Circle, Chickmagalur ಹುದ್ದೆಯನ್ನು ನಿಲಂಬನೆಯಲ್ಲಿಟ್ಟು, ದಿನಾಂಕ 26–12–2011 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಥವಾ ವೃಂದ ಪರಿಷ್ಕರಣೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ Chief Conservator of Forest, Chickmagalur Circle, Chickmagalur ವೃಂದೇತರ ಹುದ್ದೆಯನ್ನು ಸೃಜಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಂಖ್ಯೆ: ಆಇ 116 ವೆಚ್ಚ–5/2012, ದಿನಾಂಕ 27–02–2012ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)

ಪಿ.ಆರ್. 927 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

FOREST, ENVIRONMENT & ECOLOGY SECRETARIAT

Sub: Capacity building for Field Staff – Nominations for Regional Training to be held in Bangkok, Thailand in March, 2012 under the aegis of ASEAN-WEN-reg.,

Read: Ministry of Environment and Forests, National Tiger Conservation of Authority, Government of India, O.M. No. 15-19/2011-NTCA, dated 09-12-2011.

Preamble:

In the OM dated 09-12-2011, Government of India, Ministry of Environment and Forest, National Tiger Conservation Authority has stated that, the following officers are nominated for a Training on Wildlife Enforcement at no cost to the Government of India/NTCA to be organized under the aegis ASEEAN-WEN in the month of March 2012 in Bangkok, Thailand.

Further it is requested to accord necessary clearance for the following officers to attend the training.

1. Sri D. S. Gaonkar, IFS, Deputy Conservator of Forests, Bhadra Wildlife Division, Chickamagalur.
2. Sri Ravishankar, Assistant Conservator of Forests, Special Tiger Protection Force, Bandipur.
3. Sri A. V. Satish, Range Forest Officer, D. B. Kuppe Wildlife Range.

On careful examination of the proposal, the Government orders as follows;

Government Order No. FEE 33 FTC 2012, Bangalore, dated 14-03-2012

In view of the facts explained in the preamble, Government has accorded permission to the following officers for the training on Wildlife Enforcement – ASEAN – WEN PROTECT – managers Course which is going to be held in Khao Yai National Park, Thailand from 19-03-2012 to 30-03-2012.

1. Sri D. S. Gaonkar, IFS, Deputy Conservator of Forests, Bhadra Wildlife Division, Chickamagalur.
2. Sri Ravishankar, Assistant Conservator of Forests, Special Tiger Protection Force, Bandipur.
3. Sri A. V. Satish, Range Forest Officer, D. B. Kuppe Wildlife Range.

The expenditure for the above Officers for the training will be met by the Host Organisation and hence there is no expenditure for the State Government.

By Order and in the name of the Governor of Karnataka

S. Balakrishnaiah

Under Secretary to Government

P.R. 928 Forest, Environment & Ecology Department

FOREST, ENVIRONMENT & ECOLOGY SECRETARIAT

Sub: Diversion of 0.91 ha. of Forest land in F.Sy No. 123 and 127 of Mangalore Village in Badami Taluk, Bagalkot District to lift 49.80 Mcft of Water for filling up of MI tank for irrigation and drinking water purpose in favour of the Executive Engineer. MI Division. Bijapur.

Read: 1. Letter No. A5(3)GFL.CR.69/11-12, dated 12-12-2011 of the Principal Chief Conservator of Forests, Bangalore.

2. Letter No. F No. 11.9/98-FC, dated 03-01-2005, 26-12-2007 and 11-09-2009 Guidelines of Government of India, Ministry of Environment and Forests. New Delhi.

Preamble:

The Principal Chief Conservator of Forests, Bangalore vide letter read at (1) above had submitted a proposal for diversion of 0.91 ha of Forest land in F.Sy. No. 123 and 127 of Mangalore Village in Badami Taluk, Bagalkot District to lift 49.80 Mcft of Water for filling up of MI tank for irrigation and drinking water purpose in favour of the Executive Engineer, MI Division, Bijapur subject to certain conditions.

The Government of India Ministry of Environment and Forests, New Delhi vide their letter dated 03-01-2005 read at (2) above conveyed its general approval under section 2 of the Forest (Conservation) Act, 1980 for diversion of Forest land to Government Departments for certain activities not exceeding one ha.

This proposal has been examined in accordance with the general approval of Government of India vide letter dated 03-01-2005 and it has been decided to accord sanction of 0.91 ha. of Forest land in F.Sy. No. 123 and 127 of Mangalore Village in Badami Taluk, Bagalkot District to lift 49.80 Mcft of Water for filling up MI tank for irrigation and drinking water purpose in favour of the Executive Engineer, MI Division, Bijapur.

The proposal has been examined in detail and hence the order

Government Order No. FEE 210 FLL 2011, Bangalore, dated 03-03-2012

In the circumstances explained in the preamble and in accordance with the general approval of Government of India in the letters dated 3-1-2005, 26-12-2007 and 11-09-2009 Government is pleased to accord approval under Section (2) of Forest (Conservation) Act 1980 for diversion of 0.91 ha of Forest land in F.Sy. No. 123 and 127 of Mangalore Village in Badami Taluk, Bagalkot District to lift 49.80 Mcft of Water for filling up of MI tank for irrigation and drinking water purpose in 'Favour of the Executive Engineer, MI Division, Bijapur subject to the following conditions.

1. The legal status of Forest land shall remain unchanged and it shall continue to be forest land.
2. The lessee shall pay lease rent as fixed by the Government from time to time.
3. The lease is granted for a period of 20 years
4. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose the area should be resumed to the Forest Department under Section 82 of Karnataka Forest Act, 1963. The concerned Deputy Conservator of Forests is authorized to take necessary action in this regard.
5. No. structures/residential buildings shall be permitted in the proposed Forest area.

6. The Karnataka Forest Act, 1963 and Rules, 1969 and other relevant Acts & Rules will be applicable for any violation.
7. The User Agency shall pay the cost of raising Compensatory Afforestation over 2.0 ha. of degraded Forest area at the rate prevailing at the time of sanction (At present it is Rs. 1,05,000/-per ha).
8. The user agency has to pay the Net Present Value (NPV) of Forest land diverted under this proposal as per Orders dated 28-03-2008 and 9-5-2008 of the Hon'ble Supreme Court of India.
9. The User Agency shall ensure that there shall be no damage to the available fauna and flora.
10. No. labour camp shall be established on the Forest lands
11. No work shall be allowed after sunset
12. Any damage to Forest area due to such works shall be compensated by the User Agency. The extent of damage shall be assessed by the concerned Deputy Conservator of Forests.
13. The User Agency shall not sub-lease, mortgage and hypothecate the forest area
14. The approval under the Forest (Conservation) Act, 1980; is subject to the clearance under the Environment (Protection) Act, 1986, if required.
15. The User Agency shall abide by all the conditions imposed upon by Government of India, the Government of Karnataka and Principal Chief Conservator of Forests (Head of Forest Force).

By Order and in the name of the Governor of Karnataka

G. H. Anasuyamma

Under Secretary to Government

Forest, Ecology & Environment Department

P.R. 929

ವಸತಿ ಸಚಿವಾಲಯ

ವಿಷಯ: ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ ಉತ್ತರ ವಿಧಾನಸಭಾ ಕ್ಷೇತ್ರ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನಾಮ ನಿರ್ದೇಶಿಸುವ ಬಗ್ಗೆ.–

ಓದಲಾಗಿದೆ: ಸರ್ಕಾರದ ಆದೇಶ ಸಂ. ವಇ 42 ಹೆಚ್‌ಎಎಂ 1999, ದಿನಾಂಕ 10–05–2000

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ಆಶ್ರಯ ಸಮಿತಿಗಳನ್ನು ಪುನರ್ ರಚಿಸಿ, ಸಮಿತಿಯ ಸದಸ್ಯರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗಧಿಪಡಿಸಿ ಆದೇಶವನ್ನು ಹೊರಡಿಸಿದೆ. ಈ ಪರಿಷ್ಕೃತ ಆದೇಶದನ್ವಯ ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ ಉತ್ತರ ವಿಧಾನಸಭಾ ಕ್ಷೇತ್ರ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 43 ಹೆಚ್‌ಎಎಸ್ 2012, ಬೆಂಗಳೂರು, ದಿನಾಂಕ 16–03–2012

ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ ಉತ್ತರ ವಿಧಾನಸಭಾ ಕ್ಷೇತ್ರ ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ಪ್ರಭಾಕರ ಜಮಾದಾರ, ಮನೆ ನಂ. 8–1545–7, ಹನುಮಾನ ಮಂದಿರದ ಹತ್ತಿರ, ಶಿವಾಜಿನಗರ, ಗುಲ್ಬರ್ಗಾ	ಹಿಂ. ವರ್ಗ
2	ಶ್ರೀಮತಿ ಅಮರೀನ ಬೇಗಂ ಕೋಂ. ಮಸ್ತಾನಸಾಬ, ನ್ಯೂ ರೆಹಮತ್ ನಗರ, ಗುಲ್ಬರ್ಗಾ	ಅ.ಸಂ. ಮಹಿಳೆ
3	ಶ್ರೀ ಪ್ರಕಾಶ ಡೊಲಾರೆ, ಮನೆ ನಂ. 5–8–715, ಆರ್ಯನಗರ, ನೆಹರು ಗಂಜ, ಗುಲ್ಬರ್ಗಾ	ಎಸ್.ಟಿ.
4	ಶ್ರೀ ಜಯದೀಪ ಕೋಡ್ಲಿ c/o ಆರ್. ವಿ. ನವಣಿ, ಪ್ರಗತಿ ಕಾಲೋನಿ, ಪ್ಲಾಟ್ ನಂ. 30, ಬಸವೇಶ್ವರ ಕಾಲೋನಿ, ಗುಲ್ಬರ್ಗಾ	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಶಂಕರಪ್ಪ

ಪಿ.ಆರ್. 930 ಪೀಠಾಧಿಕಾರಿ–2, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ: ದಾವಣಗೆರೆ ಜಿಲ್ಲೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನಾಮನಿರ್ದೇಶಿಸುವ ಬಗ್ಗೆ.–

ಓದಲಾಗಿದೆ: 1) ಸರ್ಕಾರದ ಆದೇಶ ಸಂ. ವಇ 42 ಹೆಚ್‌ಎಎಂ 1999, ದಿನಾಂಕ 10–05–2000

2) ಸರ್ಕಾರದ ಆದೇಶ ಸಂ. ವಇ 54 ಹೆಚ್‌ಎಎಸ್ 2008, ದಿನಾಂಕ 28–02–2009

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ (1)ರಲ್ಲಿ ಓದಲಾದ ಆದೇಶದನ್ವಯ ರಚಿಸಲಾಗಿತ್ತು. ಅದರಂತೆ (2)ರಲ್ಲಿ ಓದಲಾದ ಆದೇಶದಲ್ಲಿ ದಾವಣಗೆರೆ ಜಿಲ್ಲೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು. ಸದರಿ ಸಮಿತಿಗೆ ಪರಿಷ್ಕೃತ ಅಧಿಕಾರೇತರ ಸದಸ್ಯರನ್ನು ನೇಮಿಸಿ ಆದೇಶವನ್ನು ಈ ಕೆಳಕಂಡಂತೆ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 36 ಹೆಚ್ಎಎಸ್ 2012, ಬೆಂಗಳೂರು, ದಿನಾಂಕ 16–03–2012

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ವೈ. ಲಿಂಗರಾಜ್ ಗೌಳಿ ಬಿನ್ ಯಲ್ಲಪ್ಪ, ಮಹಾರಾಜಪೇಟೆ, ದಾವಣಗೆರೆ	ಸಾಮಾನ್ಯ
2	ಶ್ರೀ ಹೆಚ್. ಓ. ದುಗ್ಗಪ್ಪ ಬಿನ್ ಓಂಕಾರಪ್ಪ, ಕುರುಬರಕೇರಿ, ಹರಿಕೇರಮ್ಮನ ದೇವಸ್ಥಾನದ ಹಿಂಭಾಗ, ದಾವಣಗೆರೆ	ಹಿಂ. ವರ್ಗ
3	ಶ್ರೀ ಆರ್. ಪರುಶುರಾಮ್ ಬಿನ್ ರಾಮಪ್ಪ, ಹೊಸ ಎ. ಕೆ. ಕಾಲೋನಿ, ಬಸಾಪುರ, ದಾವಣಗೆರೆ	ಪ.ಜಾತಿ
4	ಶ್ರೀಮತಿ ಮಾಲಮ್ಮ ಕೋಂ. ಮುಕುಂದಾಚಾರಿ, ರಾಜೀವ್‌ಗಾಂಧಿ ಬಡಾವಣೆ, # 826, ಕೊಂಡಜ್ಜಿ ರಸ್ತೆ, ದಾವಣಗೆರೆ	ಅ.ಸಂ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಶಂಕರಪ್ಪ

ಪಿ.ಆರ್. 931 ಪೀಠಾಧಿಕಾರಿ–2, ವಸತಿ ಇಲಾಖೆ

ಮೂಲ ಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಗುಲ್ಬರ್ಗಾ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 24 ರಾಅವಿ 2000, ದಿನಾಂಕ 02–01–2003
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 24 ರಾಅವಿ 2000, ದಿನಾಂಕ 30–06–2004
3. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 24 ರಾಅವಿ 2000, ದಿನಾಂಕ 18–08–2007
4. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 14 ರಾಅವಿ 2007, ದಿನಾಂಕ 15–11–2007
5. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 72 ರಾಅವಿ 2008, ದಿನಾಂಕ 20–06–2008
6. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 72 ರಾಅವಿ 2008, ದಿನಾಂಕ 06–09–2008
7. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 72 ರಾಅವಿ 2008, ದಿನಾಂಕ 18–01–2010
8. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 79 ರಾಅವಿ 2009, ದಿನಾಂಕ 05–03–2011
9. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 34 ರಾಅವಿ 2011, ದಿನಾಂಕ 17–03–2011
10. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 72 ರಾಅವಿ 2008, ದಿನಾಂಕ 31–01–2012
11. ಜಿಲ್ಲಾಧಿಕಾರಿಗಳು, ಗುಲ್ಬರ್ಗಾ, ಇವರ ಪತ್ರ ಸಂ.: ಸಂ/ಕಂ/ಭೂಸ್ವಾ/ಸಿಆರ್/429/2008–09, ದಿನಾಂಕ 04–12–2012.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶ ದಿನಾಂಕ 02–01–2003ರಲ್ಲಿ ಗುಲ್ಬರ್ಗಾ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಶ್ರೀನಿವಾಸ ಸಾರಡಗಿ ಗ್ರಾಮದಲ್ಲಿ 567 ಎಕರೆ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಗುಲ್ಬರ್ಗಾ ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲಾಗಿದೆ.

2. ಮೇಲೆ ಕ್ರಮ ಸಂಖ್ಯೆ (2) ರಿಂದ (8) ರಲ್ಲಿ ಓದಲಾದ ಆದೇಶಗಳಲ್ಲಿ ಭೂಸ್ವಾಧೀನ ಹಾಗೂ ತಾಂಡಾ ಸ್ಥಳಾಂತರಕ್ಕೆ ಅಗತ್ಯವಾದ ಮೊತ್ತವನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

3. ಮೇಲೆ ಕ್ರಮ ಸಂಖ್ಯೆ (9)ರಲ್ಲಿ ಓದಲಾದ ಆದೇಶದ ದಿನಾಂಕ : 17–03–2011ರಲ್ಲಿ, ಗುಲ್ಬರ್ಗಾ ವಿಮಾನ ನಿಲ್ದಾಣದ ಜಮೀನಿನಲ್ಲಿರುವ ಹೈಟೆನ್ಷನ್ ಲೈನ್ ಸ್ಥಳಾಂತರಕ್ಕಾಗಿ ರೂ. 112.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇವರಿಗೆ ಬಿಡುಗಡೆ ಮಾಡಲಾಗಿದೆ.

4. ಮೇಲೆ ಕ್ರಮ ಸಂಖ್ಯೆ (10)ರಲ್ಲಿ ಓದಲಾದ ಆದೇಶದ ದಿನಾಂಕ 31–01–2012ರಲ್ಲಿ, ಗುಲ್ಬರ್ಗಾ ವಿಮಾನ ನಿಲ್ದಾಣದ ಭೂಸ್ವಾಧೀನದ ಬಾಕಿ ವೆಚ್ಚ ರೂ. 9.29 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

5. ಮೇಲೆ ಓದಲಾದ ಕ್ರ.ಸಂ. (11)ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರ ಪತ್ರ ದಿನಾಂಕ 04–02–2012ರಲ್ಲಿ ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಭೂಸ್ವಾಧೀನತೆಗೊಳಗಾದ ಮಡಿಯಾಳ ತಾಂಡದ ಪುನರ್ವಸತಿ ಪ್ರದೇಶದಲ್ಲಿ ಶ್ರೀ ಸೇವಾಲಾಲ ಹಾಗೂ ಶ್ರೀ ಜಗದಂಬಾ ದೇವಾಲಯಗಳ ನಿರ್ಮಾಣಕ್ಕಾಗಿ ರೂ. 40.00 ಲಕ್ಷ ಅಂದಾಜಿಸಿ, ತಾಂಡಾ ಸ್ಥಳಾಂತರ ಸಮಯದಲ್ಲಿ ಈ ದೇವಸ್ಥಾನದ ಪುನರ್ ನಿರ್ಮಾಣಕ್ಕಾಗಲಿ ಅಥವಾ ದೇವಸ್ಥಾನದ ಕಟ್ಟಡದ ಪರಿಹಾರ ಧನವಾಗಲಿ ಪರಿಗಣಿಸಿರುವುದಿಲ್ಲವಾದ್ದರಿಂದ ಈ ದೇವಸ್ಥಾನಗಳನ್ನು ನಿರ್ಮಿಸಲು ಅಗತ್ಯವಿರುವ ರೂ. 40.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

6. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 72 ರಾಅವಿ 2008, ಬೆಂಗಳೂರು, ದಿನಾಂಕ 17–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಭೂಸ್ವಾಧೀನತೆಗೊಳಗಾದ ಮಡಿಯಾಳ ತಾಂಡದ ಪುನರ್ವಸತಿ ಪ್ರದೇಶದಲ್ಲಿ ಶ್ರೀ ಸೇವಾಲಾಲ ಹಾಗೂ ಶ್ರೀ ಜಗದಂಬಾ ದೇವಾಲಯಗಳ ನಿರ್ಮಾಣಕ್ಕಾಗಿ/ಪುನರ್ ವಸತಿಗಾಗಿ ರೂ. 40.00 ಲಕ್ಷ (ರೂ. ನಲವತ್ತು ಲಕ್ಷಗಳು ಮಾತ್ರ) ಗಳನ್ನು, ಈ ಉದ್ದೇಶಕ್ಕಾಗಿ ಇತರೆ ಮೂಲಗಳಿಂದ/ಇಲಾಖೆಗಳಿಂದ ಹಣ ಬಿಡುಗಡೆ ಆಗಿರುವುದಿಲ್ಲ ಎಂಬುದನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇವರು ಖಚಿತಪಡಿಸಿಕೊಂಡ ನಂತರ ಈ ಹಣವನ್ನು ಉಪಯೋಗಿಸಿಕೊಳ್ಳುವ ಷರತ್ತಿಗೊಳಪಟ್ಟು ಹಣ ಬಿಡುಗಡೆಗೆ ಸರ್ಕಾರದ ಮಂಜೂರಾತಿಯನ್ನು ನೀಡಿದೆ.

2. ಈ ವೆಚ್ಚವನ್ನು 2011–12ನೇ ಸಾಲಿನ 5465–01–190–1–05 ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ (ಯೋಜನೆ) 133–SDP ಯಡಿಯಲ್ಲಿ ಬಾಕಿ ಇರುವ ಮೊತ್ತದಲ್ಲಿ ಭರಿಸತಕ್ಕದ್ದು.

3. ಹಣವನ್ನು ನಿರ್ಧಿಷ್ಟ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು ಮತ್ತು ಈ ಹಣವನ್ನು ಉಪಯೋಗಿಸಿರುವುದಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ಕಾಲಮಿತಿಯೊಳಗೆ ದೇವಾಲಯ ನಿರ್ಮಾಣ/ಪುನರ್ ವಸತಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನದ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸುವುದಿಲ್ಲ.

5. ಈ ಮೊತ್ತವನ್ನು ಜಿಲ್ಲಾಧಿಕಾರಿಗಳು ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇವರು ಜಿಲ್ಲಾ ಖಜಾನೆ, ಗುಲ್ಬರ್ಗಾ, ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ. ಬೆಂಗಳೂರು. ಇವರು ಈ ಮೊತ್ತವನ್ನು ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಖಾತೆಗೆ ಅಪ್ ಲೋಡ್ ಮಾಡುವುದು. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಿ ಉಪಯೋಗಿತ ಪ್ರಮಾಣ ಪತ್ರವನ್ನು ಗುಲ್ಬರ್ಗಾ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದು.

6. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆರ್ಥಿಕ ಇಲಾಖೆ 933 ವೆಚ್ಚ 1/2011, ದಿನಾಂಕ 17–01–2012ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಜಿ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 932

ಇಂಧನ ಸಚಿವಾಲಯ

ವಿಷಯ: ಮೆ॥ ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/08/VHPPL-15 MW (Chitradurga) 2011/569, ದಿನಾಂಕ 22–01/11–02–2011.
2. ದಿನಾಂಕ 27–05–2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/08/VHPPL-15 MW 2011/424, ದಿನಾಂಕ 06/07–02–2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ, ಅಯ್ಯನಹಳ್ಳಿ, ಕೊದುರು, ಕಲಗಟ್ಟ, ವಿಶ್ವನಾಥಹಳ್ಳಿ, ದಾಸರಹಳ್ಳಿ ನಂದಿಹಳ್ಳಿ ಗ್ರಾಮಗಳಲ್ಲಿ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಮತ್ತು ಈ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ವಿದ್ಯುತ್ ಖರೀದಿ ಒಪ್ಪಂದ ಮೂಲಕ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮಾರಾಟ ಮಾಡುವುದಾಗಿ ಹಾಗೂ ಯೋಜನೆಯನ್ನು 2012–13 ಮತ್ತು 2013–14ರಲ್ಲಿ ಅನುಷ್ಠಾನಗೊಳಿಸುವುದಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ದಿನಾಂಕ 27–05–2011ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತಾತ್ಕಾಲಿಕವಾಗಿಯಾದರೂ ಸರ್ವೆ ಸಂಖ್ಯೆಗಳನ್ನು ನೀಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ.

ಅದರಂತೆ ಅಭಿವೃದ್ಧಿದಾರರಿಂದ ಯೋಜನಾ ಸ್ಥಳದ ಸರ್ವೆ ಸಂಖ್ಯೆಗಳನ್ನು ಪಡೆದು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದೊಂದಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಈ ಯೋಜನೆಗೆ ಯಾವುದೇ ಸರ್ಕಾರಿ ಅಥವಾ ಅರಣ್ಯ ಜಮೀನಿನ ಅವಶ್ಯಕತೆಯಿರುವುದಿಲ್ಲ ಮತ್ತು ಉತ್ಪಾದನೆಯಾಗುವ ವಿದ್ಯುತನ್ನು ಎಸ್ಕಾಂಗಳಿಗೆ ಮಾರಾಟ ಮಾಡುವುದಾಗಿ ತಿಳಿಸಿದ್ದು, ಹಂಚಿಕೆ ಆದೇಶವನ್ನು ನೀಡಬಹುದಾಗಿದೆಯೆಂದು ತಿಳಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 121 ಎನ್‌ಸಿಇ 2011, ಬೆಂಗಳೂರು, ದಿನಾಂಕ 13–03–2012

ಮೆ॥ ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ, ಅಯ್ಯನಹಳ್ಳಿ, ಕೊದುರು, ಕಲಗಟ್ಟ, ವಿಶ್ವನಾಥಹಳ್ಳಿ, ದಾಸರಹಳ್ಳಿ ನಂದಿಹಳ್ಳಿ ಗ್ರಾಮಗಳಲ್ಲಿ 15.00 ಮೆಗಾ ವ್ಯಾಟ್ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ:–

Sl. No.	Topo Sheet No.	Proposed capacity in MW	Near by villages of the proposed area and district	Geographical area description of the project
1	57B/7	15 MW (30 Nos x 500 KW)	Donehalli, Akkanuru, Honnamardi, Gaurammanahalli, Toranagatti Villages of Chitradurga District.	Identification area is ground level plain would be having agricultural activities. The NH 13 runs diagonally in the area along with Power lines, the area is situated on the South of Donehalli and East of Terangatti has gentle elevation varying from 640 to 680 Mt., Further, it has water body and a stream runs across is called as Janagahalli and held in the following Geographical co-ordinates: **Latitude:** 14°46’07’’ 13°50’10’’N **Longitude:** 77°10’51’’-77°15’0’’E **Ridge peaks: -** 672, 644, 661, 632, 638 & 664 Amsl.
		15.00 MW		

1. ಈ ಯೋಜನೆಯನ್ನು 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06–1–2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೋ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್ ನಕ್ಷೆ ಮತ್ತು ವಿಂಡ್ ಫಾರ್ಮ್‌ನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್ ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್‌ಮಾಸ್ಟ್‌ಗಳ ಸಂಖ್ಯೆ)
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸುತ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.

6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ 'ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.
7. ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
8. ಅಭಿವೃದ್ಧಿದಾರರು ಈ ಯೋಜನೆಯನ್ನು 2013–14ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು ಹಾಗೂ ಅದರಂತೆ, ಕೆ.ಆರ್.ಇ.ಡಿ.ಎಲ್.ಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು.
9. ಸರ್ಕಾರಿ ಆದೇಶ ಸಂ: ಇಎನ್ 95 ಇಬಿಎಸ್ 2009, ದಿನಾಂಕ 29–12–2009ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.
10. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
11. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆಗೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
12. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 933

ಇಂಧನ ಸಚಿವಾಲಯ

ವಿಷಯ: ಮೆ॥ ಖಂಡಲೇರು ಪವರ್ ಕಂಪನಿ ಲಿಮಿಟೆಡ್ ಇವರ 1.4 ಮೆಗಾ ವ್ಯಾಟ್ ಸಾಮರ್ಥ್ಯದ ರಾಯ ಬಸವಣ್ಣ ಕೆನಾಲ್ ಕಿರು ಜಲ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಮಾಡುವ ಬಗ್ಗೆ.–

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 277 ಎನ್‌ಸಿಇ 2004, ದಿನಾಂಕ 10–9–2004
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 30 ಎನ್‌ಸಿಇ 2006, ದಿನಾಂಕ 25–01–2006
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 244 ಎನ್‌ಸಿಇ 2010, ದಿನಾಂಕ 18–06–2010
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/SH-234/2011/176, ದಿನಾಂಕ 17–12–2011/18–1–2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಎನ್‌ಸಿಎಲ್ ಎನರ್ಜಿ ಲಿಮಿಟೆಡ್ ಇವರಿಗೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ತುಂಗಭದ್ರಾ ಡ್ಯಾಂನ ಬಲದಂಡೆಯ ಬಳಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ರಾಯ ಬಸವಣ್ಣ ಕೆನಾಲ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೆ॥ ಎನ್‌ಸಿಎಲ್ ಎನರ್ಜಿ ಲಿಮಿಟೆಡ್ ಇವರಿಗೆ ಹಂಚಿಕೆಯಾಗಿರುವ ಮೇಲಿನ ಸಾಮರ್ಥ್ಯದಿಂದ 1.4 ಮೆಗಾ ವ್ಯಾಟ್ ಸಾಮರ್ಥ್ಯವನ್ನು ಮೆ॥ ಖಂಡಲೇರು ಪವರ್ ಕಂಪನಿ ಲಿಮಿಟೆಡ್ ಇವರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ವರ್ಗಾವಣೆ ಮಾಡಲಾಗಿತ್ತು ಹಾಗೂ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 30–9–2011ರವರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ॥ ಖಂಡಲೇರು ಪವರ್ ಕಂಪನಿ ಲಿಮಿಟೆಡ್ ಇವರ 1.4 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆ ಅನುಷ್ಠಾನಕ್ಕೆ ನೀಡಿರುವ ಕಾಲಾವಧಿಯು ದಿನಾಂಕ 30–9–2011ಕ್ಕೆ ಮುಕ್ತಾಯಗೊಂಡಿದ್ದು, ಈ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅನುಮೋದನೆಯನ್ನು ಅಭಿವೃದ್ಧಿದಾರರು ಪಡೆದಿದ್ದು ಸಿವಿಲ್ ಕಾಮಗಾರಿಗಳಿಗೆ ತುಂಗಭದ್ರ ಬೋರ್ಡ್‌ನಿಂದ ಅಂತಿಮ ಅನುಮತಿ ಪಡೆಯಬೇಕಾಗಿರುವುದರಿಂದ ಅಭಿವೃದ್ಧಿದಾರರ ಕೋರಿಕೆ ಮೇರೆಗೆ ಸದರಿ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ಸರ್ಕಾರಿ ಆದೇಶದ ದಿನಾಂಕದಿಂದ ಒಂದು ವರ್ಷದ ವರೆಗೆ Performance Guarantee of Rs. 3.00 lakhs/MW ಆಧಾರದ ಮೇಲೆ ವಿಸ್ತರಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 39 ಎನ್‌ಸಿಇ 2012, ಬೆಂಗಳೂರು, ದಿನಾಂಕ 12–03–2012

ಮೆ॥ ಖಂಡಲೇರು ಪವರ್ ಕಂಪನಿ ಲಿಮಿಟೆಡ್ ಇವರಿಗೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ತುಂಗಭದ್ರಾ ಡ್ಯಾಂನ ಬಲದಂಡೆಯ ಬಳಿ ಮಂಜೂರಾಗಿರುವ 1.4 ಮೆಗಾ ವ್ಯಾಟ್ ಸಾಮರ್ಥ್ಯದ ರಾಯ ಬಸವಣ್ಣ ಕೆನಾಲ್ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ಸರ್ಕಾರದ ಆದೇಶಾನುಸಾರ ಕಾಲಾವಕಾಶ ವಿಸ್ತರಣಾ ಶುಲ್ಕವನ್ನು ಪಾವತಿಸತಕ್ಕದ್ದು ಹಾಗೂ ಪ್ರತಿ ಮೆಗಾ ವ್ಯಾಟ್‌ಗೆ ರೂ. 3.00 ಲಕ್ಷಗಳ ನೆರವೇರಿಕೆ ಖಾತರಿ (Performance Guarantee) ನೀಡತಕ್ಕದ್ದೆಂಬ ಷರತ್ತಿಗೊಳಪಟ್ಟು ದಿನಾಂಕ 01–10–2011 ರಿಂದ 30–9–2013 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 934 ಇಂಧನ ಇಲಾಖೆ

ಕಂದಾಯ ಸಚಿವಾಲಯ

ವಿಷಯ: ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಯಡ್ರಾವಿ ಗ್ರಾಮದ ಗಾಯರಾಣ ರಿ.ಸ.ನಂ. 527/ಎ ರಲ್ಲಿ 1 ಎಕರೆ 21 ಗುಂಟೆ, ರಿ.ಸ.ನಂ. 32/1ರಲ್ಲಿ 4 ಎಕರೆ 36 ಗುಂಟೆ ಹಾಗೂ ಬೆಟಸೂರ ಗ್ರಾಮದ ರಿ.ಸ.ನಂ. 613ರಲ್ಲಿ 2 ಎಕರೆ 09 ಗುಂಟೆ ಒಟ್ಟು 8 ಎಕರೆ 26 ಗುಂಟೆ ಜಮೀನನ್ನು ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ಇವರಿಗೆ 10.5 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 30 ವರ್ಷ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ .–

ಓದಲಾಗಿದೆ: ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಪತ್ರ ಸಂಖ್ಯೆ: ಪ್ರಾಆಬೆ:ಭೂಮಿ:4:ಎಲ್‌ಜಿಎಲ್:40:2010–11, ದಿನಾಂಕ 7–12–2011.

ಪ್ರಸ್ತಾವನೆ:

ಮೇಲೆ ಓದಲಾದ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ದಿನಾಂಕ 7–12–2011ರ ಪತ್ರದಲ್ಲಿ ಬೆಳಗಾವಿ ಜಿಲ್ಲೆ. ಸವದತ್ತಿ ತಾಲ್ಲೂಕಿನ ಯಡ್ರಾವಿ ಗ್ರಾಮದ ಗಾಯರಾಣ ರಿ.ಸ.ನಂ. 527/ಎ ರಲ್ಲಿ 1 ಎಕರೆ 21 ಗುಂಟೆ, ರಿ.ಸ.ನಂ. 32/1 ರಲ್ಲಿ 4 ಎಕರೆ 36 ಗುಂಟೆ ಹಾಗೂ ಬೆಟಸೂರ ಗ್ರಾಮದ ರಿ.ಸ.ನಂ. 613ರಲ್ಲಿ 2 ಎಕರೆ 09 ಗುಂಟೆ ಒಟ್ಟು 8 ಎಕರೆ 26 ಗುಂಟೆ ಜಮೀನನ್ನು ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ಇವರಿಗೆ 91 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 30 ವರ್ಷ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ಇವರಿಗೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಜಮೀನು ಯಡ್ರಾವಿ ಗ್ರಾಮದ ರಿ.ಸ.ನಂ. 527/ಎ ರಲ್ಲಿ 1 ಎಕರೆ 21 ಗುಂಟೆ, ರಿ.ಸ.ನಂ. 32/1 ರಲ್ಲಿ 4 ಎಕರೆ 36 ಗುಂಟೆ ರಲ್ಲಿನ ಆರ್‌ಟಿಸಿಯ ಕಾಲಂ 9ರಲ್ಲಿ **"ಮಾವುತ ಗಾಯರಾಣ"** ಎಂಬುದಾಗಿ ವರ್ಗೀಕೃತಗೊಂಡಿದ್ದು, ಒಟ್ಟು 176–12 ಎಕರೆ, ಅದರಂತೆ ರಿ.ಸ.ನಂ. 32/1ರಲ್ಲಿ 131–18 ಎಕರೆ ಇರುತ್ತದೆ ಹಾಗೂ ಬೆಟಸೂರು ಗ್ರಾಮದ ರಿ.ಸ.ನಂ. 613ರಲ್ಲಿ 2–09 ಎಕರೆ ಆರ್‌ಟಿಸಿಯ ಕಾಲಂ 9ರಲ್ಲಿ ಗಾಯರಾಣ ಎಂಬುದಾಗಿ ವರ್ಗಿಕೃತಗೊಂಡಿದ್ದು ಒಟ್ಟು 231–17 ಎಕರೆ ಜಮೀನು ಇರುತ್ತದೆ. ಈ ಜಮೀನುಗಳ ಪೈಕಿ ಒಟ್ಟು 8 ಎಕರೆ 26 ಗುಂಟೆ ಜಮೀನನ್ನು ಸಂಸ್ಥೆಯವರಿಗೆ ಗುತ್ತಿಗೆ ನೀಡಲು ಪ್ರಸ್ತಾಪಿಸಲಾಗಿದೆ.

ಗ್ರಾಮದ ಜಮೀನುಗಳು ಕಲ್ಲು ಬಂಡೆ, ಗುಡ್ಡಗಳಿಂದ ಕೂಡಿದ್ದು, ಈ ಜಮೀನುಗಳಲ್ಲಿ ಯಾವುದೇ ವಿದ್ಯುತ್ ಕಂಬಗಳು ಇರುವುದಿಲ್ಲ ಮತ್ತು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವುದಿಲ್ಲ. ಈ ಜಮೀನುಗಳು ಗಾಳಿ ಯಂತ್ರಗಳನ್ನು ಅಳವಡಿಸಲು ಸೂಕ್ತವಾಗಿದ್ದು, ಇಲ್ಲಿ ಜಾನುವಾರುಗಳಿಗೆ ಮೇಯಲು ಯೋಗ್ಯವಿರುವುದಿಲ್ಲ. ಅಲ್ಲದೇ ಗ್ರಾಮಗಳಲ್ಲಿ ನೀರಾವರಿ ಜಮೀನುಗಳು ಇರುವುದರಿಂದ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗುವುದಿಲ್ಲ ಹಾಗೂ ಜಮೀನಿನಲ್ಲಿ ಯಾವುದೇ ಬೆಲೆ ಬಾಳುವ ಗಿಡ ಮರ, ಕಟ್ಟಡಗಳು ಇರುವುದಿಲ್ಲ ಮತ್ತು ಈ ಜಮೀನು ಅತಿಕ್ರಮಣದಿಂದ ಮುಕ್ತವಿರುತ್ತದೆ. ದಿನಾಂಕ 6–4–2011 ರಂದು ಬೆಟಸೂರ ಗ್ರಾಮ ಪಂಚಾಯತ್ ಸಭೆಯಲ್ಲಿ ಪ್ರಸ್ತುತ ಜಮೀನನ್ನು ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ಇವರಿಗೆ ಪವನ ವಿದ್ಯುತ್ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಕುರಿತು ಸರ್ವಾನುಮತದಿಂದ ಠರಾವು ಪಾಸು ಮಾಡಿರುತ್ತಾರೆ. ಇಂಧನ ಇಲಾಖೆಯ ಆದೇಶ ಸಂಖ್ಯೆ ಇಂಇ/230/ಎನ್‌ಸಿಇ/2004, ದಿನಾಂಕ 13–9–2004 ರನ್ವಯ ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ಇವರಿಗೆ ಬೆಳಗಾಂ ಜಿಲ್ಲೆಗಳಲ್ಲಿ 91 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡಿ ಆದೇಶ ನೀಡಿರುವುದರಿಂದ ಪ್ರಸ್ತಾಪಿತ 8 ಎಕರೆ 26 ಗುಂಟೆ ಜಮೀನುಗಳನ್ನು ಪವನ್ ವಿದ್ಯುತ್ ಯಂತ್ರಗಳನ್ನು ಅಳವಡಿಸುವ ಸಲುವಾಗಿ ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಾದೇಶಿಕ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಕಂಇ 89 ಎಲ್‌ಜಿಎಲ್ 2011, ಬೆಂಗಳೂರು, ದಿನಾಂಕ 13–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಯಡ್ರಾವಿ ಗ್ರಾಮದ ಗಾಯರಾಣ ರಿ.ಸ.ನಂ. 527/ಎ ರಲ್ಲಿ 1 ಎಕರೆ 21 ಗುಂಟೆ, ರಿ.ಸ.ನಂ. 32/1 ರಲ್ಲಿ 4 ಎಕರೆ 36 ಗುಂಟೆ ಹಾಗೂ ಬೆಟಸೂರ ಗ್ರಾಮದ ರಿ.ಸ.ನಂ. 613ರಲ್ಲಿ 2 ಎಕರೆ 09 ಗುಂಟೆ ಹೀಗೆ ಒಟ್ಟು 8 ಎಕರೆ 26 ಗುಂಟೆ ಜಮೀನನ್ನು ಪ್ರಚಲಿತ ಮಾರುಕಟ್ಟೆ ದರದ ಶೇ. 10 ರಷ್ಟು ಹಾಗೂ 2 ವರ್ಷಗಳಿಗೊಮ್ಮೆ ಶೇ. 10 ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರನ್ವಯ ಗಾಯರಾಣ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19(4)(ಬಿ)ರನ್ವಯ 30 ವರ್ಷಗಳ ಅವಧಿಗೆ 10.5 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಸ್ಥಾಪಿಸುವ ಉದ್ದೇಶಕ್ಕಾಗಿ ಮೆ॥ ಸುಜಲಾನ ಎನರ್ಜಿ ಲಿಮಿಟೆಡ್ ಬೆಂಗಳೂರು ರವರಿಗೆ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಷರತ್ತನ್ನು ವಿಧಿಸಿ ಸರ್ಕಾರದ ಅನುಮತಿನೀಡಿ ಆದೇಶಿಸಲಾಗಿದೆ.

1) ಉದ್ದೇಶಿತ ಜಮೀನನ್ನು ಯಾವ ಉದ್ದೇಶಕ್ಕಾಗಿ ಗುತ್ತಿಗೆ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.

2) ಸದರಿ ಜಮೀನನ್ನು ಗುತ್ತಿಗೆ ನೀಡಿದ ದಿನದಿಂದ 2 ವರ್ಷಗಳ ಒಳಗಾಗಿ ಉಪಯೋಗಿಸತಕ್ಕದ್ದು

3) ಸದರಿ ಜಮೀನಿನಲ್ಲಿ ಯಾವುದೇ ರೀತಿ ಅತಿಕ್ರಮಣವಾಗದಂತೆ ನೋಡಿಕೊಳ್ಳತಕ್ಕದ್ದು

4) ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಸದರಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:190:ವೆಚ್ಚ–7/2012, ದಿನಾಂಕ 2–3–2012ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಜೆ. ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್. 935

ಕಂದಾಯ ಸಚಿವಾಲಯ

ವಿಷಯ : ಡಾ॥ ಪ್ರಶಾಂತ ಭೀಮಾಶಂಕರ್ ನಾಲ್ವಾರ, ತಹಶೀಲ್ದಾರ್ (ಹಾಲಿ ಅಮಾನತ್ತಿನಲ್ಲಿ) ಇವರ ವಿರುದ್ಧ ದಾಖಲಾದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ: (1) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐ.ಎನ್‌ವಿ(ಜಿ)/ಎಲ್–34/ಸಿಆರ್–8/2011/ಹಾವೇರಿ, ದಿನಾಂಕ 18–11–2011.

(2) ತನಿಖಾಧಿಕಾರಿಯ ವರದಿ ಸಂಖ್ಯೆ: 08/2011, ದಿನಾಂಕ 10–11–2011.

(3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ :

1. ಡಾ॥ ಪ್ರಶಾಂತ ಭೀಮಾಶಂಕರ್ ನಾಲ್ವಾರ, ತಹಶೀಲ್ದಾರ್ (ಹಾಲಿ ಅಮಾನತ್ತಿನಲ್ಲಿ) ಇವರ ವಿರುದ್ಧ ಮೊಕದ್ದಮೆ ಸಂಖ್ಯೆ: 08/2011ರಲ್ಲಿ ಕರ್ನಾಟಕ ಲೋಕಾಯುಕ್ತ, ಹಾವೇರಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಮೇಲೆ (1)ರಲ್ಲಿ ಓದಲಾದ ದಿನಾಂಕ 18–11–2011ರ ಪತ್ರದೊಂದಿಗೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರಕ್ಕೆ ಕಳುಹಿಸುತ್ತಾ, ಆಪಾದಿತರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)ಡಿ ಸಹವಾಚನ ಕಲಂ 13 (2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ–1988ರ 19(1)(ಬಿ)ರ ಕಲಂ ಅಡಿಯಲ್ಲಿ ಸರ್ಕಾರದ ಮಂಜೂರಾತಿ ನೀಡಲು ಕೋರಿರುತ್ತಾರೆ.

2. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಪರಿಶೀಲಿಸಿದೆ:–

1) ಶ್ರೀ ಮಾರುತೆಪ್ಪ ರಾಮಕೃಷ್ಣಪ್ಪ ಪವಾರ, ಸಾ: ಡಂಬರಮತ್ತೂರು, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ ರವರ ಫಿರ್ಯಾದಿ ದಿನಾಂಕ 19–05–2011.

2) ಪ್ರಥಮ ವರ್ತಮಾನ ವರದಿ ಕರ್ನಾಟಕ ಲೋಕಾಯುಕ್ತ, ಹಾವೇರಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 8/2011.
3) ವಹಿಸುವಿಕೆ ಪಂಚನಾಮೆ ದಿನಾಂಕ 19–05–2011.
4) ಜಪ್ತಿ ಪಂಚನಾಮೆ ದಿನಾಂಕ 21–05–2011.
5) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಎಲ್.ವಾಯ್.ಕೆ./ಸಿಇ/ಡಬ್ಲ್ಯೂಡಿ/18/2011, ದಿನಾಂಕ 10–08–2011.
6) ಕೃತ್ಯ ನಡೆದ ಸ್ಥಳದ ನಕಾಶೆ.
7) ಈ ಕೆಳಕಂಡ ಸಾಕ್ಷಿದಾರರ ಹೇಳಿಕೆಗಳು:–
   (1) ಶ್ರೀ ಮಾರುತೆಪ್ಪ ರಾಮಕೃಷ್ಣಪ್ಪ ಪವಾರ ಇವರ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ (ಫಿರ್ಯಾದಿ)
   (2) ಶ್ರೀ ನಾಗಪ್ಪ ಬಸಪ್ಪ ದೋರಳ್ಳಿ (ಪಂಚಸಾಕ್ಷಿ–1)
   (3) ಶ್ರೀ ಜಗದೀಶ ಶಂಕರಯ್ಯ ಮಠದ
   (4) ಕು: ಗಂಗಾ ತಂದೆ ಶೇಕರಗೌಡ ಅಂದಾನಗೌಡ್ರ
   (5) ಶ್ರೀ ಶಿವಶಂಕರಗೌಡ ತಿಪ್ಪನಗೌಡ ಪಾಟೀಲ
   (6) ಶ್ರೀ ರಮೇಶ ಲಕ್ಷ್ಮಣ ನಾಯಕ
   (7) ಶ್ರೀ ಸುರೇಶ ಬಾಲಚಂದ್ರ ಇಟನಾಳ
   (8) ಶ್ರೀ ಶಿವಾನಂದ ನಿಂಗಪ್ಪ ಇಚ್ಚಂಗಿ
   (9) ಶ್ರೀ ಬಸೀರ್‌ಖಾನ್ ಉಸ್ಮಾನ್‌ಖಾನ್ ಪಠಾಣ
   (10) ಶ್ರೀ ವಿನಾಯಕ ಅನಂತರಾವ್ ಕುಲ್ಕರ್ಣಿ
   (11) ಶ್ರೀ ರಾಮಪ್ಪ ಹನುಮಂತಪ್ಪ ದೊಡ್ಡಮನಿ
   (12) ಶ್ರೀ ಎಸ್.ಬಿ. ಬಸವನಾಯ್ಕರ, ಮು.ಪೇ.
   (13) ಶ್ರೀ ನಿಂಗಪ್ಪ ಗುಡ್ಡಪ್ಪ ಕನವಳ್ಳಿ, ಮು.ಪೇ.
   (14) ಶ್ರೀ ಎಂ.ಡಿ. ಮಡಿವಾಳರ, ಮು.ಪೇ. ಕರ್ನಾಟಕ ಲೋಕಾಯುಕ್ತ
   (15) ಶ್ರೀ ಎಸ್.ಎನ್. ಹಿರೇಮಠ, ಪೇದೆ, ಕರ್ನಾಟಕ ಲೋಕಾಯುಕ್ತ
   (16) ಶ್ರೀ ಕೆ.ಎಂ. ಹಿರೇಮಠ, ಪೇದೆ, ಕರ್ನಾಟಕ ಲೋಕಾಯುಕ್ತ
   (17) ಶ್ರೀ ಹೊನ್ನಪ್ಪ ಅಡಿವೆಪ್ಪ ಬಮ್ಮಕ್ಕನವರ, ಪೇದೆ, ಕರ್ನಾಟಕ ಲೋಕಾಯುಕ್ತ
8) ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳು ಫಿರ್ಯಾದುದಾರರು ದಿ: 11.02.2011 ರಂದು ಕೃಷಿ ಕಾರ್ಮಿಕ ದೃಢೀಕರಣ ಕೋರಿ ನೆಮ್ಮದಿ ಕೇಂದ್ರಕ್ಕೆ ಸಲ್ಲಿಸಿದ ಅರ್ಜಿ ಹಾಗೂ ಲಗತ್ತುಗಳು.
9) ಆಪಾದಿತರಾದ ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರ ಸಮಜಾಯಿಷಿ ಹೇಳಿಕೆ.

3. ತನಿಖಾಧಿಕಾರಿಗಳಾದ ಶ್ರೀ ಬಿ.ಸಿ. ಉಮಾಪತಿ ಮತ್ತು ಆರಕ್ಷಕ ನಿರೀಕ್ಷಕರುಗಳು ಕರ್ನಾಟಕ ಲೋಕಾಯುಕ್ತ, ಹಾವೇರಿ ಇವರು ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಹಾವೇರಿ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 08/2011ರಲ್ಲಿ ಭ್ರಷ್ಟಾಚಾರ ನಿರೋಧಕ ಕಾಯ್ದೆ–1988ರ ಕಲಂ 7, 13(1)ಡಿ ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

4. ಆಪಾದಿತರಾದ ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರು ಫಿರ್ಯಾದಿಯಾದ ಶ್ರೀ ಮಾರುತೆಪ್ಪ ರಾಮಕೃಷ್ಣಪ್ಪ ಪವಾರ ಇವರು ಹೊಲವನ್ನು ಖರೀದಿ ಮಾಡಿದ್ದು, ಅದನ್ನು ತನ್ನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಳ್ಳಲು ಕೃಷಿ ಕಾರ್ಮಿಕ ಎಂಬ ದೃಢೀಕರಣ ಪತ್ರವನ್ನು ಕೊಡುವಂತೆ ಉಪನೊಂದಣಿ ಕಛೇರಿಯ ಅಧಿಕಾರಿಗಳು ತಿಳಿಸಿದಂತೆ ಫಿರ್ಯಾದಿಯ ಕೃಷಿ ಕಾರ್ಮಿಕ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿ ಆಪಾದಿತನಿಗೆ ನೆಮ್ಮದಿ ಕೇಂದ್ರ ಮೂಲಕ ಅರ್ಜಿ ಕೊಟ್ಟಿದ್ದ ಸ್ವಲ್ಪ ದಿನಗಳ ನಂತರ ಆಪಾದಿತರನ್ನು ಭೇಟಿ ಮಾಡಿದಾಗ ಆಪಾದಿತರು ಕೃಷಿ ಕಾರ್ಮಿಕ ಪತ್ರವನ್ನು ತಾವೇ ಮಾಡಿಕೊಡುತ್ತೇನೆಂದು ರೂ. 10,000/– ಗಳ ಲಂಚದ ಬೇಡಿಕೆ ಇಟ್ಟು ಕೊನೆಗೆ ಮಾತುಕತೆಯಾಗಿ ರೂ. 6,000/– ಗಳ ಲಂಚದ ಹಣ ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಟ್ರ್ಯಾಪ್ ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಸಿದ್ದತಾ ಕಾರ್ಯಗಳನ್ನು ನೆರವೇರಿಸಿದ ನಂತರ ದಿನಾಂಕ 21–05–2011ರಂದು ತಹಶೀಲ್ದಾರರ ಕಛೇರಿ, ಸವಣೂರು, ಹಾವೇರಿ ಜಿಲ್ಲೆ ಇಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರು ಅಕ್ರಮ ಸಂಭಾವನೆಯಾದ ಆರು ಸಾವಿರ ರೂಪಾಯಿಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಿಕೊಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಹಣವನ್ನು ಇಟ್ಟ ಟೇಬಲ್ ಕ್ಲಾಥನ ಭಾಗ ಮತ್ತು ಹಣದ ಮೇಲೆ ಮುಚ್ಚಿದ ತಹಶೀಲ್ದಾರರ ಡೈರಿಯ ಹಿಂಭಾಗವನ್ನು ಹತ್ತಿ ತುಣಿಕಿನಿಂದ ಒರೆಸಿ ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ಆಪಾದಿತರು ಹಣವನ್ನು ತನ್ನ ಟೇಬಲ್ ಮೇಲೆ ಇಡಲು ಹೇಳಿ ಪಿರ್ಯಾದಿ ಲಂಚದ ಹಣ ಇಟ್ಟ ನಂತರ ತಮ್ಮ ಡೈರಿಯನ್ನು ಹಣದ ಮೇಲೆ ಆಪಾದಿತರೇ ಇಟ್ಟಿರುವುದು ದೃಡಪಟ್ಟಿರುವುದು ಸ್ಪಷ್ಟವಾಗುತ್ತದೆ. ಅಕ್ರಮ ಸಂಭಾವನೆ ಆರು ಸಾವಿರ ರೂಪಾಯಿಗಳನ್ನು ಡಾ॥ ಪ್ರಶಾಂತ

ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರಿಂದ ತಹಶೀಲ್ದಾರರ ಕಛೇರಿ, ಸವಣೂರ, ಹಾವೇರಿ ಜಿಲ್ಲೆ ಇಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

5. ಹೆಚ್ಚುವರಿ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತನಿಖಾ ವರದಿಯೊಂದಿಗೆ ಸರ್ಕಾರಕ್ಕೆ ಕಳುಹಿಸಲಾದ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರು ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯಾಗಿದ್ದು, ಫಿರ್ಯಾದಿಯು ಕೃಷಿ ಕಾರ್ಮಿಕ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿ ನೆಮ್ಮದಿ ಕೇಂದ್ರ ಮೂಲಕ ಅರ್ಜಿ ಸಲ್ಲಿಸಿದ್ದರ ಸಂಬಂಧ ಆಪಾದಿತರು ಕೃಷಿ ಕಾರ್ಮಿಕ ಪತ್ರವನ್ನು ತಾವೇ ಮಾಡಿಕೊಡುತ್ತೇನೆಂದು ರೂ. 10,000/–ಗಳ ಲಂಚದ ಬೇಡಿಕೆ ಇಟ್ಟು ಕೊನೆಗೆ ಮಾತುಕತೆಯಾಗಿ ರೂ. 6,000/–ಗಳ ಲಂಚದ ಹಣ ಸ್ವೀಕರಿಸುತ್ತಿದ್ದಾಗ ಹಾವೇರಿ ಲೋಕಾಯುಕ್ತ ಪೋಲಿಸರು ಬೀಸಿದ ಬಲೆಗೆ ಸಿಲುಕಿ ನಂತರ ಬಂಧನಕ್ಕೊಳಗಾಗಿರುವ ಅಂಶವನ್ನು ಸರ್ಕಾರವು ಗಮನಿಸಿದೆ.

6. ಈ ಎಲ್ಲಾ ಕಾರಣಗಳಿಂದ ಆಪಾದಿತರು ಭ್ರಷ್ಟಾಚಾರ ನಿರೋಧ ಕಾಯ್ದೆ–1988ರ ಕಲಂ 7, 13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಭ್ರಷ್ಟಾಚಾರ ನಿರೋಧ ಕಾಯ್ದೆ–1988ರ ಅನ್ವಯ ಕಲಂ 7, 13(1)(ಡಿ) ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕ ಎಂದು ಸರ್ಕಾರ ಮನಗಂಡಿದೆ.

7. ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತವನ್ನು ಹುದ್ದೆಯಿಂದ ತೆಗೆದು ಹಾಕಲು ಅಧಿಕಾರವುಳ್ಳದ್ದಾಗಿರುತ್ತದೆ. ಆದ್ದರಿಂದ ಭ್ರಷ್ಟಾಚಾರ ನಿರೋಧ ಕಾಯ್ದೆ–1988ರ ಕಲಂ 19(1)(ಬಿ)ರ ಅಡಿ ಆಪಾದಿತ ಸಾರ್ವಜನಿಕ ಅಧಿಕಾರಿ ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರನ್ನು ಕಲಂ 7 ಮತ್ತು 13(1)(ಡಿ) ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 29 ಎಡಿಇ 2011, ಬೆಂಗಳೂರು, ದಿನಾಂಕ: 02–03–2012

8. ಆರೋಪಿಯಾದ ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರನ್ನು ಹುದ್ದೆಯಿಂದ ತೆಗೆದು ಹಾಕುವ (ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಡಾ॥ ಪ್ರಶಾಂತ ಭೀಮಾಶಂಕರ್ ನಾಲವಾರ, ತಹಶೀಲ್ದಾರ (ಹಾಲಿ ಅಮಾನತ್ತಿನಲ್ಲಿ) ಇವರನ್ನು ಭ್ರಷ್ಟಾಚಾರ ನಿರೋಧ ಕಾಯ್ದೆ–1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಮಂಜೂರಾತಿಯನ್ನು ನೀಡಿದೆ.

9. ಮುಂದುವರೆದು, ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977 ರ ನಿಯಮ 18 ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಅಥವಾ ಲೇಖನಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕು ಅಥವಾ ಹೊರಡಿಸುವಂತೆ ಮಾಡಬೇಕು.

10. ಅದೇ ನಿಯಮಾವಳಿಯ ನಿಯಮ 19(1) ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿದ ಆದೇಶಗಳು ಮತ್ತು ಲೇಖನಗಳು ಒಬ್ಬ ಅಧೀನ ಕಾರ್ಯದರ್ಶಿಯ ಸಹಿಯಿಂದ ಅಧಿಕೃತಗೊಳ್ಳಬೇಕು ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

11. ಆದ್ದರಿಂದ, ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977 ರ ಈ ಮೇಲ್ಕಂಡ ಆದೇಶವನ್ನು ದಿನಾಂಕ: 04.02.2012 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಪಿ.ಆರ್. 936

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ಲಕ್ಷ್ಮಣ್‌ಸಿಂಗ್, ಹಿಂದಿನ ತಹಶೀಲ್ದಾರ್, ಬಳ್ಳಾರಿ ಪ್ರಸ್ತುತ ವಿಶೇಷ ತಹಶೀಲ್ದಾರ್, ಕುರುಗೋಡು, ಬಳ್ಳಾರಿ ತಾಲ್ಲೂಕು ಇವರು ಬೆಳಗಲ್ಲು ಗ್ರಾಮದ ಜಮೀನನ್ನು ಭೂ ಸುಧಾರಣೆ ಕಾಯ್ದೆ ಉಲ್ಲಂಘನೆ ಗಣಿ ಪರವಾನಿಗೆ ನೀಡಿರುವ ಆಪಾದನೆ ವಿರುದ್ಧ ಇಲಾಖಾ ವಿಚಾರಣೆ ಬಗ್ಗೆ.

ಓದಲಾಗಿದೆ:
1) ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಪತ್ರ ಸಂ:ಸಿಬ್ಬಂದಿ–1/ಇವಿ–25/2006–07, ದಿನಾಂಕ: 30.08.2006 (ಪುಟ 9),
2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಆರ್‌ಡಿ 74 ಎಡಿಇ 2004, ದಿನಾಂಕ: 12/17.01.2007 (ಪುಟ 18)
3) ಶ್ರೀ ಎಂ. ಲಕ್ಷ್ಮಣ್‌ಸಿಂಗ್ ಇವರ ರಕ್ಷಣಾ ಹೇಳಿಕೆ ರವರ ದಿನಾಂಕ: 05.02.2007 ಮತ್ತು 26.02.2007 (ಪುಟ 37)
4) ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ:ಆರ್‌ಡಿ 74 ಎಡಿಇ 2006, ದಿನಾಂಕ: 30.08.2008 (ಪುಟ 60)
5) ವಿಚಾರಣಾಧಿಕಾರಿಗಳ ವರದಿ ದಿನಾಂಕ: 20.03.2010 (ಪುಟ 74–67)

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರಲ್ಲಿ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ದಿನಾಂಕ: 30.08.2006 ರ ಪ್ರಸ್ತಾವನೆಯಲ್ಲಿ, ಶ್ರೀ ಎಂ. ಲಕ್ಷ್ಮಣ್‌ಸಿಂಗ್, ತಹಶೀಲ್ದಾರ್, ಬಳ್ಳಾರಿ ಇವರು ಬೆಳಗಲ್ಲು ಗ್ರಾಮಕ್ಕೆ ಸೇರಿದ ಸರ್ವೆ ಸಂ. 118, 119 ಮತ್ತು 120 ವಿಸ್ತೀರ್ಣ 17–45 ಎಕರೆ ಜಮೀನುಗಳಿಗೆ ಶ್ರೀ ಆರ್. ಕಮಲ್‌ಕುಮಾರ್ ಇವರು ಗಣಿಗಾರಿಕೆ ಮಾಡಲು ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಿದ್ದು, ಕಂದಾಯ ಇಲಾಖೆಯ ಅಭಿಪ್ರಾಯ ಕೋರಿದಾಗ, ಶ್ರೀ ಎಂ. ಲಕ್ಷ್ಮಣ್‌ಸಿಂಗ್, ತಹಶೀಲ್ದಾರ್, ಬಳ್ಳಾರಿ ಇವರು ಕಂದಾಯ ದಾಖಲೆ ಆರ್‌ಟಿಸಿ ಪ್ರಕಾರ ಮೇಲ್ಕಂಡ ಜಮೀನುಗಳೆಲ್ಲಾ ವ್ಯವಸಾಯ ಜಮೀನುಗಳಾಗಿರುತ್ತವೆಂದು ಭೂ ಮಾಲೀಕರು ಬೇರೆ ಬೇರೆ ವ್ಯಕ್ತಿಗಳಿದ್ದು, ಶ್ರೀ ಆರ್. ಕಮಲ್‌ಕುಮಾರ್ ಇವರಿಗೆ ಲೀಸ್ ಡೀಡ್ ಮೂಲಕ ಜಮೀನುಗಳನ್ನು ಹೊಂದಿರುವುದಾಗಿ ತಿಳಿಸಿ, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರ ಕಲಂ 58 ರ ಅನ್ವಯ ವ್ಯವಸಾಯ ಜಮೀನುಗಳನ್ನು ಗುತ್ತಿಗೆ ನೀಡುವುದು ನಿರ್ಭಂದಿಸಿದೆ. ಹಾಲಿ ಲೀಸ್ ಡೀಡ್‌ನಿಂದ ಭೂ ಸುಧಾರಣಾ ಕಾಯ್ದೆ ಉಲ್ಲಂಘನೆಯಾಗಿರುತ್ತದೆ. ಸದರಿಯವರು ಗಣಿ ಪರವಾನಗಿ ಕೋರಿ ಸಲ್ಲಿಸಿದ ಅರ್ಜಿಗೆ ನಿರಾಕ್ಷೇಪಣೆ ನೀಡಲು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಶಿಫಾರಸ್ಸು ಮಾಡಿ ಕರ್ತವ್ಯಲೋಪ ಎಸಗಿರುವುದರಿಂದ, ಸದರಿ ಅಧಿಕಾರಿಯ ವಿರುದ್ಧ 1957 ರ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ನಿಯಮಗಳನ್ವಯ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (2) ರಲ್ಲಿ ದಿನಾಂಕ: 12/17/01.2007 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11 ರಡಿಯಲ್ಲಿ ದೋಷಾರೋಪಣೆಗಳನ್ನು ಅನುಬಂಧ 1 ರಿಂದ 4 ರವರೆಗೆ ಕಾರಣ ಕೇಳುವ ನೋಟೀಸಿನೊಂದಿಗೆ ಶ್ರೀ ಎಂ. ಲಕ್ಷ್ಮಣ್‌ಸಿಂಗ್, ತಹಶೀಲ್ದಾರ್, ಬಳ್ಳಾರಿ ಇವರಿಗೆ ಜಾರಿ ಮಾಡಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (3) ರಲ್ಲಿ ಶ್ರೀ ಎಂ. ಲಕ್ಷ್ಮಣ್‌ಸಿಂಗ್, ತಹಶೀಲ್ದಾರ್, ಕುರುಗೋಡು ಇವರು ರಕ್ಷಣಾ ಹೇಳಿಕೆ ಸಲ್ಲಿಸಿ ಆರೋಪಗಳಿಂದ ದೋಷಮುಕ್ತಗೊಳಿಸುವಂತೆ, ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (4) ರಲ್ಲಿ ಈ ಪ್ರಕರಣದಲ್ಲಿ ದಿನಾಂಕ: 30.08.2008 ರಂದು ಶ್ರೀ ಬಿ.ಎಲ್. ಶ್ರೀಕಂಠಯ್ಯ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು (ನಿವೃತ್ತ) ಇವರನ್ನು ವಿಚಾರಣಾಧಿಕಾರಿಯನ್ನಾಗಿ ಇಲಾಖಾ ವಿಚಾರಣೆ ನಡೆಸಲು ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (5) ರಲ್ಲಿ ವಿಚಾರಣಾಧಿಕಾರಿಗಳು, ಈ ಕೆಳಗಿನಂತೆ ಸರ್ಕಾರಕ್ಕೆ ವರದಿ ನೀಡಿದ್ದು, "ಶ್ರೀ ಎಂ. ಲಕ್ಷ್ಮಣ್‌ಸಿಂಗ್, ವಿಶೇಷ ತಹಶೀಲ್ದಾರ್, ಬಳ್ಳಾರಿ ಇವರು ಹಿಂದೆ 2006ನೇ ಸಾಲಿನಲ್ಲಿ ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಬಳ್ಳಾರಿ ತಾಲ್ಲೂಕು, ಬೆಳಗಲ್ ಗ್ರಾಮಕ್ಕೆ ಸೇರಿದ ಸರ್ವೆ ನಂ. 118, 119, 120 ರಲ್ಲಿ 17.45 ಎಕರೆ ವಿಸ್ತೀರ್ಣದ ವ್ಯವಸಾಯದ ಜಮೀನುಗಳಲ್ಲಿ ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರ ನೀಡಲು ಶಿಫಾರಸ್ಸು ಮಾಡಿ ಕರ್ತವ್ಯ ಲೋಪ ಎಸಗಿರುವ ಬಗ್ಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಕಲಂ 58 ರನ್ವಯ ಭೂ ಮಾಲೀಕರ ಸದರಿ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ತಮ್ಮ ವಾದದಲ್ಲಿ ತಿಳಿಸಿದ್ದು ಆಪಾದಿತರ ವರದಿಯ ಆಧಾರದ ಮೇಲೆ, ಜಿಲ್ಲಾಧಿಕಾರಿ, ಬಳ್ಳಾರಿ ಇವರು ಅರ್ಜಿದಾರರು ಕೋರಿದ ಗಣಿಗಾರಿಕೆ ಪರವಾನಿಗೆ ಅರ್ಜಿಯನ್ನು ತಿರಸ್ಕರಿಸಲು ಸರ್ಕಾರಕ್ಕೆ ವರದಿ ಸಲ್ಲಿಸಿ ಪ್ರಕರಣ ಮುಕ್ತಾಯವಾಗಿದೆ ಎಂದು ಜಿಲ್ಲಾಧಿಕಾರಿಗಳು ತಮ್ಮ ಲಿಖಿತ ವಾದದಲ್ಲಿ ತಿಳಿಸಿರುವುದರಿಂದ ಆಪಾದಿತ ವಿರುದ್ಧ ಆಪಾದನೆ ಸಾಬೀತಾಗಿಲ್ಲವೆಂದು ವರದಿ ನೀಡಿರುತ್ತಾರೆ.

ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯ ಹಿನ್ನೆಲೆಯಲ್ಲಿ ಶ್ರೀ ಲಕ್ಷ್ಮಣ್‌ಸಿಂಗ್, ವಿಶೇಷ ತಹಶೀಲ್ದಾರ್, ಕುರುಗೋಡು ಇವರ ವಿರುದ್ಧದ ಆಪಾದನೆಗಳು ಸಾಬೀತಾಗಿಲ್ಲವಾದ್ದರಿಂದ ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶ ಹೊರಡಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 74 ಎಡಿಇ 2006, ಬೆಂಗಳೂರು, ದಿನಾಂಕ: 27–02–2012

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ. ಲಕ್ಷ್ಮಣ್‌ಸಿಂಗ್, (ಹಿಂದಿನ ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು) ವಿಶೇಷ ತಹಶೀಲ್ದಾರ್, ಕುರುಗೋಡು ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಆಪಾದನೆಗಳು ಸಾಬೀತಾಗಿಲ್ಲದ ಕಾರಣ ಅವರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ.

ಶ್ರೀ ಎಂ. ಲಕ್ಷ್ಮಣ್‌ಸಿಂಗ್, (ಹಿಂದಿನ ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು) ವಿಶೇಷ ತಹಶೀಲ್ದಾರ್, ಕುರುಗೋಡು ಇವರು ಸದರಿ ಇಲಾಖಾ ವಿಚಾರಣೆ ನಡೆಯದಿದ್ದರೆ ಯಾವ ಸೌಲಭ್ಯಗಳನ್ನು ಪಡೆಯುತ್ತಿದ್ದರೊ ಆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 937

ಕಂದಾಯ ಸಚಿವಾಲಯ

ವಿಷಯ : ಶ್ರೀ ರಂಗನಾಥಯ್ಯ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರ ವಿರುದ್ಧದ ಭ್ರಷ್ಟಾಚಾರ ಬಗ್ಗೆ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ: ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)ಸಿಟಿ/ಕ್ರೈಂ/55/2011 ದಿನಾಂಕ: 8–3–2012.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ: 8–3–2012 ರ ಪತ್ರದಲ್ಲಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರಕ್ಕೆ ಪತ್ರ ಬರೆದು, ಫಿರ್ಯಾದುದಾರರಾದ ಶ್ರೀ ಪುಟ್ಟಸ್ವಾಮಿ, ಕೆರೆಗುಡ್ಡದಹಳ್ಳಿ, ಚಿಕ್ಕಬಾಣಾವರ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇವರು ಆರೋಪಿ–1 ಶ್ರೀ ಎಸ್. ಮುನಿರಾಜು, ವಿಧಾನಸಭಾ ಸದಸ್ಯರು, ದಾಸರಹಳ್ಳಿ, ವಿಧಾನಸಭೆ, ಬೆಂಗಳೂರು ಆರೋಪಿ–2 ಶ್ರೀ ರಂಗನಾಥಯ್ಯ, ವಿಶೇಷ ತಹಶೀಲ್ದಾರ್, ತಾಲ್ಲೂಕು ಕಛೇರಿ, ರಾಮನಗರ, ಆರೋಪಿ–3 ಶ್ರೀ ಸುರೇಶ್, ರಾಜಸ್ವ ನಿರೀಕ್ಷಕರು, ಬೆಂಗಳೂರು ಉತ್ತರ ತಾಲ್ಲೂಕು, ಆರೋಪಿ–4 ಶ್ರೀ ಕೆ.ಎಂ. ಪರಮೇಶ್ವರ ಹಾಗೂ ಆರೋಪಿ–5 ಶ್ರೀಮತಿ ರಾಜಮ್ಮ ಇವರುಗಳ ವಿರುದ್ಧ ನಗರದ 23ನೇ ಹೆಚ್ಚುವರಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದಲ್ಲಿ ಖಾಸಗಿ ದೂರು ಅರ್ಜಿ ಸಂಖ್ಯೆ: 24/2011 ನ್ನು ದಾಖಲಿಸಿದ್ದು, ಸದರಿ ಖಾಸಗಿ ದೂರನ್ನು ಪರಿಶೀಲಿಸಿದ ಘನ ನ್ಯಾಯಾಲಯವು ತನ್ನ ದಿನಾಂಕ: 4–11–2011 ರ ಆದೇಶದಲ್ಲಿ, ಸದರಿ ದೂರನ್ನು ಸಿಆರ್‌ಪಿಸಿಯ ಕಲಂ 156(3) ರನ್ವಯ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಪೊಲೀಸ್ ಉಪಾಧೀಕ್ಷಕರು–1, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ನಿರ್ದೇಶನ ನೀಡಿರುತ್ತದೆ.

ಅದರಂತೆ, ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 55/2011 ರಲ್ಲಿ ದಿನಾಂಕ: 5–11–2011 ರಂದು ಆರೋಪಿ–1 ಶ್ರೀ ಎಸ್. ಮುನಿರಾಜು, ಎಂ.ಎಲ್.ಎ ಹಾಗೂ ಇತರರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ರ ಕಲಂ 9,10,13(1)ಡಿ(ii) ಹಾಗೂ ಭಾರತೀಯ ಸಂಹಿತಾ ದಂಡ ಸಂಹಿತೆಯ ಕಲಂ 464, 468, 471 ಮತ್ತು 120(ಬಿ) ಗಳನ್ವಯ ಮೊಕದ್ದಮೆಯನ್ನು ದಾಖಲಿಸಲಾಗಿರುತ್ತದೆ.

ಪ್ರಕರಣದ ತನಿಖೆಯಿಂದ ಆರೋಪಿ–2 ಶ್ರೀ ರಂಗನಾಥಯ್ಯ, ವಿಶೇಷ ತಹಶೀಲ್ದಾರ್, ತಾಲ್ಲೂಕು ಕಛೇರಿ, ರಾಮನಗರ, ಆರೋಪಿ–3 ಶ್ರೀ ಸುರೇಶ್, ರಾಜಸ್ವ ನಿರೀಕ್ಷಕರು, ಬೆಂಗಳೂರು ಉತ್ತರ ತಾಲ್ಲೂಕು ಇವರುಗಳು ಆರೋಪಿ–1 ಶ್ರೀ ಎಸ್. ಮುನಿರಾಜು, ವಿಧಾನಸಭಾ ಸದಸ್ಯರು, ದಾಸರಹಳ್ಳಿ ವಿಧಾನಸಭೆ, ಬೆಂಗಳೂರು ರವರ ರಾಜಕೀಯ ಪ್ರಭಾವದಿಂದ ಸದರಿಯವರೆಗೆ ಸಹಾಯ ಮಾಡುವ ಉದ್ದೇಶದಿಂದ ಸದರಿಯವರೊಂದಿಗೆ ಅಪರಾಧಿಕ ಒಳಸಂಚಿನಲ್ಲಿ ಭಾಗಿಯಾಗಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಕೆರೆಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 12/1 ಕ್ಕೆ ಸಂಬಂಧಿಸಿದ ನ್ಯಾಯಾಲಯದ ತಡೆಯಾಜ್ಞೆಯನ್ನು ಮ್ಯುಟೇಷನ್‌ನಿಂದ ತೆಗೆದು ಹಾಕಿ ಆರೋಪಿ–1 ರವರ ಹೆಸರಿನ ಮುಂದೆ ಮ್ಯುಟೇಷನ್‌ನಲ್ಲಿ 0–21 ಗುಂಟೆ ಜಮೀನನ್ನು ನಮೂದಿಸಿ ಕರ್ತವ್ಯಲೋಪವೆಸಗಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ರ ಕಲಂ 13(1)ಡಿ(ii) ಸಹವಾಚನ 13(2) ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 120–ಬಿ ಗಳನ್ವಯ ಶಿಕ್ಷಾರ್ಹ ಅಪರಾಧವೆಸಗಿರುವುದು ಸಾಬೀತಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಆರೋಪಿ–2 ಶ್ರೀ ರಂಗನಾಥಯ್ಯ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಪ್ರಸ್ತುತ ಚುನಾವಣಾ ತಹಶೀಲ್ದಾರ್, ರಾಮನಗರ, ಆರೋಪಿ–3 ಶ್ರೀ ಸುರೇಶ್, ರಾಜಸ್ವ ನಿರೀಕ್ಷಕರು, ಬೆಂಗಳೂರು ಉತ್ತರ ತಾಲ್ಲೂಕು ಇವರುಗಳನ್ನು ದಿನಾಂಕ 1–3–2012 ರಂದು ಭ್ರಷ್ಟಾಚಾರದ ಆರೋಪಗಳ ಮೇಲೆ ದಸ್ತಗಿರಿ ಮಾಡಿ, ಘನ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಧೀಶರ ಆದೇಶದಂತೆ, ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು ಹಾಗೂ ಪ್ರಸ್ತುತ ಸದರಿ ಆರೋಪಿತರುಗಳು ನ್ಯಾಯಾಂಗ ಬಂಧನದಲ್ಲಿಯೇ ಮುಂದುವರೆದಿರುತ್ತಾರೆ.

ಮೇಲೆ ವಿವರಿಸಿರುವಂತೆ, ಆರೋಪಿ–2 ಶ್ರೀ ರಂಗನಾಥಯ್ಯ, ರವರ ಮೇಲಿನ ಭ್ರಷ್ಟಾಚಾರ ಆಪಾದನೆಗಳು ಇದುವರೆಗೆ ದೊರೆತಿರುವ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಹಾಗೂ ಸದರಿಯವರ ನ್ಯಾಯಾಂಗ ಬಂಧನದ ಅವಧಿಯು 48 ಗಂಟೆಗಳ ಅವಧಿಗೂ ಮೀರಿರುವುದರಿಂದ ಇವರನ್ನು ಸರ್ಕಾರಿ ಸೇವೆಯಿಂದ ತಕ್ಷಣದಿಂದಲೇ ಅಮಾನತ್ತಿನಲ್ಲಿಡಲು ಹಾಗೂ ಇವರ ಲೀನ್ (ಸ್ಥಾನ) ವನ್ನು ಕೂಡ ಬೇರೆ ಕಡೆಗೆ ವರ್ಗಾಯಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶದ ಹಿನ್ನೆಲೆಯಲ್ಲಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಸರ್ಕಾರಕ್ಕೆ ಮಾಡಿರುವ ಶಿಫಾರಸ್ಸನ್ನು ಸರ್ಕಾರವು ಒಪ್ಪಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 24 ಎಡಿಇ 2012, ಬೆಂಗಳೂರು, ದಿನಾಂಕ: 9–3–2012

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ–10(1)(ಡಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ರಂಗನಾಥಯ್ಯ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಪ್ರಸ್ತುತ ಚುನಾವಣಾ ತಹಶೀಲ್ದಾರ್, ರಾಮನಗರ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಈ ಅಧಿಕಾರಿಯು ಅಮಾನತ್ತಿನ ಅವಧಿಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98 ರನ್ವಯ ನಿಗದಿಪಡಿಸಿರುವ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

ಈ ಅಧಿಕಾರಿಯು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 938

ಕಂದಾಯ ಇಲಾಖೆ (ಸೇವೆಗಳು–3)

INFRASTRUCTURE DEVELOPMENT SECRETARIAT

Sub : Development of International Convention Centre-adjacent to Bangalore International Airport.

Read : 1. G.O. No. IDD 44 DIA 2011, dated: 21-06-2011.

2. G.O. No. IDD 44 DIA 2011, dated: 03-09-2011.
3. G.O. No. CI 221 SPI 2011, dated: 12-10-2011.
4. G.O. No. IDD 112 DIA 2011 dated: 08-03-2012.
5. Letter No. DGM/(IPD-1)/2450/2011-12 dated 24-01-2012 of the Deputy General Manager, Karnataka State industrial And Infrastructure Development Corporation Limited.

Preamble:

In the G.O. read at (1) above, sanction was accorded for the development of an International Convention Centre adjacent to Bangalore International Airport and to constitute an Empowered Committee under the Chairmanship of Chief Secretary to take all the decisions relating to the project and accord all approvals to enable speedy implementation of the project.

2. In the G.O. reat at (2) above, sanction was accorded for constitution of Technical Evaluation Committee.

3. In the G.O. read at (3) above, sanction was accorded for release of Rs. 5.00 crores and also Infrastructure Development Department was authorized to operate the Head of Account 4852-02-800-0-05-ICC Plan 211-Investments.

4. In the G.O. read at Sl. No. (4) above, sanction was accorded for the appointment of the consortium of Populous - feedback as the preferred bidder for carrying out the services as per the scope of work brought out in the RFP for the development of International Convention Centre and Devanahalli. Bangalore.

5. In the letter read at Sl. No. (5) above, the Deputy General Manager, Karnataka State Industrial and Infrastructure Development Corporation Limited, Bangalore, had sent a proposal for requirement of funds to an extent of Rs. 3.00 crores upto March 31st 2012 towards the payment of fee to KIPDC, consultant and other Aministrative Expenditure for the development of the International Convention Centre.

6. Government have examined the proposal in detail and hence the following order.

Government Order No. IDD 44 DIA 2011, Bangalore, Dated: 17-03-2012

After carefull consideration of the proposal of Karnataka State Industrial and Infrastructure Devleopment Corporation Limited, Bangalore, Government accords sanction for release of Rs. 500.00 lakhs (Rupees Five Hundred lakhs only) under the Head of Account 4852-02-800-0-05 International Convention Centre (Plan)-211-Investment for consultant fee and other Administrative Expenses for the development of International Convention Centre.

2. The Managing Director, Karnataka State Industrial and Infrastructure Development Corporation Limited, Bangalore is authorized to draw the above amount on a payees receipt duly countersigned by the Under Secretary to Government, Infrastructure Development Department, Bangalore.

3. This order is issued with the concurrence of the Finance Department vide Note No: FD 221/Exp-1/12, dated: 09-03-2012.

By Order and in the name of the Governor of Karnataka,

S.J. Sampath Kumar

P.R. 939

Under Secretary to Government

Infrastructure Development Department

ಒಳಾಡಳಿತ ಸಚಿವಾಲಯ

ವಿಷಯ : ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ (ಅಮಾನತ್ತಿನಲ್ಲಿರುವವರು) ಇವರ ವಿರುದ್ಧ ದಾಖಲಾದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:

1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಎಂ–26/ಸಿಆರ್–8/2011 ಮಂಡ್ಯ, ದಿನಾಂಕ: 21.01.2012.
2) ತನಿಖಾಧಿಕಾರಿಯ ವರದಿ ಸಂ:ಎಂಡಿವೈ/ಪಿಡಬ್ಲ್ಯೂ/ಕೆಎಲ್‌ಎ/ಮೊ.ಸಂ.08/2011, ದಿನಾಂಕ: 26.12.2011.
3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಸ್ವತ್ತುಗಳ ಪಟ್ಟಿ, ಪ್ರಕರಣದ ತನಿಖಾ ಕಾಲದಲ್ಲಿ ತೆಗೆದ ಫೋಟೋಗಳು, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ: 21.01.2012ರ ಪತ್ರದೊಡನೆ ಮೇಲೆ (2) ಮತ್ತು (3)ರಲ್ಲಿ ಓದಲಾದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಕಳುಹಿಸುತ್ತಾ, ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್(ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ (ಅಮಾನತ್ತಿನಲ್ಲಿರುವರು) ಇವರ ವಿರುದ್ಧ ಮಂಡ್ಯದ ಲೋಕಾಯುಕ್ತ ಠಾಣೆಯಲ್ಲಿ ದಾಖಲಿಸಿರುವ ಮೊಕದ್ದಮೆ ನಂ:08/2011ರ ಸಂಬಂಧ ಆಪಾದಿತರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ಕಲಂ:7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ:13(2)ರ ಅಡಿ ಅಪರಾಧ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ, ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನ ಕಾಯ್ದೆ–1988ರ ಕಲಂ 19(1)(ಬಿ) ಅಡಿಯಲ್ಲಿ ಸರ್ಕಾರದ ಮಂಜೂರಾತಿ ಕೋರಿರುತ್ತಾರೆ.

ಸರ್ಕಾರವು, ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಮೇಲೆ (1)ರಲ್ಲಿ ಓದಲಾದ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಎಂ–26/ಸಿಆರ್–8/2011 ದಿನಾಂಕ: 21.01.2012ರೊಡನೆ ಕಳುಹಿಸಿಕೊಟ್ಟಿರುವ, ಮೇಲೆ (2)ರಲ್ಲಿ ಓದಲಾದ ಅಂತಿಮ ವರದಿಯ ಜೊತೆಗಿದ್ದ ಮೇಲೆ (3)ರಲ್ಲಿ ಓದಲಾದ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಶ್ರೀಮತಿ ಶಾರದಮ್ಮ, ಉ॥ಶಾರದ, ಕೋಂ ಸುರೇಶ, ಕತ್ತರಘಟ್ಟ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕ್, ಮಂಡ್ಯ ಜಿಲ್ಲೆರವರ ದಿನಾಂಕ:25.04.2011ರ ಫಿರ್ಯಾದು
2) ಮಂಡ್ಯದ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ ನಂ:08/2011ರ ಪ್ರಥಮ ವರ್ತಮಾನ ವರದಿ
3) ದಿನಾಂಕ: 25.04.2011ರ ಪ್ರಾಯೋಗಿಕ ಪಂಚನಾಮೆ
4) ದಿನಾಂಕ: 25.04.2011ರ ಟ್ರ್ಯಾಪ್ ಮಹಜರ್
5) ರಾಸಾಯನಿಕ ಪರೀಕ್ಷಕರ ವಿಶ್ಲೇಷಣಾ ವರದಿ ಸಂಖ್ಯೆ: PHI/CME/LOK/12/11-12, ದಿನಾಂಕ: 30.04.2011
6) ಕೃತ್ಯ ನಡೆದ ಸ್ಥಳದ ನಕಾಶೆ
7) ಪ್ರಕರಣದ ತನಿಖಾ ಕಾಲದಲ್ಲಿ ತೆಗೆದ ಪೋಟೋಗಳು
8) ಫಿರ್ಯಾದಿ ಮತ್ತು ಸಾಕ್ಷಿಗಳಾದ ಈ ಕೆಳಕಂಡವರ ಹೇಳಿಕೆಗಳು:
   (1) ಶ್ರೀಮತಿ ಶಾರದಮ್ಮ ಉ॥ ಶಾರದ ಕೋ ಸುರೇಶ, 39 ವರ್ಷ, ವಕ್ಕಲಿಗರು, ಕತ್ತರಘಟ್ಟ ಗ್ರಾಮ, ಕಸಬ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕ್, ಮಂಡ್ಯ ಜಿಲ್ಲೆ
   (2) ಶ್ರೀ ಎಂ.ಶಿವಶಂಕರ್ ಬಿನ್ ಲೇ॥ ಜಿ. ಮುದ್ದಪ್ಪ, 55 ವರ್ಷ, ಗ್ರಾಮಲೆಕ್ಕಿಗರು, ಹೊಳಲು ವೃತ್ತ, ದುದ್ದ ಹೋಬಳಿ, ಮಂಡ್ಯ ತಾಲ್ಲೂಕ್, ಮಂಡ್ಯ ಜಿಲ್ಲೆ ಪಂಚ–1,
   (3) ಶ್ರೀ ಕೆ. ನಾಗರಾಜು ಬಿನ್ ಲೇ॥ ಈರಣ್ಣಗೌಡ, 52 ವರ್ಷ, ಗ್ರಾಮಲೆಕ್ಕಿಗರು, ಹೆಚ್. ಮಲ್ಲಿಗೆರೆ ವೃತ್ತ, ದುದ್ದ ಹೋಬಳಿ, ಮಂಡ್ಯ ತಾಲ್ಲೂಕ್, ಮಂಡ್ಯ ಜಿಲ್ಲೆ ಪಂಚ–2
   (4) ಶ್ರೀ/ಶ್ರೀಮತಿ ಜಿ.ಸಿ. ಪ್ರೇಮಕುಮಾರಿ, ಬೆರಳಚ್ಚುಗಾರರು ಹಾಗೂ ಸಹಾಯಕರು, ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್‌ಸಿ ನ್ಯಾಯಾಲಯ, ಕೆ.ಆರ್.ಪೇಟೆ ತಾಲ್ಲೂಕ್, ಮಂಡ್ಯ ಜಿಲ್ಲೆ.
   (5) ಶ್ರೀ ಎಂ. ಜಯಸ್ವಾಮಿ, ಕಿರಿಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, 5ನೇ ಉಪ ವಿಭಾಗ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ.
   (6) ಶ್ರೀ ಎಸ್. ಸುಬ್ರಮಣ್ಯಅರಸ್, ಸಿಹೆಚ್‌ಸಿ, ಕರ್ನಾಟಕ ಲೋಕಾಯುಕ್ತ, ಮಂಡ್ಯ
   (7) ಶ್ರೀ ಕೆ.ಎನ್. ಪ್ರೇಮ್‌ಕುಮರ್, ಸಿಪಿಸಿ, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಮಂಡ್ಯ
   (8) ಶ್ರೀ ಭವಾನಿಶಂಕರ್, ಸಿಪಿಸಿ, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಡ್ಯ

(9) ಶ್ರೀ ಶಿವಯ್ಯ, ಎಸಿಸಿ, ಪೊಲೀಸ್ ಉಪಾಧೀಕ್ಷಕರು ಕಛೇರಿ, ಕರ್ನಾಟಕ ಲೋಕಾಯುಕ್ತ ಮಂಡ್ಯ

(10) ಶ್ರೀಮತಿ ಡಿ.ಶೋಭ, ಮಹಿಳಾ ಹೆಚ್.ಸಿ. ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಡ್ಯ

(11) ಶ್ರೀ ಎಸ್. ರೇಣುಕಾಪ್ರಸಾದ್, ಪಿಎಸ್‌ಐ, ಕೆ.ಆರ್.ಪೇಟೆ (ಗ್ರಾ), ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ

9) ಲಂಚ ಕೇಳಲು ಆಧಾರವಾದ ಕಡತ/ದಾಖಲೆ: ಕೆ.ಆರ್.ಪೇಟೆ (ಗ್ರಾ) ಠಾಣೆಯ ವ್ಯಾಪ್ತಿಯಲ್ಲಿ ದಿನಾಂಕ: 14.05.2006ರಂದು ಕತ್ತರಘಟ್ಟ ಗ್ರಾಮದ ಶ್ರೀಮತಿ ಶಾರದಮ್ಮ ಎಂಬುವರಿಗೆ ಅದೇ ಗ್ರಾಮದ ಕೃಷ್ಣೇಗೌಡ, ಪಾಂಡು, ಕಮಲಮ್ಮ ಮತ್ತು ಪುಟ್ಟಮ್ಮ ಎಂಬುವರು ತೆಂಗಿನ ತೋಟದ ವಿಚಾರದಲ್ಲಿ ಅವಾಚ್ಯವಾಗಿ ಬೈದು ಹಲ್ಲೆ ಮಾಡಿದ್ದ ಬಗ್ಗೆ ಶ್ರೀಮತಿ ಶಾರದಮ್ಮರವರು ನೀಡಿದ ದೂರಿನನ್ವಯ ಕೆ.ಆರ್.ಪೇಟೆ (ಗ್ರಾ) ಠಾಣೆ ಮೊ.ಸಂ: 86/2006 ಕಲಂ: 504, 341, 323, 324 ಕೂಡ 34 ಐಪಿಸಿ ರೀತ್ಯ ಕೇಸು ದಾಖಲಾಗಿರುತ್ತದೆ. ತನಿಖಾಧಿಕಾರಿಯವರು ನಡೆಸಿದ ತನಿಖೆಯಲ್ಲಿ ಪಾಂಡು ಎಂಬುವರ ವಿರುದ್ಧ ಆರೋಪ ಸಾಬೀತಾಗದೇ ಇದ್ದುದರಿಂದ ಉಳಿದ ಮೂರು ಜನ ಆರೋಪಿತ ವಿರುದ್ಧ ಘನ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪಣ ಪತ್ರದನ್ವಯ ಕೆ.ಆರ್.ಪೇಟೆ ತಾಲ್ಲೂಕ್ ಘನ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಬಾಕಿಯಿರುವ ಸಿ.ಸಿ. ನಂ: 347/2009ರ ಪ್ರಕರಣ

10) ಆಪಾದಿತರಾದ ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ (ಅಮಾನತ್ತಿನಲ್ಲಿರುವರು)ರವರ ಸಮಜಾಯಿಷಿ, ಹೇಳಿಕೆಗಳು.

ತನಿಖಾಧಿಕಾರಿಗಳಾದ ಶ್ರೀ ಸಂತೋಷ್ ಕೆ. ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ ಇವರು ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ ಇವರು ಕಾಯ್ದೆ–1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2)ರ ರೀತ್ಯ ಎಸಗಿರುವ ದಂಡನಾರ್ಹ ಅಪರಾಧ ಪ್ರಕರಣದ ಬಗ್ಗೆ ಮಂಡ್ಯದ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 08/2011ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಶ್ರೀಮತಿ ಎಂ.ಎನ್.ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ ಇವರು ಫಿರ್ಯಾದಿ ಶ್ರೀಮತಿ ಶಾರದಮ್ಮ, ಉ॥ ಶಾರದ ಕೋ ಸುರೇಶ, 39 ವರ್ಷ, ಕತ್ತರಘಟ್ಟ ಗ್ರಾಮ, ಕಸಬ ಹೋಬಳಿ, ಕೆ.ಆರ್.ಪೇಟೆ ತಾಲ್ಲೂಕ್, ಮಂಡ್ಯ ಜಿಲ್ಲೆ ಇವರು ಕೆ.ಆರ್.ಪೇಟೆ ಸೀನಿಯರ್ ಸಿವಿಲ್ ಜಡ್ಜ್‌ರವರ ಕೋರ್ಟ್‌ನಲ್ಲಿ ಸಿ.ಸಿ.ನಂ: 347/2009ರ ಪ್ರಕರಣದಲ್ಲಿ ಕೋರ್ಟಿಗೆ ಹಾಜರಾಗದ ಆರೋಪಿ–2 ಪಾಂಡು ಎಂಬುವವರನ್ನು ಕೋರ್ಟಿಗೆ ಕರೆಸುವಂತೆ ಕೇಳಿಕೊಂಡಾಗ ಇದಕ್ಕೆ ಅರ್ಜಿ ಹಾಕುವ ಸರ್ಕಾರಿ ಕೆಲಸವನ್ನು ಮಾಡಲು ₹ 1000–00ಗಳ ಅಕ್ರಮ ಸಂಭಾವನೆಯನ್ನು ಕೇಳಿ, ಈ ಬಾಬ್ತು ₹ 200–00ಗಳನ್ನು ಪಡೆದುಕೊಂಡಿರುತ್ತಾರೆ. ಉಳಿದ ಹಣವಾದ ₹ 800–00ಗಳನ್ನು ದಿನಾಂಕ: 25.04.2011ರಂದು ಕಛೇರಿಗೆ ತಂದು ಕೊಡಬೇಕೆಂದು ಆರೋಪಿತರು ಲಂಚದ ಹಣಕ್ಕೆ ಒತ್ತಾಯ ಮಾಡಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಸಾರ್ವಜನಿಕ ಅಧಿಕಾರಿಯ ವಿರುದ್ಧ ಕಾನೂನು ಕ್ರಮಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ: 25.04.2011ರಂದು ಮಂಡ್ಯ ಜಿಲ್ಲೆಯ ಕರ್ನಾಟಕ ಲೋಕಾಯುಕ್ತರು ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರುರವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ನ್ಯಾಯಾಲಯದ ಆವರಣದ ಮೊದಲನೇ ಮಹಡಿಯಲ್ಲಿರುವ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಯಲ್ಲಿ, ಸರ್ಕಾರಿ ಕೆಲಸ ಮಾಡಲು ಅಕ್ರಮ ಸಂಭಾವನೆಯಾಗಿ ₹ 800–00ಗಳನ್ನು ಕೇಳಿ ಪಡೆದ ವೇಳೆಯಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ₹ 800–00ಗಳನ್ನು ತನ್ನ ಬಲಕೈಯಿಂದ ತೆಗೆದುಕೊಂಡು ಅವರು ಧರಿಸಿದ್ದ ಕಪ್ಪು ಬಣ್ಣದ ಕೋಟಿನ ಒಳಭಾಗದಲ್ಲಿನ ಎಡಭಾಗದ ಮೊದಲನೇ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಅಕ್ರಮ ಸಂಭಾವನೆಯ ಹಣವಾದ ₹ 800–00ಗಳನ್ನು ಆಪಾದಿತ ಶ್ರೀಮತಿ ಎಂ.ಎನ್. ರಂಜನಾರಾವ್ ಇವರಿಂದ ಪಂಚರ ಸಮಕ್ಷಮದಲ್ಲಿ ವಶಪಡಿಸಿಕೊಂಡು, ಪಂಚರಿಂದ ಪರಿಶೀಲಿಸಿದಾಗ ಅದು ಎಂಟ್ರಸ್ಟ್‌ಮೆಂಟ್ ಮಹಜರು ಸಮಯದಲ್ಲಿ ಪಂಚರು ಬರೆದುಕೊಂಡಿದ್ದ ಹಣಗಳ ವಿವರ ಮತ್ತು ನಂಬರುಗಳಿಗೆ ತಾಳೆಯಾಗಿರುತ್ತದೆ. ಆಪಾದಿತ ಸಾರ್ವಜನಿಕ ಅಧಿಕಾರಿಯ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ ಫಿನಾಪ್ತಲೀನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರಿಕ್ಷಣಾ ವರದಿಯಲ್ಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸಾರ್ವಜನಿಕ ಅಧಿಕಾರಿಯ ನಡುವಿನ ವ್ಯವಹಾರವನ್ನು ಗಮನಿಸಿರುತಾರೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರಾದ ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ–1988ರ ಕಲಂ 7, 13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ–1988ರ ಕಲಂ 19(1)(ಬಿ) ಅಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವುದು ಅವಶ್ಯ ಎಂದು ಸರ್ಕಾರವು ಮನಗಂಡಿದೆ.

ಸರ್ಕಾರವು ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಇವರನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾಗಿದೆ. ಆದ್ದರಿಂದ, ಶ್ರೀಮತಿ ಎಂ.ಎನ್. ರಂಜನಾರಾವ್‌ರವರು ಸರ್ಕಾರಿ ಕೆಲಸವನ್ನು ಮಾಡಲು ₹ 800–00ಗಳ ಅಕ್ರಮ ಸಂಭಾವನೆಯನ್ನು ಪಡೆದು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ–1988ರ ಕಲಂ 7 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ರೀತ್ಯ ಎಸಗಿರುವ ಅಪರಾಧಕ್ಕೆ ಸದರಿ ಕಾಯ್ದೆಯ ಕಲಂ 19(1)(ಬಿ)ರ ರೀತ್ಯ ಅಭಿಯೋಜನೆಗೆ ಒಳಪಡಿಸಲು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂ: ಒಇ 553 ಪಿಪಿಇ 2011, ಬೆಂಗಳೂರು, ದಿನಾಂಕ: 20ನೇ ಮಾರ್ಚ್, 2012

ಆರೋಪಿತರಾದ ಶ್ರೀಮತಿ ಎಂ.ಎನ್. ರಂಜನಾರಾವ್, ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ಠಾಣೆಯಲ್ಲಿ ದಾಖಲಿಸಿರುವ ಮೊಕದ್ದಮೆ ನಂ: 08/2011ರ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ–1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ರೀತ್ಯ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಸದರಿ ಕಾಯ್ದೆಯ ಕಲಂ 19(1)(ಬಿ)ರನ್ವಯ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಈ ಮೂಲಕ ಅಭಿಯೋಜನಾ ಮಂಜೂರಾತಿಯನ್ನು ನೀಡಿದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿರ್ವಹಣೆ ನಿಯಮಾವಳಿ–1977ರ ನಿಯಮ 19(1)ರನ್ವಯ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ: 20.03.2012ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ

(ಪೊಲೀಸ್ ಸೇವೆಗಳು–ಬಿ)

ಪಿ.ಆರ್. 940

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಜಲಸಂಪನ್ಮೂಲ ಇಲಾಖೆಯ ಅಧೀನ ಕಾರ್ಯದರ್ಶಿ (ತಾಂತ್ರಿಕ–4) ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಲೋಇ 211 ಸೇಸಎ 2011, ದಿನಾಂಕ : 01–02–2012.
2. ಸರ್ಕಾರದ ಅಧಿಸೂಚನೆ ಸಂಖ್ಯೆ : ಜಸಂಇ 206 ಸೇಎಸು 2011, ದಿನಾಂಕ : 06–02–2012.
3. ಅನಧಿಕೃತ ಟಿಪ್ಪಣಿ ಸಂಖ್ಯೆ : ಜಸಂಇ 206 ಸೇಎಸು 2011, ದಿನಾಂಕ : 06–02–2012.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿ ಶ್ರೀ ಕೆ.ಎಸ್. ನಾಗರಾಜ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ಸಹಾಯಕ ಇಂಜಿನಿಯರ್ ವೃಂದದಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ, ಜಲಸಂಪನ್ಮೂಲ ಇಲಾಖೆಯ ವಶಕ್ಕೆ ನೀಡಿ ಆದೇಶಿಸಲಾಗಿತ್ತು. ಅದರಂತೆ ಮೇಲೆ ಓದಲಾದ (2)ರ ಅಧಿಸೂಚನೆಯಲ್ಲಿ ಸದರಿ ಅಧಿಕಾರಿಯವರನ್ನು ಕರ್ನಾಟಕ ಸರ್ಕಾರದ ಸಚಿವಾಲಯ, ಜಲಸಂಪನ್ಮೂಲ ಇಲಾಖೆ (ತಾಂತ್ರಿಕ–4) ಇಲ್ಲಿ ಖಾಲಿಯಿರುವ ವಿಶೇಷಾಧಿಕಾರಿ ಹುದ್ದೆಯನ್ನು ಅಧೀನ ಕಾರ್ಯದರ್ಶಿ ಹುದ್ದೆಗೆ ನಿಮ್ನೀಕರಿಸಿ ನೇಮಿಸಲು ಇವರ ಸೇವೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವಶಕ್ಕೆ ನೀಡಲಾಗಿದೆ.

ಮೇಲೆ ಓದಲಾದ (3)ರ ಅನಧಿಕೃತ ಟಿಪ್ಪಣಿಯಲ್ಲಿ ಶ್ರೀ ಕೆ.ಎಸ್. ನಾಗರಾಜ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗೆ ವಿಶೇಷಾಧಿಕಾರಿ ಹುದ್ದೆಯನ್ನು ಅಧೀನ ಕಾರ್ಯದರ್ಶಿ (ತಾಂತ್ರಿಕ–4) ಹುದ್ದೆಯೆಂದು ನಿಮ್ನೀಕರಿಸಿ, ಸದರಿ ಹುದ್ದೆಗೆ ಮರು ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸುವಂತೆ ಜಲಸಂಪನ್ಮೂಲ ಇಲಾಖೆಯವರು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 99 ಸಅಸೇ 2012, ಬೆಂಗಳೂರು, ದಿನಾಂಕ: 15ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಕರ್ನಾಟಕ ಸರ್ಕಾರದ ಸಚಿವಾಲಯದ ಜಲಸಂಪನ್ಮೂಲ ಇಲಾಖೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವಿಶೇಷಾಧಿಕಾರಿ (ವಿಶ್ವಬ್ಯಾಂಕ್) ಹುದ್ದೆಯನ್ನು ತಾತ್ಕಾಲಿಕವಾಗಿ ನಿಲಂಭನೆಯಲ್ಲಿಟ್ಟು (Kept in abeyance) ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಶ್ರೀ ಕೆ. ಎಸ್. ನಾಗರಾಜ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಹುದ್ದೆಯಲ್ಲಿ ಸೇವೆ ಸಲ್ಲಿಸುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಅಧೀನ ಕಾರ್ಯದರ್ಶಿ (ತಾಂತ್ರಿಕ–4) ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 192 ಸೇ–3/2012, ದಿನಾಂಕ : 05–03–2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್.941

FOREST, ECOLOGY AND ENVIRONMENT SECRETARIAT

Sub : Diversion of 0.76 ha. of forest land for the construction of drinking water tank/water treatment plant and laying of pipeline under Jal Nirmal Project at Mundaragi Taluk, Atikatti Sy. No. 18A, 45 and Dindur Sy. No. 15 in favour of Project Manager and Chief Executive Officer, Jal Nirmal Project, ZP-DSU, Gadag..

Read : 1. Letter No. A5 (3) GFL.CR.18/11-12, dated 21-11-2011 of the Principal Chief Conservator of Forests, Bangalore.

2. Letter No. F. No. 11-09-/98-FC dated : 03-01-2005, 26-12-2007 and 11-09-2009 Guidelines of Government of India, Ministry of Environment and Forests, New Delhi.

Preamble:

The Principal Chief Conservator of Forests, Bangalore vide letter read at (1) above had submitted a proposal for diversion of 0.76 ha. of forest land for the construction of drinking water tank/water treatment plant and laying of pipeline under Jal Nirmal Project at Mundaragi Taluk, Atikatti Sy. No. 18A, 45 and Dindur Sy. No. 15 in favour of Project Manager and Chief Executive Officer, Jal Nirmal Project, ZP-DSU, Gadag subject to certain conditions.

The Government of India, Ministry of Environment and Forests, New Delhi vide their letter dated : 03-01-2005 read at (2) above conveyed its general approval under Section 2 of the forest (Conservation) Act, 1980 for diversion of forest land to Government Departments for certain activities not exceeding one ha.

This proposal has been examined in accordance with the general approval of Government of India vide letter dated : 03-01-2005 and it has been decided to accord diversion of 0.76 ha. Of forest land for the construction of drinking water tank/water treatment plant and laying of pipeline under Jal Nirmal Project at Mundaragi Taluk, Atikatti Sy. No. 18A, 45 and Dindur Sy. No. 15 in favour of Project manager and Chief Executive officer, Jal Nirmal Project, ZP-DSU, Gadag.

The proposal has been examined in detail and hence the order.

Government Order No. FEE 200 FLL 2011 Bangalore, Dated: 15th March 2012.

In the circumstances explained in the preamble and in accordance with the general approval of government of India in the letters dated 03-01-2005, 26-12-2007 and 11-09-2009 Government is pleased to accord approval under Section (2) of Forest (Conservation) Act 1980 for diversion of 0.76 ha. of forest land for the construction of drinking water tank/water treatment plant and laying of pipeline under Jal Nirmal Project at Mundaragi Taluk, Atikatti Sy. No. 18A, 45 and Dindur Sy. No. 15 in favour of Project Manager and Chief Executive Officer, Jal Nirmal Project, ZP-DSU, Gadag subject to the following conditions :

1. The legal status of forest land shall remain unchanged and it shall continue to be forest land.
2. The lessee shall pay lease rent as fixed by the Government from time to time.
3. The lease is granted for a period of 20 years.
4. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose, the area should be resumed to the Forest Department under Section 82 of Karnataka forest Act, 1963. The Deputy Consevator of Forests, Gadag, Division, Gadag is authorized to take necessary action in this regard.
5. No residential buildings shall be permitted in the proposed forest area.
6. The Karnataka forest Act, 1963 and Rules, 1969 and other relevant Acts & Rules will be applicable for any violation.
7. The user agency has to pay the Net Present Value (NPV) of forest land diverted under this proposal as per Orders dated : 28-03-2008 and 9-5-2008 of the Hon'ble Supreme court of India.
8. The User Agency shall ensure that there shall be no damage to the available fauna and flora.
9. The User Agency shall pay the cost of raising Compensatory Afforestation over double the extent of degraded forest land (1.52 ha.) at the rate prevailing at the time of sanction. (At present it is Rs. 1,05,000/- per ha.).
10. No labour camp shall be established on the forest lands.
11. No work shall be allowed after sunset.
12. Any damage to forest area due to such works shall be compensated by the User Agency. The extent of damage shall be assessed by the concened Deputy Conservator of Forests.
13. The user Agency shall not sub-lease, mortgage and hypothecate the forest area.
14. The approval under the Forest (Conservation) Act, 1980 is subject to the clearance under the Environment (Protection) Act, 1986, if required.

15. The user Agency shall abide by all the conditions imposed upon by Government of India, the Government of Karnataka and Principal Chief Conservator of Forests (Head of Forest Force).

By Order and in the name of the Governor of Karnataka,

K.P. Chandrahasa

Under Secretary to Government

Forest, Ecology and Environment Department

PR.942

FOREST, ECOLOGY AND ENVIRONMENT SECRETARIAT

Sub: Diversion of 0.982 ha. of forest land for the construction of drinking water tank/water treatment plant and laying of pipeline under Jal Nirmal Project at Bellatti Village Sy. No. 69 in ShirahattiTaluk, Gadag District in favour of Project Manager and Chief Executive Officer, Jal Nirmal Project, ZP-DSU, Gadag..

Read :
1. Letter No. A5 (3) GFL.CR.28/11-12, dated 12-12-2011 of the Principal Chief Conservator of Forests, Bangalore.
2. Letter No. F. No. 11-09-/98-FC dated : 03-01-2005, 26-12-2007 and 11-09-2009 Guidelines of Government of India, Ministry of Environment and Forests, New Delhi.

Preamble:

The Principal Chief Conservator of Forests, Bangalore vide letter read at (1) above had submitted a proposal for diversion of 0.982 ha. of forest land for the construction of drinking water tank/water treatment plant and laying of pipeline under Jal Nirmal Project at Bellatti Village Sy. No. 69 in ShirahattiTaluk, Gadag District in favour of Project Manager and Chief Executive Officer, Jal Nirmal Project, ZP-DSU, Gadag subject to certain conditions.

The Government of India, Ministry of Environment and Forests, New Delhi vide their letter dated : 03-01-2005 read at (2) above conveyed its general approval under Section 2 of the Forest (Conservation) Act, 1980 for diversion of forest land to Government Departments for certain activities not exceeding one ha.

This proposal has been examined in accordance with the general approval of Government of India vide letter dated : 03-01-2005 and it has been decided to accord diversion of 0.982 ha. of forest land for the construction of drinking water tank/water treatment plant and laying of pipeline under Jal Nirmal Project at Bellatti Village Sy. No. 69 in ShirahattiTaluk, Gadag District in favour of Project Manager and Chief Executive officer, Jal Nirmal Project, ZP-DSU, Gadag.

The proposal has been examined in detail and hence the order.

Government Order No. FEE 215 FLL 2011 Bangalore, Dated: 15th March 2012.

In the circumstances explained in the preamble and in accordance with the general approval of Government of India in the letters dated 03-01-2005, 26-12-2007 and 11-09-2009 Government is pleased to accord approval under Section (2) of Forest (Conservation) Act 1980 for diversion of 0.982 ha. of forest land for the construction of drinking water tank/water treatment plant and laying of pipeline under Jal Nirmal Project at Bellatti Village Sy. No. 69 in ShirahattiTaluk, Gadag District in favour of Project Manager and Chief Executive Officer, Jal Nirmal Project, ZP-DSU, Gadag subject to the following conditions :

1. The legal status of forest land shall remain unchanged and it shall continue to be forest land.
2. The lessee shall pay lease rent as fixed by the Government from time to time.
3. The lease is granted for a period of 20 years.
4. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose, the area should be resumed to the Forest Department under Section 82 of Karnataka forest Act, 1963. The Deputy Conservators of Forests, Gadag, Division, Gadag is authorized to take necessary action in this regard.
5. No residential buildings shall be permitted in the proposed forest area.
6. The Karnataka forest Act, 1963 and Rules, 1969 and other relevant Acts & Rules will be applicable for any violation.
7. The user agency has to pay the Net Present Value (NPV) of forest land diverted under this proposal as per Orders dated : 28-03-2008 and 9-5-2008 of the Hon'ble Supreme court of India.
8. The User Agency shall ensure that there shall be no damage to the available fauna and flora.
9. The User Agency shall pay the cost of raising 2.00 ha. Of Compensatory Afforestation over double the extent of degraded forest land (1.52 ha.) at the rate prevailing at the time of sanction. (At present it is Rs. 1,05,000/- per ha.).
10. No labour camp shall be established on the forest lands.

11. No work shall be allowed after sunset.
12. Any damage to forest area due to such works shall be compensated by the User Agency. The extent of damage shall be assessed by the concened Deputy Conservator of Forests.
13. The user Agency shall not sub-lease, mortgage and hypothecate the forest area.
14. The approval under the Forest (Conservation) Act, 1980 is subject to the clearance under the Environment (Protection) Act, 1986, if required.
15. The user Agency shall abide by all the conditions imposed upon by Government of India, the Government of Karnataka and Principal Chief Conservator of Forests (Head of Forest Force).

By Order and in the name of the Governor of Karnataka,
K.P. Chandrahasa
Under Secretary to Government
Forest, Ecology and Environment Department

PR.943

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಬಳ್ಳಾರಿ ನಗರ (ಸತ್ಯ ನಾರಾಯಣ ಪೇಟ್) ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂ; 114ರ ಬದಲಾಗಿ ರಸ್ತೆ ಮೇಲು ಸೇತುವೆ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ಪತ್ರ ಸಂಖ್ಯೆ : W 352/CN/BNC/ROB @ LC No. 114/BAY, ದಿನಾಂಕ : 24–08–2009ರ ಮುಖ್ಯ ಆಡಳಿತಾಧಿಕಾರಿ ನೈರುತ್ಯ ರೈಲ್ವೆ, ಬೆಂಗಳೂರು, ಇವರ ಪತ್ರ.
2. ಸರ್ಕಾರಿ ಆದೇಶ ಸಂಖ್ಯೆ : ಮೂಅಇ 108 ರಾರಾಹೆ 2007, ದಿನಾಂಕ : 23–09–2009.
3. ಪತ್ರ ಸಂ. ಮುಇಂ (ಉ) : ತಾಂಸ–3: ಸಅ–1: ಬವಿ: 09–10, ದಿನಾಂಕ : 27–03–2010ರ ಮುಖ್ಯ ಇಂಜಿನಿಯರ್ (ಉ), ಸಂಪರ್ಕ ಮತ್ತು ಕಟ್ಟಡ, ಲೋಕೋಪಯೋಗಿ ಇಲಾಖೆ, ಧಾರವಾಡ, ಇವರ ಪತ್ರ.
4. ಸರ್ಕಾರಿ ಪತ್ರ ಸಂ: ಮೂಅಇ 108 ರಾರಾಹೆ 2007, ದಿ:26–04–2011.
5. ಪತ್ರ ಸಂ. CE(N)/PWD/TA-3/AE-1/LC-114/ROB, ದಿನಾಂಕ : 23–07–2011ರ ಮುಖ್ಯ ಇಂಜಿನಿಯರ್ (ಉ), ಸಂಪರ್ಕ ಮತ್ತು ಕಟ್ಟಡ, ಲೋಕೋಪಯೋಗಿ ಇಲಾಖೆ, ಧಾರವಾಡ, ಇವರ ಪತ್ರ.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1) ರ ಪತ್ರದಲ್ಲಿ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ಬೆಂಗಳೂರು ಇವರು ಬಳ್ಳಾರಿ ನಗರ (ಸತ್ಯ ನಾರಾಯಣ ಪೇಟ್) ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂ: 114ರ ಬದಲಾಗಿ ರಸ್ತೆ ಮೇಲು ಸೇತುವೆಯನ್ನು ನಿರ್ಮಿಸುವ ಕಾಮಗಾರಿಗೆ ಜಿ.ಎ.ಡಿ.ಯನ್ನು ತಯಾರಿಸಿ ರೈಲ್ವೆ ಹಾಗೂ ಲೋಕೋಪಯೋಗಿ ಇಲಾಖೆಯು ಅನುಮೋದಿಸಿದ್ದು ಹಾಗೂ ರೈಲ್ವೆ ವ್ಯಾಪ್ತಿಯಲ್ಲಿ ಬರುವ ಸಬ್ ವೇಯನ್ನು ಸಹ ರೈಲ್ವೆಯಿಂದಲೇ ನಿರ್ಮಿಸಲು ಹಾಗೂ ಈ ಕಾಮಗಾರಿಯನ್ನು ಸಮಪಾಲು ವೆಚ್ಚದ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಟೆಂಡರನ್ನು ಆಹ್ವಾನಿಸಲಾಗುತ್ತಿದ್ದು ಮೇಲು ಸೇತುವೆಯ ಅಪ್ರೋಚ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳುವಂತೆ ಮತ್ತು ಸೇತುವೆ ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿರುವುದರ್ರಿದ ಸೇತುವೆ ಮತ್ತು ಸಬ್ ವೇ ನಿರ್ಮಾಣದ ಕಾಮಗಾರಿಗೆ ಅಂದಾಜು ರೂ. 9.50 ಕೋಟಿಗಳಾಗಬಹುದೆಂದು ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲೇಬೇಕಾಗಿರುವುದರಿಂದ ಹಾಗೂ ಟೆಂಡರ್ ಆಹ್ವಾನಿಸಲು ರಾಜ್ಯ ಸರ್ಕಾರವು ಶೇ. 50ರಷ್ಟು ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

2. ಮೇಲೆ ಓದಲಾದ (2)ರ ಆದೇಶದಲ್ಲಿ ಬಳ್ಳಾರಿ ನಗರ (ಸತ್ಯ ನಾರಾಯಣ ಪೇಟ್) ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂ: 114ರ ಬದಲಾಗಿ ರಸ್ತೆ ಮೇಲು ಸೇತುವೆಯನ್ನು ನಿರ್ಮಿಸುವ ಕಾಮಗಾರಿಗೆ ರೂ. 3.00 ಕೋಟಿಗಳನ್ನು ನೈರುತ್ಯ ರೈಲ್ವೆಗೆ ಬಿಡುಗಡೆ ಮಾಡಲಾಗಿತ್ತು.

3. ಮೇಲೆ ಓದಲಾದ ಕ್ರ. ಸಂ. (3) ರಲ್ಲಿ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಸಂಪರ್ಕ ಮತ್ತು ಕಟ್ಟಡ (ಉ), ಧಾರವಾಡ ಇವರು ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣಕ್ಕೆ ಮೆ. ರೈಟ್ಸ್ ಸಂಸ್ಥೆಯು ತಯಾರಿಸಿರುವ ರೂ. 30.78 ಕೋಟಿಗಳ ಅಂದಾಜು ವೆಚ್ಚದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ರೈಲ್ವೆ ಮಂತ್ರಾಲಯ ಶೇಕಡ 50:50ರಷ್ಟು ವೆಚ್ಚವನ್ನು ಭರಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿದ್ದಾರೆ.

4. ಮೇಲೆ ಓದಲಾದ ಕ್ರ. ಸಂ. (4) ರ ಸರ್ಕಾರದ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ (ಉ), ಧಾರವಾಡ ಇವರಿಗೆ ಕೂಡು ರಸ್ತೆ ನಿರ್ಮಾಣಕ್ಕಾಗಿ ಸಲ್ಲಿಸಿರುವ ಅಂದಾಜು ಪಟ್ಟಿಗೆ ಸಂಬಂಧಿಸಿದ ಪ್ರಾಧಿಕಾರಿಗಳ ಮೇಲು ರುಜು ಇಲ್ಲದಿರುವುದನ್ನು ಪರಿಶೀಲಿಸಿದ ನಂತರ ಅಂದಾಜು ಪಟ್ಟಿಗೆ ರಾಜ್ಯ ಹಾಗೂ ರೈಲ್ವೆ ಪಾಲನ್ನು ನಿಖರವಾಗಿ ನಮೂದಿಸಿ ಕಳುಹಿಸುವಂತೆ ಕೋರಲಾಗಿತ್ತು.

5. ಮೇಲೆ ಓದಲಾದ ಕ್ರಮ ಸಂ. (5) ರಲ್ಲಿ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟಡ್ಟ (ಉ), ಧಾರವಾಡ ಇವರು ಬಳ್ಳಾರಿ ನಗರ (ಸತ್ಯ ನಾರಾಯಣ ಪೇಟ್) ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂ: 114ರ ಬದಲಾಗಿ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣದ ಬಗ್ಗೆ ಉಪ ಮುಖ್ಯ ಇಂಜಿನಿಯರ್, ನೈರುತ್ಯ ರೈಲ್ವೆ, ಬೆಂಗಳೂರು ಇವರ ಪತ್ರ ಸಂಖ್ಯೆ : W 352/CN/BNC/ROB @ LC No. 114 @ BAY ದಿನಾಂಕ : 07–07–2011 ರಲ್ಲಿ ಅಂದಾಜು ಪಟ್ಟಿಯನ್ನು ಹಿಂದಿರುಗಿಸುತ್ತಾ, ಕೆಳಸೇತುವೆ ಕಾಮಗಾರಿಯನ್ನು ರೈಲ್ವೆಯು

ನಿರ್ಮಿಸುತ್ತಿದ್ದು, ಕಾಮಗಾರಿಯ ಮೊತ್ತವನ್ನು ರೈಲ್ವೆ ಮತ್ತು ರಾಜ್ಯ ಸರ್ಕಾರವು ಶೇಕಡ 50 : 50 ರ ವೆಚ್ಚ ಹಂಚಿಕೆ ಆಧಾರದ ಮೇಲೆ ಭರಿಸಲಾಗುವುದೆಂದು ಮತ್ತು ರೈಲ್ವೆ ಗಡಿ ಮೀರಿದ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಾಣ ಮಾಡುವ ಕಾಮಗಾರಿಯನ್ನು ಕಾರ್ಯಗತಗೊಳಿಸುವುದು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರವೇ ಪೂರ್ಣವಾಗಿ ಭರಿಸಬೇಕಾಗುತ್ತದೆಂದು ಹಾಗೂ ಕೂಡು ರಸ್ತೆಯ ಅಂದಾಜು ಪಟ್ಟಿಯನ್ನು ರೈಲ್ವೆಯಲ್ಲಿ ಪರಿಶೀಲಿಸುವ ಅವಶ್ಯಕತೆಯಿರುವುದಿಲ್ಲವೆಂದು ವರದಿ ಮಾಡಿರುತಾರೆಂದು ತಿಳಿಸುತ್ತಾ, ಅಂದಾಜು ಪಟ್ಟಿ ರೂ. 28.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

6. ಪ್ರಸಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 108 ರಾರಾಹೆ 2007, ಬೆಂಗಳೂರು, ದಿನಾಂಕ: 20ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ನಗರ (ಸತ್ಯ ನಾರಾಯಣ ಪೇಟ್) ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂ: 114ರ ಬದಲಾಗಿ ರಸ್ತೆ ಮೇಲು ಸೇತುವೆ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣದ (ಸೇತುವೆ ನಿರ್ಮಾಣದ ಮೊತ್ತ ರೂ. 10.72 ಕೋಟಿ ಮತ್ತು ಕೂಡು ತಸ್ತೆಯ ನಿರ್ಮಾಣದ ಮೊತ್ತ ರೂ. 18.78 ಕೋಟಿ) ಕಾಮಗಾರಿಯನ್ನು ರೂ. 28.50 ಕೋಟಿ (ಇಪ್ಪತ್ತೆಂಟು ಕೋಟಿ ಐವತ್ತು ಲಕ್ಷಗಳು ಮಾತ್ರ) ಗಳ ಅಂದಾಜಿನ ಮೊತ್ತಕ್ಕೆ ರಾಜ್ಯ ಹಾಗೂ ರೈಲ್ವೆ ಮಂತ್ರಾಲಯ ಶೇ. 50:50 ವೆಚ್ಚ ಹಂಚಿಕೆ (ಭೂಸ್ವಾಧೀನ ಮೊತ್ತವನ್ನು ಹೊರತುಪಡಿಸಿ) ಆಧಾರದ ಮೇಲೆ ಕೈಗೆತ್ತಿಕೊಳ್ಳಲು/ನಿರ್ಮಾಣ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

- ಆಡಳಿತಾತ್ಮಕ ಅನುಮೋದನೆ ನೀಡಿರುವ ಮೊತ್ತಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
- ಯೋಜನೆಗೆ ಕಾಲಮಿತಿಯನ್ನು ನಿಗಧಿಪಡಿಸಿ ಆ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
- ಕಾಮಗಾರಿಯಲ್ಲಿ ಹೆಚ್ಚಳ/ಪರಿಷ್ಕೃತ ಅಂದಾಜು ವೆಚ್ಚವನ್ನು ಸರ್ಕಾರವು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 108 EXP. 1/2011 ದಿನಾಂಕ : 25–11–2011 ಮತ್ತು ಲೋಕೋಪಯೋಗಿ ಇಲಾಖೆಯ ಟಿಪ್ಪಣಿ ಸಂಖ್ಯೆ : ಲೋಇ 17 ಸಿಟಿಆರ್ 2012 ದಿನಾಂಕ : 27–01–2012 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಜಿ. ಸಂಪತ್ ಕುಮಾರ್

ಪಿ.ಆರ್.944

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ವಸತಿ ಸಚಿವಾಲಯ

ವಿಷಯ : 2011–12 ನೇ ಸಾಲಿನಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ 4ನೇ ತ್ರೈಮಾಸಿಕ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ : **1.**ಸರ್ಕಾರದ ಆದೇಶ ಸಂಖ್ಯೆ : ವಇ 06 ಕೊಮಂಲೆ 2011, ದಿನಾಂಕ : 23–06–2011.

2. ಸರ್ಕಾರದ ಆದೇಶ ಸಂಖ್ಯೆ : ವಇ 06 ಕೊಮಂಲೆ 2011, ದಿನಾಂಕ : 24–09–2011.

3. ಸರ್ಕಾರದ ಆದೇಶ ಸಂಖ್ಯೆ : ವಇ 06 ಕೊಮಂಲೆ 2011, ದಿನಾಂಕ : 28–12–2011.

4. ಆಯುಕ್ತರು, ಕಕೊನಿಮ, ರವರ ಪತ್ರ ಸಂಖ್ಯೆ : ಕಕೊನಿಮ/ಲೆ/ಪ/ಶಾ/:ಅನುದಾನ :2011–12, ದಿನಾಂಕ : 13–02–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1) ರ ಆದೇಶದಲ್ಲಿ 2011–12ನೇ ಸಾಲಿಗೆ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಸಿಬ್ಬಂದಿ ವೆಚ್ಚ (ಯೋಜನೆ ಮತ್ತು ಯೋಜನೇತರ) ಹಾಗೂ ಹುಡ್ಕೊ ಸಾಲದ ಮೇಲು ಉಸ್ತುವಾರಿ (ಯೋಜನೇತರ) ಗಾಗಿ ಒಟ್ಟು ರೂ. 567.01 ಲಕ್ಷಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಕ್ರಮ ಸಂಖ್ಯೆ (2) ರಲ್ಲಿ 2011–12ನೇ ಸಾಲಿಗೆ ಎರಡನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ, ಯೋಜನೆ ಮತ್ತು ಯೋಜನೇತರ ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ) ಗಾಗಿ ಒಟ್ಟು ರೂ. 559.12 ಲಕ್ಷಗಳನ್ನು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಕ್ರಮ ಸಂಖ್ಯೆ (3) ರಲ್ಲಿ 2011–12ನೇ ಸಾಲಿಗೆ ಮೂರನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ, ಯೋಜನೆ ಮತ್ತು ಯೋಜನೇತರ ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ) ಗಾಗಿ ಒಟ್ಟು ರೂ. 553.82 ಲಕ್ಷಗಳನ್ನು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಕ್ರಮ ಸಂಖ್ಯೆ (4) ರಲ್ಲಿ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರ ಪತ್ರದಲ್ಲಿ 2011–12ನೇ ಸಾಲಿನ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನ ಸಿಬ್ಬಂದಿ ವೆಚ್ಚಕ್ಕೆ (ಯೋಜನೆ ಮತ್ತು ಯೋಜನೇತರ) ಅಡಿ ರೂ. 137.50 ಲಕ್ಷಗಳು ಕೊಳಚೆ ಸುಧಾರಣೆ – ಸಹಾಯದನ – ಯೋಜನೆಯಡಿ ರೂ. 25.00 ಲಕ್ಷಗಳನ್ನು ಹಾಗೂ ಹುಡ್ಕೋ ಸಾಲಗಳ ಮೇಲು ಉಸ್ತುವಾರಿಗಾಗಿ ರೂ. 334.93 ಲಕ್ಷಗಳು (ಹುಡ್ಕೋ ಸಂಸ್ಥೆಯ ಬೇಡಿಕೆಯನ್ವಯ) ಒಟ್ಟು ಯೋಜನೆಯಡಿ ರೂ. 137.50 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ. 409.63 ಲಕ್ಷಗಳು ಒಟ್ಟು ರೂ. 547.13 ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಡಳಿಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ 4ನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 06 ಕೊಮಂಲೆ 2011, ದಿನಾಂಕ: 15ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ 2011–12 ನೇ ಸಾಲಿಗೆ 4ನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ (ಯೋಜನೆ ಮತ್ತು ಯೋಜನೇತರ) ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ) ಗಾಗಿ ಒಟ್ಟು ರೂ. 547.13 ಲಕ್ಷಗಳು (ರೂ. ಐದು ಕೋಟಿ ನಲವತ್ತೇಳು ಲಕ್ಷಗಳು ಮತ್ತು ಹದಿಮೂರು ಸಾವಿರ ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ನಾಲ್ಕನೇ ತ್ರೈಮಾಸಿಕ		
		ಯೋಜನೆ	ಯೋಜನೇತರ	ಒಟ್ಟು
1	ಸಿಬ್ಬಂದಿ ವೆಚ್ಚ 2217–04–191–2–01	112.50	74.70	187.20
2	ಕೊಳಚೆ ಸುಧಾರಣೆ ಸಹಾಯದನ 2217–04–191–2–02	25.00	0.00	25.00
3	ಹುಡ್ಕೋ ಸಾಲಗಳ ಮೇಲು ಉಸ್ತುವಾರಿ 2217–04–191–2–04	0.00	334.93	334.93
	ಒಟ್ಟು	**137.50**	**409.63**	**547.13**

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆಗೊಳಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತದೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 639 ವೆಚ್ಚ–9/2011, ದಿನಾಂಕ : 14–03–2012ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.945

ಜಿ.ಆರ್. ನಾಗರಾಜ

ಪೀಠಾಧಿಕಾರಿ–4, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ: ಶಿಕಾರಿಪುರ ಪಟ್ಟಣದ ವಿವಿಧ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.–

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ವಇ 33 ಕೊಮಂಲೆ 2010, ದಿ: 03–02–2011.
2) ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರ ಪತ್ರ ಸಂಖ್ಯೆ: ಕಕೊನಿಮ/ಆಯುಕ್ತರು/ಶಿಕಾರಿಪುರ–ಅಭಿವೃದ್ಧಿ/2011–12/369, ದಿನಾಂಕ : 12–09–2011.
3) ಆರ್ಥಿಕ ಇಲಾಖೆಯ ಹಿಂಬರಹ ಟಿಪ್ಪಣಿ ಸಂಖ್ಯೆ: ಆಇ 680 ವೆಚ್ಚ –9/2012, ದಿನಾಂಕ: 09–03–2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಶಿಕಾರಿಪುರ ಪಟ್ಟಣದ ಘೋಷಿತ 08 ಕೊಳಚೆ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಅಡ್ಡಮೋರಿ ಮತ್ತು ತಡೆಗೋಡೆ ಕಾಮಗಾರಿಗಳನ್ನು ಕೈಗೊಳ್ಳಲು ರೂ. 5.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ರಮ ಸಂಖ್ಯೆ (2) ರಲ್ಲಿ ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರು ಶಿಕಾರಿಪುರ ಪಟ್ಟಣದ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬಾಕಿ ಬಿಡುಗಡೆ ಮಾಡಬೇಕಾಗಿರುವ ರೂ. 10.00 ಕೋಟಿಗಳ ಅನುದಾನ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕ್ರಮ ಸಂಖ್ಯೆ: (3)ರಲ್ಲಿ ಆರ್ಥಿಕ ಇಲಾಖೆಯ 2011–12ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2216–02–102–0–02 (ಯೋಜನೆ) ಯಡಿ ಉಳಿತಾಯವಾಗಿರುವ ರೂ. 200.00 ಲಕ್ಷಗಳ ಅನುದಾನವನ್ನು ಕೊಳಚೆ ಸುಧಾರಣೆ ಯೋಜನೆಯಡಿ ಮರು ಹೊಂದಾಣಿಕೆ ಮಾಡುವ ಪ್ರಸ್ತಾಪಿತ ವಿಷಯದ ಮೇಲೆ ಕ್ರಮ ತೆಗೆದುಕೊಂಡು ಸರ್ಕಾರಿ ಆದೇಶ ಸಂಖ್ಯೆ: ಆಇ 329 ಬಿಆರ್‌ಎಸ್ 2011. ದಿನಾಂಕ: 08–03–2012 ರಂದು ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 33 ಕೊಮಂಲೆ 2010, ಬೆಂಗಳೂರು, ದಿನಾಂಕ 15–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಶಿಕಾರಿಪುರ ಪಟ್ಟಣದ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ಅಡ್ಡಮೋರಿ ಮತ್ತು ತಡೆಗೋಡೆ ಕಾಮಗಾರಿಗಳನ್ನು 08 ಕೊಳಚೆ ಪ್ರದೇಶದಲ್ಲಿ ಕೈಗೊಳ್ಳಲು ರೂ 2.00 ಕೋಟಿಗಳ (ಎರಡು ಕೋಟಿ ರೂ.ಗಳು ಮಾತ್ರ) ಬಿಡುಗಡೆ ಮಾಡಿದ್ದು, ಸದರಿ ಮೊತ್ತವನ್ನು 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2217–04–191–2–02 ಯಡಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಗೊಳಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತಾರೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 680 ವೆಚ್ಚ–9/2012, ದಿನಾಂಕ: 09–03–2012ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಆರ್. ನಾಗರಾಜ

ಪಿ.ಆರ್. 946 ಪೀಠಾಧಿಕಾರಿ–4, ವಸತಿ ಇಲಾಖೆ

HIGHER EDUCATION SECRETARIAT

Sub: Granting recognition to the Section A & B of Associate Membership Course equivalent to Degree and Part-I & II of Technician Engineers (T) equivalent to Diploma in Civil Engineering and Architecture Engineering Courses conducted by the Institution of Civil Engineers (INDIA) for the purpose of employment to the posts and services in State Government.

Read: 1. Letter of Institution of Civil Engineers (INDIA) bearing No. Institution of Civil Engineers (1)SR/12/2010/33208, dated 10-02-2010.

2. Government of Karnataka Letter No. ED 66 UTV 2008, dated 26-12-2008.

3. Letter of Visvesvaraya Technological University Belgaum bearing No. VTU/AC/05-9c/2009-10/2/18, dated 04-06-2009.

4. Notification of Government of India, MHRD, Department of Education bearing No. F.24-1/2007-JS(1), dated 06-11-2007.

Preamble:

In the letter of Institution of Civil Engineers (INDIA) read at (1) above, a request was made to Government of Karnataka for granting recognition to the Section A & B of Associate Membership Course equivalent to Degree and Part-I & II of Technician Engineers (T) equivalent to Diploma in Civil Engineering and Architecture Engineering Courses conducted by the Institution of Civil Engineers (India) for the purpose of employment to the posts and services in State Government.

In the Government letter read at (2) above, a opinion was sought from the Visvesvaraya Technological University, Belgaum about the proposal of the Institution of Civil Engineers (INDIA).

In the letter read at (3) above, the Visvesvaraya Technological University reported to Government of Karnataka that the Executive Council of Visvesvaraya Technological University in its meeting held on 29-04-2009 resolved to approve the recognition to Section A & B of the Associate Membership conducted by the Institution of Civil Engineers (INDIA) equivalent to Degree on Civil Engineering and Architectural Engineering as per syllabus approved by the AICTE w.e.f. the academic session 2007-08 for the purpose of employment to the posts and services under Central/State Government in the appropriate field.

In the Notification of Department of Higher Education, MHRD, Government of India, New Delhi read at (4) above, Government of India has given recognition to the Section A & B of Associate Membership Course equivalent to Degree and Part-I & II of Technician Engineers (T) as equivalent to Diploma in Civil Engineering and Architecture Engineering Courses conducted by the Institution of Civil Engineers (India) for the purpose of employment to the posts and services under Central Government in the appropriate field. Further, the Notification says that the total number of candidates who can be admitted for the said eximination would not exceed the authorized strength of the concerned Institutions with which Institution of Civil Engineers (INDIA), Ludhiana (Punjab) has entered into MoUs. Furthermore, the notification prescribed that a review in respect of recognition of educational qualification shall be made by Ministry of Human Resources Development Government of India after one year through AICTE.

Under the above circumstances the matter has been examined and hence this order.

Government Order No. ED 21 UTV 2012, Bangalore, dated 09-03-2012

In view of the above Government of Karnataka are pleased to accord recognition to the Section A & B of Associate Membership Course equivalent to Degree and Part-I & II of Technician Membership (T. Engineering) equivalent to Diploma in Civil Engineering and Architecture Engineering Courses conducted by the Institution of Civil Engineers (India) Ludhiana (Punjab) as per syllabus approved by AICTE and also as per the conditions already stipulated and to be stipulated by Government of India as well as AICTE from time to time for the posts and services under Government of Karnataka in the appropriate field.

By Order and in the name of the Governor of Karnataka
PRAKASHRAO KESARKAR
Under Secretary to Government
Higher Education Department (Universities)

P.R. 947

ಶಿಕ್ಷಣ ಸಚಿವಾಲಯ

ವಿಷಯ: ಬಿಜಾಪುರ ಸೈನಿಕ ಶಾಲೆಗೆ 2011–12ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯದಲ್ಲಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಸಮ ಸಂಖ್ಯೆಯ ಆದೇಶ ದಿನಾಂಕ: 18–08–2011.
2. ಸರ್ಕಾರದ ಸಮ ಸಂಖ್ಯೆಯ ತಿದ್ದುಪಡಿ ಆದೇಶ ದಿನಾಂಕ: 29–11–2011.
3. ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ: ವಿವೇ.30 ಬಿ.ಸೈ.ಶಾ. ಆಯವ್ಯಯ/2011–12, ದಿನಾಂಕ: 09–01–2012

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಬಿಜಾಪುರ ಸೈನಿಕ ಶಾಲೆಗೆ 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2202–02–107–3–00–117 ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ (ಯೋಜನೇತರ) ಅಡಿಯಲ್ಲಿ ಒದಗಿಸಲಾಗಿರುವ ಅನುದಾನ ರೂ. 337.00 ಲಕ್ಷಗಳಲ್ಲಿ ಈಗಾಗಲೇ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಂದ ಬಿಡುಗಡೆಯಾಗಿರುವ ಮೊದಲ ಕಂತಿನಲ್ಲಿ ಉಳಿಕೆಯಿಂದ ಲಭ್ಯವಾಗುವ ರೂ. 42,70,775/– ಹಾಗೂ ಎರಡನೇ ಕಂತಿನ ಮೊತ್ತ ರೂ. 84,25,000/– ಗಳನ್ನು ಒಟ್ಟು ರೂ. 1,26,95,875/– ಮೊತ್ತವನ್ನು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವೇತನ, ನಿವೃತ್ತಿ ವೇತನ, ಶಾಲಾ ನಿರ್ವಹಣೆ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ಖರ್ಚುಗಳಿಗಾಗಿ ಬಿಡುಗಡೆ ಮಾಡಿ ಮಂಜೂರಾತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ತಿದ್ದುಪಡಿ ಆದೇಶದಲ್ಲಿ ಬಿಜಾಪುರ ಸೈನಿಕ ಶಾಲೆಗೆ 2011–12ನೇ ಸಾಲಿನ ಅನುದಾನ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶದಲ್ಲಿನ ರೂ. 42,70,775/– ಬದಲಾಗಿ ರೂ. 42,70,875/– ಎಂದು ತಿದ್ದುಪಡಿ ಮಾಡಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪ್ರಸ್ತಾವನೆಯಲ್ಲಿ ನಿರ್ದೇಶಕರು (ಪ್ರೌಢಶಿಕ್ಷಣ), ಬೆಂಗಳೂರು ರವರು ಇವರು ಬಿಜಾಪುರ ಸೈನಿಕ ಶಾಲೆಗೆ ಸರ್ಕಾರದ ಆದೇಶದಂತೆ ರೂ. 1,26,95,775/–ಗಳನ್ನು ಬಿಡುಗಡೆ ಮಾಡಲಾಗಿದ್ದು ಒಟ್ಟು ರೂ. 1,68,49,900/– ಇಲ್ಲಿಯವರೆಗೂ ಬಿಡುಗಡೆ ಮಾಡಲಾಗಿದ್ದು ಬಿಡುಗಡೆ ಮಾಡಿರುವ ಒಟ್ಟು ರೂ. 1,68,49,900/–ಗಳಿಗೆ ಉಪಯೋಗಿತ ಪ್ರಮಾಣ ಪತ್ರವನ್ನು (Utilisation certificate) ಸಲ್ಲಿಸಿದ್ದು ಆದಾಯ ವೆಚ್ಚದ ವಾಸ್ತವಿಕ ವಿವರಗಳನ್ನು 2011–12ನೇ ಸಾಲಿನ ಆರ್ಥಿಕ ವರ್ಷ ಕೊನೆಗೊಂಡ ನಂತರ ಸಲ್ಲಿಸಲಾಗುವುದೆಂದು ತಿಳಿಸಿ 2011–12ನೇ ಸಾಲಿಗೆ ಬಿಜಾಪುರ ಸೈನಿಕ ಶಾಲೆಗೆ ಯೋಜನೇತರ ಬಾಬ್ತಿನಲ್ಲಿ ಲೆಕ್ಕಶೀರ್ಷಿಕೆ 2202–02–107–3–00–117 ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ (ಯೋಜನೇತರ) ಇದರಲ್ಲಿ ಒಟ್ಟು 337.00 ಲಕ್ಷ ಆಯವ್ಯಯದಲ್ಲಿ ಒದಗಿಸಿದ್ದು, ಇದರಲ್ಲಿ ರೂ. 1,68,49,900–00 ಗಳನ್ನು ಬಿಡುಗಡೆ ಮಾಡಲಾಗಿದ್ದು ಬಾಕಿ ಇರುವ ರೂ. 1,68,50,100–00ಗಳನ್ನು ಸೈನಿಕ ಶಾಲೆ, ಬಿಜಾಪುರ ಬಿಡುಗಡೆ ಮಾಡಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಬಿಜಾಪುರ ಸೈನಿಕ ಶಾಲೆಗೆ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಕಂತಾಗಿ ರೂ. 168.50 ಲಕ್ಷ ಮೊತ್ತವನ್ನು ಬಿಡುಗಡೆಗೊಳಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 2 ಸಿಎಸ್‌ಬಿ, 2011, ಬೆಂಗಳೂರು, ದಿನಾಂಕ 16–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಬಿಜಾಪುರ ಸೈನಿಕ ಶಾಲೆಗೆ 2011–12ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ "2202–ಸಾಮಾನ್ಯ ಶಿಕ್ಷಣ 02–ಸೆಕೆಂಡರಿ ಶಿಕ್ಷಣ–107 ವಿದ್ಯಾರ್ಥಿ ವೇತನ–3 ಸೈನಿಕ ಶಾಲೆ ಬಿಜಾಪುರ–00–117–ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ (ಯೋಜನೇತರ)" ಅಡಿಯಲ್ಲಿ ಒದಗಿಸಲಾಗಿರುವ ಅನುದಾನ ಒಟ್ಟು ರೂ. 337.00 ಲಕ್ಷಗಳಲ್ಲಿ ಉಳಿಕೆ ಲಭ್ಯವಾಗುವ ರೂ. 168.50 ಲಕ್ಷಗಳನ್ನು (ಒಂದು ಕೋಟಿ ಅರವತ್ತೆಂಟು ಲಕ್ಷದ ಐವತ್ತು ಸಾವಿರಗಳು) ಉಳಿದ 03 ಮತ್ತು 04ನೇ ತ್ರೈಮಾಸಿಕ ಕಂತುಗಳನ್ನಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವೇತನ, ನಿವೃತ್ತಿ ವೇತನ, ಶಾಲೆ ನಿರ್ವಹಣೆ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ಖರ್ಚುಗಳಿಗಾಗಿ ಬಿಡುಗಡೆ ಮಾಡಲು ಈ ಮೂಲಕ ಮಂಜೂರಾತಿ ನೀಡಲಾಗಿದೆ.

2011–12ನೇ ಆರ್ಥಿಕ ವರ್ಷ ಕೊನೆಗೊಂಡ ನಂತರ ಬಿಜಾಪುರ ಸೈನಿಕ ಶಾಲೆಯು ತನ್ನ ಆದಾಯ ಮತ್ತು ವೆಚ್ಚದ ವಾಸ್ತವಿಕ ವಿವರಗಳನ್ನು ಮತ್ತು ಸ್ಥಳೀಯ ಲೆಕ್ಕಪರಿಶೋಧಕರಿಂದ ಪರಿವೀಕ್ಷಣೆ ಸಮರ್ಪಕವಾಗಿ ನಡೆಸಿ ಆಡಿಟ್ ವರದಿಗಳನ್ನು ಸಲ್ಲಿಸುವುದು.

ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನಕ್ಕೆ ಶಾಲೆಯ ವಿವರವಾದ ಬಳಕೆ ಪ್ರಮಾಣ ಪತ್ರವನ್ನು ಸಕ್ಷಮ ಅಧಿಕಾರಿಗಳಿಗೆ ತಪ್ಪದೇ ಸಲ್ಲಿಸುವುದು ಸದರಿ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ಬಳಕೆಯಾಗದಂತಹ ಅನುದಾನವನ್ನು ಸರ್ಕಾರಕ್ಕೆ ಕೂಡಲೇ ಅಧ್ಯರ್ಪಣೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 156 ವೆಚ್ಚ–8/ 2012, ದಿನಾಂಕ: 27–02–2012 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಪಿ.ಆರ್. 948

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ, (ಆಡಳಿತ & ಸಮಿತಿಗಳು)

ಜಲಸಂಪನ್ಮೂಲ ಸಚಿವಾಲಯ

ವಿಷಯ: ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ತಾಲ್ಲೂಕು, ಬಡಗ ಎಡಪದವು ಗ್ರಾಮದ ತೆಂಕುಮನೆ ತಂತ್ರಿಯವರ ಮನೆ ಬಳಿ ಕಿಂಡಿ ಅಣೆಕಟ್ಟು ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ / ಪತ್ರದ ಸಂಖ್ಯೆ: ಮುಸದ/ತಾಂಸ–5–ಸ.ಇಂ. –11/ ದ.ಕ.ಜಿ/ಮಂ.ತಾ/ ತೆಂಕುಮನೆ/ಇ–ಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/868, ದಿನಾಂಕ: 03–03–2012.

ಪ್ರಸ್ತಾವನೆ:

ದಕ್ಷಿಣ ಕನ್ನಡ, ಜಿಲ್ಲೆ, ಮಂಗಳೂರು ತಾಲ್ಲೂಕು, ಬಡಗ ಎಡಪದವು ಗ್ರಾಮದ ತೆಂಕುಮನೆ ತಂತ್ರಿಯವರ ಮನೆ ಬಳಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 30.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ, ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	09–01–2012
ಹೊಸ ದಿಗಂತ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	15–01–2012

ದಿನಾಂಕ 30–01–2012ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 29,46,367/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಹೆಚ್. ಗೋಪಾಲ್ ಶೆಟ್ಟಿ, ಹೊಸಮತ, 1ನೇ ದರ್ಜೆ ಗುತ್ತಿಗೆದಾರರು	33,89,223/–	15,0306 ಹೆಚ್ಚು

ಮೇಲ್ಕಂಡ ಶ್ರೀ ಹೆಚ್. ಗೋಪಾಲ್ ಶೆಟ್ಟಿ ಹೊಸಮತ, 1ನೇ ದರ್ಜೆ ಗುತ್ತಿಗೆದಾರರು ಇವರು ಟಿಂಡರನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.0306 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 13.00% ಹೆಚ್ಚಿನ ದರಗಳಿಗೆ ಅಂದರೆ 33,29,395/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 34 ಅಪಿಬಂ 2012 (ತಾಂತ್ರಿಕ) ಬೆಂಗಳೂರು, ದಿನಾಂಕ 19–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು, ಬಡಗ ಎಡಪದವು ಗ್ರಾಮದ ತೆಂಕುಮನೆ ತಂತ್ರಿಯವರ ಮನೆ ಬಳಿಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 29,46,367/– ಗಳ ಮೇಲೆ ಶೇ. 13.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ (ರೂ. 33,29,395/–

ಗಳಗೆ (ರೂ. ಮೂವತ್ತ ಮೂರು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಮೂರು ನೂರ ತೊಂಬತ್ತೈದು ರೂಪಾಯಿಗಳು ಮಾತ್ರ) ಶ್ರೀ ಹೆಚ್. ಗೋಪಾಲ್ ಶೆಟ್ಟಿ ಹೊಸಮಠ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ರುದ್ರಮೂರ್ತಿ)

ಪಿ.ಆರ್. 949

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ: ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, 38ನೇ ಕಳತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೆಂಜೂರು ಗ್ರಾಮದ ಕೊಳಂಬೆ ಮನೆ ಬಳಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ /ಪತ್ರದ ಸಂಖ್ಯೆ: ಮುಸದ/ತಾಂಸ–5– ಸ.ಇಂ. –11/ ಉ.ಜಿ/ಉ.ತಾ/ ಕೊಳಂಬೆ ಮನೆ/ ಇ–ಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/869, ದಿನಾಂಕ: 03–03–2012.

ಪ್ರಸ್ತಾವನೆ:

ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, 38ನೇ ಕಳತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿ ಕೆಂಜೂರು ಗ್ರಾಮದ ಕೊಳಂಬೆ ಮನೆ ಬಳಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 40.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ, ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

	ಮೂಲ ಪ್ರಕಟಣೆ	ಮುಂದೂಡಿಕೆ ಪ್ರಕಟಣೆ
ಉಡುಪಿ ಜಿಲ್ಲಾ ಟೆಂಡರ್ ಬುಲೆಟಿನ್	21–11–2011	
ಉದಯವಾಣಿ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆ	10–12–2011	
ಉದಯವಾಣಿ ದಿನ ಪತ್ರಿಕೆ		25–12–2011

ದಿನಾಂಕ 31–12–2011 ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರಿಬ್ಬರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 39,65,562/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚು/ಕಡಿಮೆ
1	ಶ್ರೀ ವಾದಿರಾಜ ಶೆಟ್ಟಿ 1ನೇ ದರ್ಜೆ ಗುತ್ತಿಗೆದಾರರು	41,76,036/–	5.3076 ಹೆಚ್ಚು
2	ಶ್ರೀ ಅಶೋಕ್ ಬಂಡಾರಿ 1ನೇ ದರ್ಜೆ ಗುತ್ತಿಗೆದಾರರು	430.66,439/–	986.01 ಹೆಚ್ಚು

ಮೇಲ್ಕಂಡಂತೆ ಶ್ರೀ ವಾದಿರಾಜ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ಕನಿಷ್ಠ ದರಗಳನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 39,65,562/–ಗೆ ಹೋಲಿಸಿದಾಗ ಶೇ. 5.3076ರಷ್ಟು ಹೆಚ್ಚಿದ್ದು, ಅಂದರೆ ಅವರ ಟೆಂಡರ್ ಮೊತ್ತ ರೂ. 41,76,036/– ಗಳಾಗಿದ್ದು ಇದನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 35 ಅಪಿಬಂ 2012, (ತಾಂತ್ರಿಕ) ಬೆಂಗಳೂರು, ದಿನಾಂಕ 19–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕು, 38ನೇ ಕಳತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೆಂಜೂರು ಗ್ರಾಮದ ಕೊಳಂಬೆ ಮನೆ ಬಳಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 39,65,562/– ಗಳ ಮೇಲೆ ಶೇ. 5.3076 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 41,76,036/–ಗಳಿಗೆ (ರೂ. ನಲವತ್ತೊಂದು ಲಕ್ಷ ಎಪ್ಪತ್ತಾರು ಸಾವಿರದ ಮೂವತ್ತಾರು ರೂಪಾಯಿಗಳು ಮಾತ್ರ) ಶ್ರೀ ವಾದಿರಾಜ ಶೆಟ್ಟಿ 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ರುದ್ರಮೂರ್ತಿ)

ಪಿ.ಆರ್. 950

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಬಮ್ಮಿಗಟ್ಟಿ ಬ್ಯಾರೇಜ್ ಸಂರಕ್ಷಣಾ ಕಾಮಗಾರಿ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.–

ಓದಲಾಗಿದೆ: 1)ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010, ದಿನಾಂಕ 28–09–2011

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ಪತ್ರದ ಕ್ರಮಾಂಕ ಮುಇಂ/ಸನೀ/(ಉ)ವಲಯ/ಬಿಜೆಪಿ/ಎಇ–3/2011–12/1109, ದಿನಾಂಕ 28–02–2012.

ಪ್ರಸ್ತಾವನೆ:

ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಬಮ್ಮಿಗಟ್ಟಿ ಬ್ಯಾರೇಜ್ ಸಂರಕ್ಷಣಾ ಕಾಮಗಾರಿಯು 13ನೇ ಹಣಕಾಸು ಆಯೋಗದ ಅನುದಾನದಡಿ ಕೆರೆಗಳ ಹಾಗೂ ಪಾರಂಪರಿಕ ಜಲಕಾಯಗಳ ಪುನರುಜ್ಜೀವನ ಯೋಜನೆಯಡಿ ಉಲ್ಲೇಖ (1)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಗಳ ಕ್ರಿಯಾ ಯೋಜನೆಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಕಾಮಗಾರಿಯ ರೂ. 34.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	09–12–2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	25–12–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 33,97,014/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎಂ. ರಾಘವೇಂದ್ರ, ಗುತ್ತಿಗೆದಾರರು	39,10,957/–	15.13 ಹೆಚ್ಚು

ಮೇಲ್ಕಂಡಂತೆ ಶ್ರೀ ಎಂ. ರಾಘವೇಂದ್ರ, ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳನ್ನು ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.13ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 33,97,014/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ 38,04,656/–ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಸನೀಇ 37 ಅಪಿಬಂ 2012 (ತಾಂತ್ರಿಕ) ಬೆಂಗಳೂರು, ದಿನಾಂಕ 19–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಬಮ್ಮಿಗಟ್ಟಿ ಬ್ಯಾರೇಜ್ ಸಂರಕ್ಷಣಾ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 33,97,014/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ 38,04,656/–ಗಳಿಗೆ (ರೂ. ಮೂವತ್ತೆಂಟು ಲಕ್ಷ ನಾಲ್ಕು ಸಾವಿರದ ಆರುನೂರ ಐವತ್ತಾರು ಮಾತ್ರ) ಗಳಿಗೆ ಎಂ. ರಾಘವೇಂದ್ರ, ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 951 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಝುಡ್ತಿ ಫೀಡರ್ ಕಾಲುವೆ ನಿರ್ಮಾಣ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.–

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010, ದಿನಾಂಕ 28–09–2011

2.ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ಪತ್ರದ ಕ್ರಮಾಂಕ ಮುಇಂ/ಸನೀ/(ಉ)ವಲಯ/ಬಿಜೆಪಿ/ಎಇ–3/2011–12/1107, ದಿನಾಂಕ 28–02–2012.

ಪ್ರಸ್ತಾವನೆ:

ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಝುಡ್ತಿ ಫೀಡರ್ ಕಾಲುವೆ ನಿರ್ಮಾಣ ಸುಧಾರಣೆ ಕಾಮಗಾರಿಯು 13ನೇ ಹಣಕಾಸು ಆಯೋಗದ ಅನುದಾನದಡಿ ಕೆರೆಗಳ ಹಾಗೂ ಪಾರಂಪರಿಕ ಜಲಕಾಯಗಳ ಪುನರುಜ್ಜೀವನ ಯೋಜನೆಯಡಿ ಉಲ್ಲೇಖ (1)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಕಾಮಗಾರಿಯ ರೂ. 48.50 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	07–01–2012
ವಿಜಯ ಕರ್ನಾಟಕ ದಿನ ಪತ್ರಿಕೆ	12–01–2012
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	13–01–2012

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿದ್ದು ವಿವರಗಳು ಕೆಳಕಂಡಂತಿವೆ.

<table>
<tr><td colspan="3">ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ</td><td>ರೂ. 47,85,895/–</td></tr>
<tr><td>ಕ್ರಮ ಸಂಖ್ಯೆ</td><td>ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್</td><td>ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ</td><td>ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ</td></tr>
<tr><td>1</td><td>ವಿ. ಎಂ. ಹೆಬ್ಬಾಳ, ಒಂದನೇ ದರ್ಜೆ ಗುತ್ತಿಗೆದಾರರು</td><td>56,16,521/–</td><td>17.36 ಹೆಚ್ಚು</td></tr>
</table>

ಮೇಲ್ಕಂಡಂತೆ ಶ್ರೀ ವಿ. ಎಂ. ಹೆಬ್ಬಾಳ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳನ್ನು ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.36ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 47,85,895/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ 53,60,202/–ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಕೆಜಿದು 2012 (ತಾಂತ್ರಿಕ) ಬೆಂಗಳೂರು, ದಿನಾಂಕ 19–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಝುಡ್ತಿ ಫೀಡರ್ ಕಾಲುವೆ ನಿರ್ಮಾಣ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 47,85,895/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 53,60,202/–ಗಳಿಗೆ (ರೂ. ಐವತ್ತಮೂರು ಲಕ್ಷ ಅರವತ್ತು ಸಾವಿರದ ಇನ್ನೂರ ಎರಡು ಮಾತ್ರ) ಗಳಿಗೆ ವಿ. ಎಂ. ಹೆಬ್ಬಾಳ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 952 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಬಡಗ ಎಡಪದವು ಗ್ರಾಮದ ಹಲಸಿನ ಅಡಿ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರುರವರ ಪತ್ರದ ಸಂಖ್ಯೆ: ಮುಸದ/ತಾಂಸ–5–ಸ.ಇಂ.–11/ದ.ಕ.ಜಿ/ಮಂ.ತಾ/ಹಲಸಿನ ಅಡಿ/ಇ–ಪ್ರೊಕ್ಯೂರ್‌ಮೆಂಟ್/ ಟೆಂಡರ್ ಅನುಮೋದನೆ/2011/908, ದಿನಾಂಕ 07–03–2012.

ಪ್ರಸ್ತಾವನೆ:

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಬಡಗ ಎಡಪದವು ಗ್ರಾಮದ ಹಲಸಿನ ಅಡಿ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 20.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	09–01–2012
ಹೊಸ ದಿಗಂತ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	15–01–2012

ದಿನಾಂಕ 27–01–2012 ರಂದು ಇ–ಪ್ರೊಕ್ಯೂರ್‌ವೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 19,05,379/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಪಿ. ಹರೀಶ್ ಐತಾಳ ಒಂದನೇ ದರ್ಜೆ ಗುತ್ತಿಗೆದಾರರು	21,94,804/–	15.1898 ಹೆಚ್ಚು

ಮೇಲ್ಕಂಡಂತೆ ಶ್ರೀ ಪಿ. ಹರೀಸ್ ಐತಾಳ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.1898 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 13.00% ಹೆಚ್ಚಿನ ದರಗಳಿಗೆ ಅಂದರೆ ರೂ. 21,53,078/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಸನೀಇ 36 ಅಪಿಬಿಂ 2012 (ತಾಂತ್ರಿಕ) ಬೆಂಗಳೂರು, ದಿನಾಂಕ 19–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಬಡಗ ಎಡಪದವು ಗ್ರಾಮದ ಹಲಸಿನ ಅಡಿ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 19,05,379/–ಗಳ ಮೇಲೆ ಶೇ. 13.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 21,53,078/–ಗಳಿಗೆ (ರೂ. ಇಪ್ಪತ್ತೊಂದು ಲಕ್ಷ ಐವತ್ತು ಮೂರು ಸಾವಿರದ ಎಪತ್ತೆಂಟು ರೂಪಾಯಿಗಳು ಮಾತ್ರ) ಶ್ರೀ ಪಿ. ಹರೀಶ್ ಐತಾಳ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 953

ಇಂಧನ ಸಚಿವಾಲಯ

ವಿಷಯ: ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ 8.25 ಮೆಗಾ ವ್ಯಾಟ್ ಪವನ ವಿದ್ಯುತ್ ಸಾಮರ್ಥ್ಯವನ್ನು 46.8 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.–

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಇಎನ್ 210 ಎನ್‌ಸಿಇ 2005, ದಿನಾಂಕ 20–08–2005
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 463 ಎನ್‌ಸಿಇ 2006, ದಿನಾಂಕ 22–12–2006
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/VWTIPL-(8.25 MW to 46.8 MW)/2898 ದಿನಾಂಕ 16/21–9–2011 ಮತ್ತು KRED/08/VWTIPL/2011/ 4381 ದಿನಾಂಕ 11/23–11–2011.
4. ದಿನಾಂಕ 21–12–2011 ರಂದು ನಡೆದ ಹಂಚಿಕೆ ಸಮಿತಿ ನಡವಳಿ

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ॥ ಎನ್.ಇ.ಜಿ. ಮೈಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬಾಗಲಕೋಟೆ, ರಾಯಚೂರು, ಬೀದರ್, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ 99.75 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ॥ ಎನ್.ಇ.ಜಿ. ಮೈಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರನ್ನು ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಕಂಪನಿಯವರಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಿರುವ ಒಟ್ಟು ಸಾಮರ್ಥ್ಯದಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮೈದಾರಡೊಕ್ಕಿ, ಅಮರಾಪುರ, ಹುನ್ನೂರು ಗ್ರಾಮಗಳಲ್ಲಿ ಮಂಜೂರಾಗಿರುವ 8.25 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 46.8 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಮತ್ತು ಯೋಜನೆಯನ್ನು 2012–13ರಲ್ಲಿ ಅನುಷ್ಠಾನಗೊಳಿಸುವ, ವಿದ್ಯುತ್ ಖರೀದಿ ಒಪ್ಪಂದವನ್ನು ಎಸ್ಕಾಂನೊಂದಿಗೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಜಮೀನು ಅರಣ್ಯ, ಕಂದಾಯ ಮತ್ತು ಖಾಸಗಿ ಪ್ರದೇಶಗಳಿಗೆ ಸೇರಿದ್ದಾಗಿರುತ್ತದೆ ಹಾಗೂ ಸದರಿ ಕಂಪನಿಗೆ ಮಂಜೂರಾಗಿರುವ 99.75 ಮೆ.ವ್ಯಾ ಸಾಮರ್ಥ್ಯ ಯೋಜನೆಯ ಕಾಲಾವಧಿಯು ಮುಗಿದಿದ್ದು ಸದರಿ ಯೋಜನೆಯನ್ನು ಅನುಷ್ಠಾನಮಾಡಲು 2012–13 ರವರೆಗೆ ಕಾಲಾವಕಾಶ ಬೇಕೆಂದು ಕೋರಿರುತ್ತಾರೆಂದು ಈ ಸಂಬಂಧ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ ಮತ್ತು ಸಾಮರ್ಥ್ಯ ಹೆಚ್ಚಳದ ಆದೇಶದ

ನಂತರ ಅರಣ್ಯ ಮತ್ತು ಕಂದಾಯ ಇಲಾಖೆಯ ಅನುಮೋದನೆ ಪಡೆಯುವುದಾಗಿಯ, ಖಾಸಗೀ ಭೂಮಿಯನ್ನು ಸ್ವಾಧೀನಪಡಿಸುವಲ್ಲಿ ಕಾರ್ಯನಿರತರಾಗಿರುತ್ತಾರೆ ಎಂದು ತಿಳಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4)ರ ಹಂಚಿಕೆ ಸಮಿತಿಯ ನಡವಳಿಯ ದಿನಾಂಕ 21-12-2011 ರಂದು ನಡೆದ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ರವರ ಪ್ರಸ್ತಾವಿತ ಸಾಮರ್ಥ್ಯ ಹೆಚ್ಚಳ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಯ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದೆಂದು ಷರತ್ತಿಗೊಳಪಟ್ಟು ಹೆಚ್ಚಿಸಲು ಹಂಚಿಕೆ ಸಮಿತಿಯು ಶಿಫಾರಸ್ಸಿಸಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 389 ಎನ್‌ಸಿಇ 2011 ಬೆಂಗಳೂರು, ದಿನಾಂಕ 19-03-2012

ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಕೊಪ್ಪಳ ಜಿಲ್ಲೆಯ (ಹಿಂದೆ ರಾಯಚೂರು ಜಿಲ್ಲೆ) ಕುಷ್ಟಗಿ ತಾಲ್ಲೂಕು, ಮೈದೊರದಕ್ಕಿ, ಮುದಲ್ಗುಂಡಿ, ಜುಲ್ಕುಂಟೆ, ಕೋನಾಪುರ ಮತ್ತು ಆರ್ಯಬೋಗಾಪುರ ಗ್ರಾಮಗಳಲ್ಲಿ ಮಂಜೂರಾಗಿರುವ 8.25 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 46.8 ಮೆಗಾ ವ್ಯಾಟ್‌ಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ಹೆಚ್ಚಿಸಿದೆ.

Geographical Area Details of the project	Sanctioned capacity in MW	Enhancement Proposed in MW	No. of WTGs & rating in KW	Total Capacity including proposed enhancement in MW
The area indentified for 8.25 MW is designated as part "A". It consists of several non-contiguous NWSE oriented independent Ridge Peaks. The proposed area is covered in the following Geographical Co-ordinates:- **Latitude:** 15°50'0"-15°54'15" N **Longitude:** 76°18'54''-76°24'42''E **Ridge peaks:** 648, 640, 635 & 625m AMSL Toposheet No. 57 A/5	8.25 MW	38.55 MW	26 Nos x1800 KW	46.8 MW

1. ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06-1-2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ ಇವರೊಂದಿಗೆ ಮಾಡಕೊಳ್ಳತಕ್ಕದ್ದು.
3. ಈ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಅರಣ್ಯ ಇಲಾಖೆಯ ಅನುಮೋದನೆ ಪಡೆಯತಕ್ಕದ್ದು
4. ಸದರಿ ಯೋಜನೆಯನ್ನು 2012-13ನೇ ಸಾಲಿನಲ್ಲಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಅಭಿವೃದ್ಧಿ ದಾರರಿಂದ ಕ್ರೆಡಲ್ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)
5. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 954 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ: ಮೆ॥ ವಿ.ವಿ. ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 1.00 ಮೆಗಾ ವ್ಯಾಟ್‌ಗೆ ಹೆಚ್ಚಿಸುವ ಬಗ್ಗೆ.-

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಎನ್ 274 ಎನ್‌ಸಿಇ 2009, ದಿನಾಂಕ 16-09-2010
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್-627/ಮೋತಾಎಂಹೆಚ್‌ಎಸ್/1265, ದಿನಾಂಕ 29-04-2011/30-04-2011.
4. ದಿನಾಂಕ 21-12-2011 ರಂದು ನಡೆದ ಹಂಚಿಕೆ ಸಮಿತಿ ನಡವಳಿ

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ವಿ. ವಿ. ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಹೋಬಳಿಯ ಮೋತಾ ಗ್ರಾಮದ ಬಳಿ ಇರುವ ನುಗು ಸ್ಟ್ರೀಮ್‌ಗೆ ಅಡ್ಡಲಾಗಿ 0.5 ಮೆಗಾ ವ್ಯಾಟ್ ಸಾಮರ್ಥ್ಯದ

ಕಿರು ಜಲ ವಿದ್ಯುತ್ ಯೋಜನೆಯನ್ನು (Weir **Latitude:** 12°04'35"-**Longitude:** 76°28'40'' Power House- **Latitude:** 12°04'45"- **Longitude:** 76°28'40'' ಕೆಲವೊಂದು ನಿಬಂಧನೆಗೊಳಪಟ್ಟು ಹಂಚಿಕೆಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ॥ ವಿ. ವಿ. ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಹೋಬಳಿಯ ಮೋತಾ ಗ್ರಾಮದ ಬಳಿ ಇರುವ ನುಗು ಸ್ಟ್ರೀಮ್‌ಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 1.00 ಮೆ.ವ್ಯಾಗೆ ಹೆಚ್ಚಿಸಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3)ರ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ವಿ. ವಿ. ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರ ಪ್ರಸ್ತಾವಿತ ಸಾಮರ್ಥ್ಯ ಹೆಚ್ಚಳ ಯೋಜನೆಗೆ ಜಲ ಸಂಪನ್ಮೂಲ ಇಲಾಖೆಯ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಸಾಮರ್ಥ್ಯ ಹೆಚ್ಚಳಕ್ಕೆ ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 221 ಎನ್‌ಸಿಇ 2011 ಬೆಂಗಳೂರು, ದಿನಾಂಕ 20–03–2012

ಮೆ॥ ವಿ. ವಿ. ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಹೋಬಳಿಯ ಮೋತಾ ಗ್ರಾಮದ ಬಳಿ ಇರುವ ನುಗು ಸ್ಟ್ರೀಮ್‌ಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 0.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 1.00 ಮೆಗಾ ವ್ಯಾಟ್ (Weir **Latitude:** 12°04'40"-**Longitude:** 76°29'3'' Power House- **Latitude:** 12°04'46"- **Longitude:** 76°29'05)'' ಹೆಚ್ಚಿಸಿ ಆದೇಶಿಸಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಜಲ ಸಂಪನ್ಮೂಲ ಇಲಾಖೆಯ ಅನುಮೋದನೆಯನ್ನು ಪಡೆಯತಕ್ಕದ್ದು.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 955 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ: ಮೆ॥ ಎಂಎಸ್‌ಜಿ ಪವರ್ ಪ್ರೈವೇಟ್ ಲಿಮಿಟೆಡ್ ರವರ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯ ಹೆಚ್ಚಳ ಮತ್ತು ಯೋಜನಾ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಣೆ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಇಎನ್ 445 ಎನ್‌ಸಿಇ 2004, ದಿನಾಂಕ 05–01–2005
2. ತಿದ್ದುಪಡಿ ಆದೇಶ ಸಂಖ್ಯೆ ಇನ್ 134 ಎನ್‌ಸಿಇ 2006, ದಿನಾಂಕ 21–3–2006
3. ಸರ್ಕಾರಿ ಅದೇಶ ಸಂಖ್ಯೆ: ಇನ್ 182 ಎನ್‌ಸಿಇ 2007, ದಿನಾಂಕ 16–5–2007
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್‌ಎಚ್–232/2011–12/4652, ದಿನಾಂಕ 07/15–12–2011.
5. ದಿನಾಂಕ 21–12–2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಮೆ॥ ಎಂಎಸ್‌ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ದೇವರಗುಡ್ಡಿ ಗ್ರಾಮದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಕೆಲವೊಂದು ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ (2)ರ ಆದೇಶದಲ್ಲಿ ಮೆ॥ ಎಂಎಸ್‌ಜಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ದೇವರಗುಡ್ಡಿ ಗ್ರಾಮದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದೇವರಗುಡ್ಡಿ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 5.00 ಮೆಗಾ ವ್ಯಾಟ್‌ಗೆ ಕೆಲವೊಂದು ಷರತ್ತಿಗೊಳಪಟ್ಟು ಹೆಚ್ಚಿಸಿ ಆದೇಶಿಸಲಾಗಿತ್ತು. ತದನಂತರ ಮೇಲೆ ಓದಲಾದ (3)ರ ಆದೇಶದಲ್ಲಿ 5.00 ಮೆಗಾ ವ್ಯಾಟ್ ನಿಂದ 8.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಎಂಎಸ್‌ಜಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಮಂಜೂರಾಗಿರುವ ಮೇಲ್ಕಂಡ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಅಭಿವೃದ್ಧಿದಾರರ ಈ ಕೆಳಕಂಡ ಕೋರಿಕೆಗಳನ್ನು ಹಂಚಿಕೆ ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1. ಸಾಮರ್ಥ್ಯವನ್ನು 8.00 ಮೆಗಾ ವ್ಯಾಟ್ ನಿಂದ 20.00 ಮೆಗಾ ವ್ಯಾಟ್‌ಗೆ ಹೆಚ್ಚಿಸುವುದು

2. ಸದರಿ ಕಂಪನಿಯವರಿಗೆ 2 ಮೆ.ವ್ಯಾ. ಹಂಚಿಕೆಯಾದಾಗ ಯೋಜನೆಯ ತಡೆಗೊಡೆ ಎತ್ತರ 472 ಮೀ. ಮತ್ತು ಟೈಲ್ ರೇಸ್ ಪಾತಳಿಯು 457 ಮೀ. ರಾಗಿದ್ದು ತದನಂತರ ಯೋಜನೆಯ ಸಾಮರ್ಥ್ಯವನ್ನು 8 ಮೆ.ವ್ಯಾ.ಗೆ ಹೆಚ್ಚಿಸಿದಾಗ ನದಿಗೆ ಅಡ್ಡಲಾಗಿ ತಡೆಗೋಡೆ ಎತ್ತರ 478 ಮೀಟರ್‌ಗೆ ಬದಲಾಯಿಸಿ ಈಗ ಯೋಜನೆಯಲ್ಲಿ ಬದಲಾವಣೆ ಮಾಡಿ ಮೆ॥ ಮುರುಡೇಶ್ವರ ಪವರ್ ಪ್ರಾಜೆಕ್ಟ್ ರವರ ವಿದ್ಯುತ್ ಸ್ಥಾವರದಿಂದ ನದಿಗೆ ನೀರು ಬಿಡುವ ಟೈಲ್ ರೇಸ್ ಸ್ಥಳದಿಂದ ನೀರಿನ ಮಾರ್ಗವನ್ನು ಮುಂದುವರಿದು ತಡೆಗೋಡೆಯನ್ನು ನದಿಯ ಎಡದಂಡೆಯ 478 ಮೀಟರಲ್ಲಿ ನಿರ್ಮಾಣ ಮಾಡಿಸಿ, ವಿದ್ಯುತ್ ಸ್ಥಾವರದಿಂದ ನದಿಗೆ ನೀರು ಬಿಡುವಾಗ ಟೈಲ್ ರೇಸ್ ಪಾತಳಿಯ 460 ಮೀಟರ್ ವರೆಗೆ ಬದಲಾಯಿಸುವುದು.

3. ಸದರಿ ಕಂಪನಿಯವರಿಗೆ 14-09-2010 ರಿಂದ 13-09-2013 ರವರೆಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲವಕಾಶವನ್ನು ವಿಸ್ತರಿಸುವುದು.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾಗಿರುವ ಹಂಚಿಕೆ ಸಮಿತಿ ಸಭೆಯ ಮುಂದೆ ಮೆ॥ ಎಂಎಸ್‌ಜಿ ಪವರ್ ಪ್ರೈವೇಟ್ ಲಿಮಿಟೆಡ್ ರವರ ಸಾಮರ್ಥ್ಯ ಹೆಚ್ಚಳ ಕೋರಿಕೆ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು ಅರಣ್ಯ ಮತ್ತು ನೀರಾವರಿ ಇಲಾಖೆಗಳ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಹಂಚಿಕೆ ಸಮಿತಿಯು ಸಾಮರ್ಥ್ಯ ಹೆಚ್ಚಳ ಪ್ರಸ್ತಾವನೆಯನ್ನು ಶಿಫಾರಸ್ಸಿಸಿದೆ.

ಆದುದರಿಂದ, ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 475 ಎನ್‌ಸಿಇ 2011, ಬೆಂಗಳೂರು, ದಿನಾಂಕ 20-03-2012

ಮೆ॥ ಎಂಎಸ್‌ಜಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ನಾರಾಯಣಪುರ ಗ್ರಾಮದ (ಹಿಂದಿನ ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕು ದೇವರಗುಡ್ಡಿ ಗ್ರಾಮ) ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ಮಂಜೂರಾಗಿರುವ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 8.00 ಮೆಗಾ ವ್ಯಾಟ್ ನಿಂದ 20.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಆದೇಶಿಸಿದೆ.

ತತ್ಪರಿಣಾಮ, ನಾರಾಯಣಪುರ ಎಡದಂಡೆ ಕಾಲುವೆಯಲ್ಲಿರುವ ಮೆ॥ ಮುರುಡೇಶ್ವರ ಪವರ್ ಕಾರ್ಪೋರೇಷನ್ ರವರ ವಿದ್ಯುತ್ ಸ್ಥಾವರದಿಂದ ನದಿಗೆ ನೀರು ಬಿಡುವ ಟೈಲ್ ರೇಸ್ ಸ್ಥಳದಿಂದ ನೀರಿನ ಮಾರ್ಗವನ್ನು ಮುಂದುವರೆದು ಮೆ॥ ಎಂಎಸ್‌ಜಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಈ ಯೋಜನೆಯ ತಡೆಗೋಡೆಯನ್ನು ನದಿಯ ಎಡದಂಡೆಯ 478 ಮೀ. ನಲ್ಲಿ ನಿರ್ಮಾಣ ಮಾಡಿ ವಿದ್ಯುತ್ ಸ್ಥಾವರದಿಂದ ನದಿಗೆ ನೀರು ಬಿಡುವಾಗ ಟೈಲ್‌ರೇಸ್ ಪಾತಳಿಯು 460 ಮೀ.ಗೆ ಇರುವಂತೆ ಬದಲಾಯಿಸುವುದು.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಅರಣ್ಯ ಮತ್ತು ನೀರಾವರಿ ಇಲಾಖೆಗಳ ಅನುಮೋದನೆ ಪಡೆಯತಕ್ಕದ್ದು.

ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 14-09-2010 ರಿಂದ 13-09-2013 ರವರೆಗೆ ವಿಸ್ತರಿಸಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 956 ಇಂಧನ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2011-12ನೇ ಸಾಲಿನಲ್ಲಿ ರೂ. 200.00 ಕೋಟಿಗಳ ಸಾಲವನ್ನು ಹಣಕಾಸು ಸಂಸ್ಥೆಗಳಿಂದ ಪಡೆಯಲು ಸರ್ಕಾರದ ಖಾತರಿ ನೀಡುವ ಕುರಿತು.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಪತ್ರ ಸಂಖ್ಯೆ: ಕಜಮಂ:ಮುಲೆಅ:ಲೆ-2:ಸಲೆಅ-1:ಎಎ-4:ಐಇ ಬಿಆರ್:1856/2011-12, ದಿನಾಂಕ 02-01-2012.

ಪ್ರಸ್ತಾವನೆ:

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 2011-12ನೇ ಸಾಲಿನಲ್ಲಿ ಮುಂದುವರೆದ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರವು ಆಯವ್ಯಯದಲ್ಲಿ ಐಇಬಿಆರ್ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುವು ಮಾಡಿರುವ ರೂ. 370.00 ಕೋಟಿಗಳ ಸಾಲವನ್ನು ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆಯವ್ಯಯದಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಒದಗಿಸಿದ ಅನುದಾನ ಮತ್ತು ಸರ್ಕಾರದ ಸಾಲವನ್ನು ಹೊರತುಪಡಿಸಿ ಮಂಡಳಿಗೆ ಕಾರ್ಯಪ್ರಗತಿಯಲ್ಲಿರುವ ಯೋಜನೆಗಳ ಆರ್ಥಿಕ ಮಾದರಿಯಂತೆ ಅವುಗಳ ಶೀಘ್ರ ಅನುಷ್ಠಾನಕ್ಕಾಗಿ ಪ್ರಪ್ರಥಮವಾಗಿ ರೂ. 200.00 ಕೋಟಿಗಳ ಬಂಡವಾಳವನ್ನು ಸಾಲದ ಮೂಲಕ ಕ್ರೋಡೀಕರಿಸಲು ಮಂಡಳಿಯು ಉದ್ದೇಶಿಸಿದೆ. ಪ್ರಥಮವಾಗಿ ಈ ಕೆಳಕಂಡ 4 ಸ್ಥಳೀಯ ಸಂಸ್ಥೆಯ ಯೋಜನೆಗಳ ಮುಂದುವರೆದ ಕಾಮಗಾರಿಗಳಿಗೆ ಬಳಸಿಕೊಳ್ಳಲು ಉದ್ದೇಶಿಸಿ ಪ್ರಸ್ತಾವನೆಯನ್ನು ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ರೂ. ಲಕ್ಷಗಳಲ್ಲಿ

ಕ್ರ.ಸಂ.	ಯೋಜನೆಯ ಹೆಸರು	ಅಂದಾಜು ವೆಚ್ಚ	ಆರ್ಥಿಕ ಮಾದರಿಯಂತೆ ಪಡೆಯಬಹುದಾದ ಸಾಲ	ಪ್ರಸ್ತುತ ಕೋರಿರುವ ಮೊತ್ತ
1	ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಮಾರ್ಗಮಧ್ಯದ ಹಳ್ಳಿಗಳು	16000.00	8617.55	8617.55
2	ಹುಬ್ಬಳ್ಳಿ-ಧಾರವಾಡ	15200.00	10134.00	10134.00
3	ಬಾಗಲಕೋಟೆ	1056.20	528.10	308.45
4	ಶಿಕಾರಿಪುರ ವಿತರಣಾ ಜಾಲ	1880.00	940.00	940.00
	ಒಟ್ಟು	34136.20	20219.65	20000.00

ಮೇಲೆ ಸೂಚಿಸಲಾದ 4 ಯೋಜನೆಗಳ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸದರಿ ಸಾಲವನ್ನು ಮರುಪಾವತಿ ಮಾಡಲು ಮತ್ತು ಒಂದು ವೇಳೆ ಮರುಪಾವತಿ ಮಾಡಲು ವಿಳಂಬವಾದಲ್ಲಿ ಸದರಿ ಮೊತ್ತವನ್ನು ಎಸ್.ಎಫ್.ಸಿ., ಅನುದಾನದಿಂದ ಭರಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ ಎಂದು ಮಂಡಳಿಯು ತಿಳಿಸಿರುತ್ತದೆ. ಇದಲ್ಲದೆ, ಪ್ರಸ್ತುತ ರೂ. 200.00 ಕೋಟಿಗಳ ಸಾಲವನ್ನು ಪಡೆಯಲು ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೋರಿ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ್ದು. ಸದರಿ ಪ್ರಕಟಣೆಗೆ ಈ ಕೆಳಕಂಡ 3 ಹಣಕಾಸು ಸಂಸ್ಥೆಗಳು ತಮ್ಮ ದರಗಳನ್ನು ನಮೂದಿಸಿರುತ್ತಾರೆ.

ಕ್ರ.ಸಂ.	ಹಣಕಾಸು ಸಂಸ್ಥೆಯ ಹೆಸರು	ಬಡ್ಡಿ ದರ	ಷರಾ
1	ವಿಜಯ ಬ್ಯಾಂಕ್, ಇಂದಿರಾನಗರ ಶಾಖೆ	10.90% (ಪ್ಲೋಟಿಂಗ್ ದರ)	10 ವರ್ಷಗಳಲ್ಲಿ ಸಾಲವನ್ನು ಮರುಪಾವತಿ ಮಾಡುವುದು ಮತ್ತು ಪ್ರಾಥಮಿಕ 2 ವರ್ಷಗಳ ಮಾರಟೋರಿಯಂ ಅವಧಿ
2	ಸಿಂಡಿಕೇಟ್ ಬ್ಯಾಂಕ್, ರಾಜಾಜಿನಗರ ಶಾಖೆ	11.25% (ಪ್ಲೋಟಿಂಗ್ ದರ)	10 ವರ್ಷಗಳಲ್ಲಿ ಸಾಲವನ್ನು ಮರುಪಾವತಿ ಮಾಡುವುದು ಮತ್ತು ಪ್ರಾಥಮಿಕ 2 ವರ್ಷಗಳ ಮಾರಟೋರಿಯಂ ಅವಧಿ
3	ಯೂನಿಯನ್ ಬ್ಯಾಂಕ್, ಜೆ. ಸಿ. ರಸ್ತೆ, ಶಾಖೆ	11.15% (ಪ್ಲೋಟಿಂಗ್ ದರ)	10 ವರ್ಷಗಳಲ್ಲಿ ಸಾಲವನ್ನು ಮರುಪಾವತಿ ಮಾಡುವುದು ಮತ್ತು ಪ್ರಾಥಮಿಕ 2 ವರ್ಷಗಳ ಮಾರಟೋರಿಯಂ ಅವಧಿ

ಮಂಡಳಿಯು ಮೇಲಿನ ಹಣಕಾಸು ಸಂಸ್ಥೆಗಳ ಪೈಕಿ ಅತೀ ಕಡಿಮೆ ಬಡ್ಡಿ ದರವಾದ 10.90% ನಮೂದಿಸಿರುವ ವಿಜಯ ಬ್ಯಾಂಕ್, ಇಂದಿರಾನಗರ ಶಾಖೆ ಇವರಿಂದ ರೂ. 200.00 ಕೋಟಿಗಳ ಸಾಲವನ್ನು ಪಡೆಯಲು ಸರ್ಕಾರದ ಖಾತರಿಯನ್ನು ಕೋರಿರುತ್ತದೆ.

ಮೇಲಿನ ಅಂಶಗಳನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಲ್ 2010, ಬೆಂಗಳೂರು, ದಿನಾಂಕ 16-03-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2011-12ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಮುಂದುವರೆದ ಯೋಜನೆಗಳ ಅನುಷ್ಠಾನಕ್ಕೆ ಐಇಬಿಆರ್ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುವು ಮಾಡಿರುವ ರೂ. 370.00 ಕೋಟಿಗಳ ಸಾಲದ ಪೈಕಿ ಆಯವ್ಯಯದಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಒದಗಿಸಿದ ಅನುದಾನ ಮತ್ತು ಸರ್ಕಾರದ ಸಾಲವನ್ನು ಹೊರತುಪಡಿಸಿ ಮಂಡಳಿಗೆ ಕಾರ್ಯಪ್ರಗತಿಯಲ್ಲಿರುವ ಯೋಜನೆಗಳ ಆರ್ಥಿಕ ಮಾದರಿಯಂತೆ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಲು ಕಲ್ಪಿಸಿರುವ ಅವಕಾಶದಂತೆ ಈ ಕೆಳಕಂಡ ಯೋಜನೆಗಳ ಅವುಗಳ ಶೀಘ್ರ ಅನುಷ್ಠಾನಕ್ಕಾಗಿ ಪ್ರಪ್ರಥಮವಾಗಿ ರೂ. 200.00 ಕೋಟಿಗಳ ಬಂಡವಾಳವನ್ನು ಸಾಲದ ಮೂಲಕ ಕ್ರೋಢಿಕರಿಸಲು ಮಂಡಳಿಯು ವಿಜಯ ಬ್ಯಾಂಕ್, ಇಂದಿರಾ ನಗರ ಶಾಖೆ ರವರಿಂದ ಶೇ. 10.90% (10.65 ಬಿ.ಆರ್.+0.25) ಬಡ್ಡಿ ದರದಲ್ಲಿ (ಪ್ಲೋಟಿಂಗ್) ಸಾಲವನ್ನು ಪಡೆಯಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿದೆ.

ರೂ. ಲಕ್ಷಗಳಲ್ಲಿ

ಕ್ರ.ಸಂ.	ಯೋಜನೆಯ ಹೆಸರು	ಅಂದಾಜು ವೆಚ್ಚ	ಆರ್ಥಿಕ ಮಾದರಿಯಂತೆ ಪಡೆಯಬಹುದಾದ ಸಾಲ	ಪ್ರಸ್ತುತ ಕೋರಿರುವ ಮೊತ್ತ
1	ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಮಾರ್ಗಮಧ್ಯದ ಹಳ್ಳಿಗಳು	16000.00	8617.55	8617.55
2	ಹುಬ್ಬಳ್ಳಿ-ಧಾರವಾಡ	15200.00	10134.00	10134.00

3	ಬಾಗಲಕೋಟೆ	1056.20	528.10	308.45
4	ಶಿಕಾರಿಪುರ ವಿತರಣಾ ಜಾಲ	1880.00	940.00	940.00
	ಒಟ್ಟು	34136.20	20219.65	20000.00

1) ಸದರಿ ಸಾಲವನ್ನು ಯೋಜನೆಯ ಪ್ರಗತಿಗನುಸಾರವಾಗಿ ಹಂತ ಹಂತವಾಗಿ ಪಡೆಯತಕ್ಕದ್ದು; ಮತ್ತು ಈ ರೀತಿ ಪಡೆಯುವ ಸಾಲವನ್ನು ಪಡೆಯುವ ದಿನಾಂಕದಂದು ಜಾರಿಯಲ್ಲಿರುವ ಬೇಸಿಕ್ ದರಗಳಾದಾರದನ್ವಯ ಪಡೆಯತಕ್ಕದ್ದು; ಯಾವುದೇ ಕಾರಣಕ್ಕೂ ಬ್ಯಾಂಕ್ ವಿಧಿಸುವ ಬೇಸಿಕ್ ದರದ ಮೇಲೆ ವಿಧಿಸುವ ಶೇಕಡ +0.25 (ಟರ್ಮ್ ಪ್ರೀಮಿಯಂ) ಬದಲಾಯಿಸತಕ್ಕದಲ್ಲ;

2) ಸಾಲವನ್ನು ಮಂಡಳಿಯು ಮೇಲೆ ಕೋರಿರುವ ಯೋಜನೆಗಳಿಗೆ ಹೊರತು ಪಡಿಸಿ ಬೇರೆ ಯೋಜನೆಗಳ ಪ್ರಗತಿಗೆ ಬಳಸಬಾರದು;

3) ಮಂಡಳಿಯು ಯೋಜನಾ ಕಾಮಗಾರಿಗಳ ಪ್ರಗತಿಯನ್ನು ಮತ್ತು ಸಾಲವನ್ನು ಪಡೆದ ದಿನಾಂಕದಿಂದ ತ್ರೈಮಾಸಿಕವಾಗಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು;

4) ಸಾಲವನ್ನು 10 ವರ್ಷಗಳಲ್ಲಿ ಮರುಪಾವತಿ ಮಾಡತಕ್ಕದ್ದು ಮತ್ತು ಪ್ರಾಥಮಿಕ 2 ವರ್ಷಗಳ ಮಾರಟೋರಿಯಂ ಅವಧಿಗೊಳಪಡತಕ್ಕದ್ದು;

5) ಮಂಡಳಿಯು ಸರ್ಕಾರಕ್ಕೆ ವಾರ್ಷಿಕ ಶೇ. 1% ರಷ್ಟು ಗ್ಯಾರಂಟಿ ಕಮೀಷನ್ ನೀಡತಕ್ಕದ್ದು ಮತ್ತು ಸದರಿ ಮೊತ್ತವನ್ನು ಎಸ್.ಎಫ್.ಸಿ. ಅನುದಾನದಲ್ಲಿ ಸರ್ಕಾರವು ಬಿಡುಗಡೆ ಮಾಡುವ ಮೊತ್ತದಲ್ಲಿ ಕಡಿತಗೊಳಿಸಲಾಗುವುದು;

6) ಸಾಲದ ಮೊತ್ತವನ್ನು 10 ವರ್ಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಮರುಪಾವತಿ ಮಾಡಿದಲ್ಲಿ ಫ್ರೀಕ್ಲೋಷರ್ ಮತ್ತು ಪ್ರೀಪೇಮೆಂಟ್ ಚಾರ್ಜ್‌ಗಳನ್ನು ಬ್ಯಾಂಕ್ ವಿಧಿಸತಕ್ಕದಲ್ಲ;

7) ಮಾರಿಟೋರಿಯಂ ಅವಧಿಯಲ್ಲಿ ವಿಧಿಸುವ ಬಡ್ಡಿ ದರವು ಶೇ. 10.90% ಮೀರುವ ಹಾಗಿಲ್ಲ;

8) ಮಂಡಳಿಯು ಬ್ಯಾಂಕಿನೊಂದಿಗೆ ಮಾಡಿಕೊಳ್ಳುವ ಒಪ್ಪಂದವನ್ನು ಸೂಕ್ತವಾಗಿ ಪರಿಶೀಲಿಸಿ, ಸರ್ಕಾರವು ನೀಡಿದ ನಿರ್ದೇಶನಗಳನ್ವಯ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಮಾಡಿಕೊಳ್ಳುವುದು;

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ. ಎಂ ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 957 ನಗರಾಭಿವೃದ್ಧಿ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣಕ್ಕೆ ವಿತರಣಾ ಕೊಳವೆ ಮಾರ್ಗವನ್ನು ಅಂದಾಜು ರೂ. 2071.00 ಲಕ್ಷಗಳಲ್ಲಿ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1. ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ರವರ ಪತ್ರ ಸಂಖ್ಯೆ: ಕಜಮಂ:ವ್ಯನಿ/ಮುಅ(ಉ)ಆಶ್ರೇಕಾಅಬಿಜಿಎಂ/ನಿಸಯೋ/ಬಾಗಲಕೋಟೆ/ಎಫ್–35/99/2011–12 ದಿನಾಂಕ: 12–04–2011.

ಪ್ರಸ್ತಾವನೆ :

ಜಮಖಂಡಿ ಪಟ್ಟಣವು ಬಾಗಲಕೋಟೆ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿ ಪ್ರಕಾರ ಪಟ್ಟಣದ ಜನಸಂಖ್ಯೆಯು 57883 ಇದ್ದು ಪ್ರಸ್ತುತ 69000 ಇರುತ್ತದೆ.

ಜಮಖಂಡಿ ಪಟ್ಟಣಕ್ಕೆ ಮೂರು ಹಂತಗಳಲ್ಲಿ ನೀರು ಸರಬರಾಜು ಯೋಜನೆಯನ್ನು ಅಭಿವೃದ್ಧಿಗೊಳಿಸಿದ್ದು, ಮೊದಲನೇ ಹಂತವನ್ನು 1956ರಲ್ಲಿಯೂ 2ನೇ ಹಂತವನ್ನು 1976ರಲ್ಲಿಯೂ ಹಾಗೂ 3ನೇ ಹಂತವನ್ನು 2009ನೇ ಸಾಲಿನಲ್ಲಿ ಚಾಲನೆಗೊಳಿಸಲಾಗಿದೆ. ಪ್ರಸ್ತುತ ಪಟ್ಟಣಕ್ಕೆ 15 ಎಂ.ಎಲ್.ಡಿ., ನೀರನ್ನು ಕೃಷ್ಣ ನದಿಗೆ ಅಡ್ಡಲಾಗಿ ಕಟ್ಟಿರುವ ಹಿಪ್ಪರಗಿ ಬ್ಯಾರೇಜಿನ ನೀರಿನ ಹೊಳೆಯಿಂದ (Upstream) ಪಡೆಯಲಾಗುತ್ತಿದೆ. ಪ್ರಸ್ತುತ ಈ ಪಟ್ಟಣಕ್ಕೆ 2ನೇ ಮತ್ತು 3ನೇ ಹಂತದ ಯೋಜನೆಯನ್ನು ರೂ. 1184.93 ಲಕ್ಷಗಳಲ್ಲಿ ಸರ್ಕಾರವು ನಅಇ 05 ಯುಡಬ್ಲ್ಯೂಎಸ್ 2000 ದಿನಾಂಕ: 13–05–2002 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾದ ಯೋಜನೆಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯನ್ನು 106571 ಜನಸಂಖ್ಯೆಗೆ ತಲಾದಿನಂಪ್ರತಿ 100 ಲೀಟರ್‌ನಂತೆ, ಸರಬರಾಜು ಮಾಡಲು ವಿನ್ಯಾಸಿಸಿ, ಜನವರಿ 2009ರಲ್ಲಿ ಅನುಷ್ಠಾನಗೊಳಿಸಲಾಯಿತು.

ಮೇಲಿನ ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ವಿತರಣಾ ಕೊಳವೆ ಮಾರ್ಗಗಳ ಬಗ್ಗೆ ಹೆಚ್ಚಿನ ಹೊತ್ತು ನೀಡದ ಕಾರಣ ಮತ್ತು ಅಂದಾಜು ಪಟ್ಟಿಯಲ್ಲಿ ಈ ಬಗ್ಗೆ ಸೇರಿಸದ ಕಾರಣ ಹಾಗೂ ಯೋಜನೆಯ ಅಂದಾಜಿನಲ್ಲಿ ಸೂಕ್ತ ಮೊತ್ತವನ್ನು ಒದಗಿಸದಿರುವದರಿಂದ, ವಿತರಣಾ ವ್ಯವಸ್ಥೆಯನ್ನು ಸುಧಾರಿಸಲು ಸಾಧ್ಯವಾಗಲಿಲ್ಲ. ಹಾಲಿ ಇರುವ ವಿತರಣಾ ಕೊಳವೆ ಮಾರ್ಗವು ತುಂಬ ಹಳೆಬದಾಗಿದ್ದು. ಸದರಿ ವಿತರಣಾ ಕೊಳವೆ ಮಾರ್ಗವನ್ನು ಪುನರ್‌ಸ್ಥಾಪಿಸಬೇಕಾಗಿರುತ್ತದೆ. ಪ್ರಸ್ತುತ ಸಾಕಷ್ಟು ಸಗಟು ನೀರು ಸರಬರಾಜು ಮಾಡುತ್ತಿರುವುದರಿಂದ ವಿತರಣಾ ಕೊಳವೆ ಮಾರ್ಗವನ್ನು ಅಳವಡಿಸಬೇಕಾಗಿದೆ.

ಸದರಿ ಅಂದಾಜನ್ನು 2043 ರಲ್ಲಿ ನಿರೀಕ್ಷಿಸಲಾದ 123295 ಜನಸಂಖ್ಯೆಗೆ ತಲಾದಿನಂಪ್ರತಿ 135 ಎಲ್‌ಪಿಸಿಡಿ ಒದಗಿಸಲು ವಿನ್ಯಾಸಿಸಲಾಗಿದೆ. ಇದಲ್ಲದೆ, ವಿತರಣಾ ವ್ಯವಸ್ಥೆಯನ್ನು ಪೂರ್ಣ ಪಟ್ಟಣಕ್ಕೆ ಒದಗಿಸುವುದು ಮತ್ತು 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಪಟ್ಟದ ಜಲಸಂಗ್ರಹಾಗಾರವನ್ನು ನಿರ್ಮಿಸಲು ಅನುವು ಮಾಡಲಾಗಿದೆ.

ಸರ್ಕಾರವು ಸದರಿ ಯೋಜನೆಯ ಅಂದಾಜು ಪಟ್ಟಿಯನ್ನು 2011–12ನೇ ಸಾಲಿನ ದರ ಪಟ್ಟಿಯನ್ವಯ ಪರಿಷ್ಕರಿಸಿ ಸಲ್ಲಿಸುವಂತೆ ಸೂಚಿಸಿದ ಹಿನ್ನಲೆಯಲ್ಲಿ ಸದರಿ ಅಂದಾಜು ಪಟ್ಟಿಯನ್ನು ಮಂಡಳಿಯು ಪರಿಷ್ಕರಿಸಿ ಈಗಾಗಲೆ ಸಲ್ಲಿಸಿದ ರೂ. 1876.00 ಲಕ್ಷಗಳಿಂದ ರೂ. 2071.00 ಲಕ್ಷಗಳಿಗೆ ಪರಿಷ್ಕರಿಸಿ ಸಲ್ಲಿಸಿರುತ್ತದೆ. ಮತ್ತು ಸದರಿ ಅಂದಾಜು ಪಟ್ಟಿಯ ಆರ್ಥಿಕ ಮಾದರಿಯನ್ನು ಸರ್ಕಾರವು ನಗರ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯ ಆರ್ಥಿಕ ಮಾದರಿಯನ್ನು ದಿನಾಂಕ: 20–07–2011 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ, ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಸ್ 2011ರಲ್ಲಿ ಆದೇಶಿಸಿದಂತೆ ಈ ಕೆಳಕಂಡಂತೆ ಪರಿಷ್ಕರಿಸಿ ಸಲ್ಲಿಸಿರುತ್ತದೆ.

ಕರ್ನಾಟಕ ಸರ್ಕಾರದ ಅನುದಾನ (60%)	ರೂ. 1242.60 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (30%)	ರೂ. 621.30 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (10%)	ರೂ. 207.10 ಲಕ್ಷಗಳು
ಒಟ್ಟು	ರೂ. 2071.00 ಲಕ್ಷಗಳು

ಈ ಯೋಜನೆಯನ್ನು ಮಂಡಳಿಯ 2011–12ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ಪ್ರವರ್ಗ–ಡಿ ಯಡಿಯಲ್ಲಿ ರೂ. 626.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಜಮಖಂಡಿ ಸ್ಥಳೀಯ ಸಂಸ್ಥೆಯು ಯೋಜನೆಯಲ್ಲಿ ಉದ್ಭವಿಸಬಹುದಾದ ಏಸ್ಕಲೇಷನ್ ಮತ್ತು ಟೆಂಡರ್ ಪ್ರಿಮಿಯಂ ದರಗಳನ್ನು ಭರಿಸಲು ಒಪ್ಪಿದ್ದು ಅದರಂತೆ ಯೋಜನಾ ಅಂದಾಜಿನಲ್ಲಿ ಸೇರಿಸಿರುವ ಮೊತ್ತವನ್ನು ಹೊರತುಪಡಿಸಲಾಗಿದೆ. ಬಾಕಿ ಉಳಿದಂತೆ ಯೋಜನೆಯ ಅಂದಾಜಿನಲ್ಲಿ ಸೇರಿಸಲಾದ ಇಟಿಪಿ ಮತ್ತು ಡಬ್ಲ್ಯೂಸಿಇ/ಸಾಧಿಲ್ವಾರು ವೆಚ್ಚಗಳನ್ನು ಶೇಕಡ 5 ಕ್ಕೆ ಮಿತಿಗೊಳಿಸಬೇಕಾಗಿದೆ. ಅಂದರೆ ಮೂಲ ಅಂದಾಜು ಮೊತ್ತವಾದ ರೂ. 1629.95 ಲಕ್ಷಗಳಿಗೆ ಇಟಿಪಿ ಮೊತ್ತವನ್ನು ರೂ. 81.50 ಲಕ್ಷಗಳಿಗೆ ಮಿತಿಗೊಳಿಸಿ ಇತರೆ ವೆಚ್ಚಗಳಾದ ರೂ. 0.55 ಲಕ್ಷಗಳನ್ನು ಸೇರಿಸಿ ಯೋಜನೆಯ ಅಂದಾಜು ವೆಚ್ಚವನ್ನು ರೂ. 2071.00 ಲಕ್ಷಗಳಿಂದ ರೂ. 1712.00 ಲಕ್ಷಗಳಿಗೆ ಮಿತಿಗೊಳಿಸಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 08 ಯುಡಬ್ಲ್ಯೂಎಸ್ 2011 ಬೆಂಗಳೂರು, ದಿನಾಂಕ: 16–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರ ಸಭೆ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ವಿತರಣಾ ಕೊಳವೆ ಮಾರ್ಗಗಳನ್ನು ಅಂದಾಜು ರೂ. 1712.00 ಲಕ್ಷಗಳಲ್ಲಿ (ರೂ. ಒಂದು ಸಾವಿರದ ಏಳುನೂರ ಹನ್ನೆರಡು ಲಕ್ಷಗಳು ಮಾತ್ರ) ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. The ULB has agreed to bear the Excalation and tender premium charges in its resulation dated: 24-01-2011 hence the estimate is reduced to such extent.
2. ETP & contingencies are restricted to 5%
3. Adequate provision to be made by the Board in the following years for timely completion of the Project.
4. Water rates as proposed by KUWS&DB have to be implemented to meet O & M cost of UGD.
5. KTPP provisions, quality control and timely completion should ensured.
6. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
7. ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.
8. ಯೋಜನೆಯ ಆರ್ಥಿಕ ಮಾದರಿಯಂತೆ ಸ್ಥಳೀಯ ಸಂಸ್ಥೆಯು ತನ್ನ ಪಾಲಿನ ಮೊತ್ತವಾದ ಶೇ. 10 ರಷ್ಟು ಅಂದರೆ ರೂ. 207.10 ಲಕ್ಷಗಳನ್ನು ಭರಿಸಲು ಠರಾವು ಪಾಸು ಮಾಡಿ ಒಪ್ಪಿಗೆ ಪತ್ರ ಸೂಚಿಸಿದ ನಂತರ ಯೋಜನೆಯನ್ನು ಕೈಗೆತ್ತಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಎಫ್‌ಡಿ 38 ಇಎಕ್ಸ್‌ಪಿ09 2012 ದಿನಾಂಕ: 10–12–2012 ಮತ್ತು ಟಿಪ್ಪಣಿ ಸಂಖ್ಯೆ: ಎಫ್‌ಡಿ 568 ಇಎಕ್ಸ್‌ಪಿ–9 2012 ದಿನಾಂಕ: 02–11–2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎಂ. ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ.

ಪಿಆರ್ ನಂ. 958

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಶ್ರೀ ಎಂ. ಮುನಿರಾಜು, ಸಹಾಯಕ ನಿರ್ದೇಶಕರು (ಐ.ಸಿ.ಡಿ.ಎಸ್) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಪ್ರಸ್ತುತ ವರ್ಗಾವಣೆ ಆದೇಶದಲ್ಲಿರುವಂತೆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಉಪ ನಿರ್ದೇಶಕರ ಕಛೇರಿ, ರಾಮನಗರ ಜಿಲ್ಲೆ ಇವರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವ ಆದೇಶ.

ಓದಲಾಗಿದೆ :
1. ದಿನಾಂಕ: 10-03-2012 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಮಾಹಿತಿ. "ಐಎಎಸ್ ಅಧಿಕಾರಿ ಮನೆ ಸೇರಿ 20 ಕಡೆ ಲೋಕಾಯುಕ್ತ ದಾಳಿ"
2. ಪೋಲೀಸ್ ಉಪ ಅಧೀಕ್ಷಕರು-4, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಕಛೇರಿಯ ಬಂಧನ ತಿಳುವಳಿಕೆ ಪತ್ರ ದಿನಾಂಕ: 12-03-2012.
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಕಛೇರಿಯ ಅರೆ ಸರ್ಕಾರಿ ಪತ್ರ ಸಂಖ್ಯೆ: ಮಮಅಇ/ಆಶಾ/11-12 ದಿನಾಂಕ: 17-03-2012.

ಪ್ರಸ್ತಾವನೆ :

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ (ಐಸಿಡಿಎಸ್) ಭಾರಿ ಪ್ರಮಾಣದ ಅವ್ಯವಹಾರ ನಡೆದಿರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ್ದು, ಹಿಂದಿನ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರ ನಿವಾಸವನ್ನೊಳಗೊಂಡಂತೆ ರಾಜ್ಯದ ವಿವಿದೆಡೆ 20 ಕಡೆಗಳಲ್ಲಿ ದಿನಾಂಕ: 09-03-2012 ರಂದು ಏಕಕಾಲಕ್ಕೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀಮತಿ ಉಷಾ ಪಟವಾರಿ, ಸಹಾಯಕ ನಿರ್ದೇಶಕರಾದ ಶ್ರೀ ಎಂ. ಮುನಿರಾಜು ಇವರುಗಳ ಮನೆ ಮತ್ತು ಕಛೇರಿಗಳಿಗೆ ದಾಳಿ ನಡೆಸಿ ಐ.ಸಿ.ಡಿ.ಎಸ್. ಯೋಜನೆಯ ಪೌಷ್ಟಿಕ ಆಹಾರ ಮತ್ತು ಔಷಧಿ ಪೂರೈಕೆ ಗುತ್ತಿಗೆ ಪಡೆದಿರುವ ತಮಿಳುನಾಡು ಮೂಲದ ಕ್ರಿಸ್ಟಿ ಫ್ರೈಡ್‌ಗ್ರಾಮ್ಸ್ ಕಛೇರಿ, ಗೋದಾಮುಗಳ ಮೇಲೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ನಿರ್ದೇಶನಾಲಯ, ಅಂಗನವಾಡಿ ಕೇಂದ್ರಗಳು ಮತ್ತು ಮಹಿಳಾ ಸಂಘಗಳ ಉತ್ಪಾದನಾ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿರುವುದು ಉಲ್ಲೇಖ (1) ರನ್ವಯ ವರದಿಯಾಗಿರುತ್ತದೆ.

ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ, ವಿಭಾಗ ಪೊಲೀಸ್ ಠಾಣಾ ಮೊ.ಸಂ. 20/2012 ಕಲಂ 12, 13, (1) ಡಿ ರೆ/ವಿ 13(2) ಲಂ.ನಿ.ಕಾಯ್ದೆ 1988 ಮತ್ತು 201 ಐಪಿಸಿ ರ ಪ್ರಕರಣದನ್ವಯ ಶ್ರೀ ಎಂ. ಮುನಿರಾಜು, ಸಹಾಯಕ ನಿರ್ದೇಶಕರು (ಐಸಿಡಿಎಸ್), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಕಛೇರಿಯ ಕೊಠಡಿಯ ಶೋಧನಾ ಸಮಯದಲ್ಲಿ ಪಂಚಸಾಕ್ಷಿದಾರರ, ಲೋಕಾಯುಕ್ತ ಅಧಿಕಾರಿ, ಸಿಬ್ಬಂದಿಯರ ಸಮ್ಮುಖದಲ್ಲಿ ಒಂದು ಸಿ.ಡಿ.ಯನ್ನು ಮುರಿಯುವ ಮೂಲಕ ಸಾಕ್ಷ್ಯ ನಾಶಪಡಿಸಿದ್ದರಿಂದ ದಿನಾಂಕ: 12-03-2012 ರಂದು ಸಂಜೆ 6.30 ಸಮಯದಲ್ಲಿ ದಸ್ತಗಿರಿ ಮಾಡಿ, ಸದರಿ ಅಧಿಕಾರಿಯನ್ನು ಲೋಕಾಯುಕ್ತ ಪೊಲೀಸ್‌ರು ವಶಕ್ಕೆ ತೆಗೆದುಕೊಂಡು, ಅವರನ್ನು ಮುಂದಿನ ವಿಚಾರಣೆಗಾಗಿ ತಮ್ಮ ಅಧೀನದಲ್ಲಿಟ್ಟುಕೊಂಡಿರುವುದು ಉಲ್ಲೇಖ (2)ರ ದಿನಾಂಕ: 12-03-2012ರ ಪತ್ರದಲ್ಲಿ ವರದಿಯಾಗಿರುವುದನ್ನು ಉಲ್ಲೇಖ (3)ರ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರ ದಿನಾಂಕ: 17-03-2012ರ ಅರೆ ಸರ್ಕಾರಿ ಪತ್ರದಲ್ಲಿ ವರದಿ ನೀಡಿ ಶ್ರೀ ಎಂ. ಮುನಿರಾಜು, ಸಹಾಯಕ ನಿರ್ದೇಶಕರು (ಐ.ಸಿ.ಡಿ.ಎಸ್) ಪ್ರಧಾನ ಕಛೇರಿ, ಬೆಂಗಳೂರು ಇವರನ್ನು ಬಂಧನದಿಂದ ಬಿಡುಗಡೆಯಾದ ಬಗ್ಗೆ ಇನ್ನು ಮಾಹಿತಿ ಬಂದಿಲ್ಲವಾದ್ದರಿಂದ ಇವರನ್ನು ಕೆ.ಸಿ.ಎಸ್. (ಸಿ.ಸಿ.ಎ) ನಿಯಮ 1957ರಡಿ ಇವರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಲು ಕೋರಿರುತ್ತಾರೆ.

ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ 10(2) (ಎ) ರನ್ವಯ ಯಾವುದೇ ಒಬ್ಬ ಸರ್ಕಾರಿ ಅಧಿಕಾರಿ/ನೌಕರರನ್ನು ಕ್ರಿಮಿನಲ್ ಮೊಕದ್ದಮೆ ಅಡಿ 48 ಗಂಟೆಗಳ ಕಾಲ ದಸ್ತಗಿರಿ ಮಾಡಿ ವಶದಲ್ಲಿಟ್ಟುಕೊಂಡಲ್ಲಿ ಅಂತಹ ಅಧಿಕಾರಿ/ನೌಕರರನ್ನು ದಸ್ತಗಿರಿ ಮಾಡಿದ ದಿನಾಂಕದಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿಯಿರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಈ ಪ್ರಕರಣದಲ್ಲಿ ಶ್ರೀ ಎಂ. ಮುನಿರಾಜು, ಸಹಾಯಕ ನಿರ್ದೇಶಕರು (ಐ.ಸಿ.ಡಿ.ಎಸ್) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಪ್ರಸ್ತುತ ವರ್ಗಾವಣೆ ಆದೇಶದಲ್ಲಿರುಂತೆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಉಪ ನಿರ್ದೇಶಕರ ಕಛೇರಿ, ರಾಮನಗರ ಜಿಲ್ಲೆ ಇವರನ್ನು ದಿನಾಂಕ: 12-03-2012 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿಯಿರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 121 ಎಸ್‌ಜೆಡಿ 2012 ಬೆಂಗಳೂರು, ದಿನಾಂಕ: 17-03-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎಂ. ಮುನಿರಾಜು, ಸಹಾಯಕ ನಿರ್ದೇಶಕರು (ಐ.ಸಿ.ಡಿ.ಎಸ್) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಉಪ ನಿರ್ದೇಶಕರ ಕಛೇರಿ ರಾಮನಗರ ಜಿಲ್ಲೆ ಇಲ್ಲಿಗೆ ವರ್ಗಾವಣೆ

ಆದೇಶದಲ್ಲಿರುವ) ಇವರನ್ನು ದಿನಾಂಕ: 12-03-2012 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿಯಿರಿಸಿ ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ 10(2) (ಎ) ರನ್ವಯ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು 1957ರ ನಿಯಮ 98(1) ರನ್ವಯ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಲ್ಲದೇ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮೋದನೆ ಇಲ್ಲದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ-2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿಆರ್ ನಂ. 959

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ. ಎಂ. ಸೀಮಾ, ದಂತ ಆರೋಗ್ಯಾಧಿಕಾರಿ ಜಿಲ್ಲಾ ಆಸ್ಪತ್ರೆ, ಮಂಡ್ಯ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ : 1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಪಿಜಿ/ಮೈವಿ/05/2008-09 ದಿನಾಂಕ: 19-01-2010 ಮತ್ತು 21-12-2011.

ಪ್ರಸ್ತಾವನೆ :

ಡಾ. ಎಂ. ಸೀಮಾ ಇವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ/155/ಹೆಚ್‌ಸ್‌ಡಿ/2005 ದಿನಾಂಕ: 29-08-2005 ರಲ್ಲಿ ದಂತ ಆರೋಗ್ಯಾಧಿಕಾರಿ ಹುದ್ದೆಗೆ ನೇಮಕಗೊಂಡು ದಿನಾಂಕ: 01-09-2005 ರಂದು ಜಿಲ್ಲಾ ಆಸ್ಪತ್ರೆ ಮಂಡ್ಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ದಿನಾಂಕ: 10-01-2007 ರಿಂದ 09-02-2007 ರ ವರೆಗೆ ಸಂಯುಕ್ತ ರಜೆಯನ್ನು ಮಂಜೂರು ಮಾಡುವಂತೆ ಕೋರಿ ಮನವಿ ಸಲ್ಲಿಸಿ ನಂತರ ಈ ರಜೆಯನ್ನು ಮುಂದುವರೆಸಿ ಮಂಜೂರು ಮಾಡಲು ಕೋರಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ತದನಂತರ ದಿನಾಂಕ: 02-07-2007 ರ ಮನವಿಯಲ್ಲಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ದಿನಾಂಕ: 01-09-2007 ರಿಂದ ಅಂಗೀಕರಿಸಲು ಕೋರಿರುತ್ತಾರೆ. ಇವರಿಂದ ಸರ್ಕಾರಕ್ಕೆ ಯಾವುದೇ ಬಾಕಿ ಇರುವುದಿಲ್ಲವಾದ್ದರಿಂದ ಇವರ ರಾಜೀನಾಮೆಯನ್ನು ಅಂಗೀಕರಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 83 ಹೆಚ್‌ಎಸ್‌ಡಿ 2009 ಬೆಂಗಳೂರು, ದಿನಾಂಕ: 21-02-2012

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಡಾ. ಎಂ. ಸೀಮಾ ದಂತ ಆರೋಗ್ಯಾಧಿಕಾರಿ, ಜಿಲ್ಲಾ ಆಸ್ಪತ್ರೆ ಮಂಡ್ಯ ಇವರು ವೈಯಕ್ತಿಕ ಕಾರಣದಿಂದ ದಂತ ಆರೋಗ್ಯಾಧಿಕಾರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ದಿನಾಂಕ: 01-09-2007 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಸೇವೆಗಳು)

ಪಿಆರ್ ನಂ. 960

ಕಾರ್ಮಿಕ ಸಚಿವಾಲಯ

ವಿಷಯ : ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಕಾಇ 122 ಇಟಿಐ 2009 ದಿನಾಂಕ: 02-01-2010.

2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತನಿ/ತ/ಯೋ-3/ವಿವ-11/2009-10 ದಿನಾಂಕ: 13-01-2012.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತನ್ನು ದಿನಾಂಕ: 02-01-2010 ರಿಂದ ಎರಡು ವರ್ಷಗಳ ಅವಧಿಗೆ ಮುಂದುವರಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರದಲ್ಲಿ ರಾಜ್ಯದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುತ್ತಿರುವ ಕುಶಲ ಕರ್ಮಿ ತರಬೇತಿ ಯೋಜನೆಯನ್ನು ಕೇಂದ್ರ ಸರ್ಕಾರದ ನಿಯಮಾವಳಿಗಳಿಗನುಸಾರ

ಅನುಷ್ಠಾನಗೊಳಿಸಬೇಕಾಗಿದ್ದು. ಉದ್ಯೋಗ ಮತ್ತು ತರಬೇತಿ ಇಲಾಖೆಯು ತರಬೇತಿ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಿ, ಭವಿಷ್ಯದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡುವ ಸಲುವಾಗಿ ಈ ಪರಿಷತ್ತನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸಿರುವರು ಮತ್ತು ರಾಜ್ಯ ವೃತ್ತಿ ಶಿಕ್ಷಣ ಪರಿಷತ್ ಅಡಿಯಲ್ಲಿ ಅನುಮತಿ ನೀಡಿರುವ ವೃತ್ತಿ/ಘಟಕಗಳಿಗೆ ಪರೀಕ್ಷೆ ನಡೆಸಬೇಕಾಗಿದ್ದು. ಸಮಿತಿಯನ್ನು ಪುನರ್ ರಚಿಸದಿದ್ದಲ್ಲಿ, ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ, ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತನ್ನು ಮುಂದಿನ ಎರಡು ವರ್ಷಗಳಿಗೆ ಪುನರ್ ರಚಿಸಿ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 35 ಇಟಿಐ 2012 ಬೆಂಗಳೂರು, ದಿನಾಂಕ: 17–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತನ್ನು ಈ ಕೆಳಕಂಡ ಸದಸ್ಯರೊಂದಿಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಪುನರ್ ರಚಿಸಿ ಆದೇಶ ಹೊರಡಿಸಲಾಗಿದೆ.

1.	ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು	ಅಧ್ಯಕ್ಷರು
2.	ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಅಥವಾ ಅವರ ಪ್ರತಿನಿಧಿ	ಉಪಾಧ್ಯಕ್ಷರು
3.	ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ	ಸದಸ್ಯ ಕಾರ್ಯದರ್ಶಿ
4.	ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಅಥವಾ ಅವರಿಂದ ನಾಮನಿರ್ದೇಶನ ಹೊಂದಿರುವವರು	ಸದಸ್ಯರು
5.	ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಅಥವಾ ಅವರಿಂದ ನಾಮನಿರ್ದೇಶನ ಹೊಂದಿರುವವರು	ಸದಸ್ಯರು
6.	ಮಹಾ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಕೇಂದ್ರ ಸರ್ಕಾರ, ಇವರ ಪ್ರತಿನಿಧಿ	ಸದಸ್ಯರು
7.	ಶ್ರೀ ಗೋಪಾಲಗೌಡ, ಅಧ್ಯಕ್ಷರು, ಕರ್ನಾಟಕ ರೆಡಿಮೇಡ್ಸ್ ಕಾಂಕ್ರೀಟ್ ವರ್ಕರ್ಸ್ ಯೂನಿಯನ್, ಸಿಐಟಿಯು, ಉದಯನಗರ, ದೂರವಾಣಿ ನಗರ ಪೋಸ್ಟ್, ಬೆಂಗಳೂರು–16–ಕಾರ್ಮಿಕ ಸಂಘಟನೆಯ ಪ್ರತಿನಿಧಿ	ಸದಸ್ಯರು
8.	ಶ್ರೀ ಸಿ.ಎಂ. ಅಶ್ವತ್ಥಪ್ಪ, ಹಿರಿಯ ವ್ಯವಸ್ಥಾಪಕರು, (ತರಬೇತಿ ಮತ್ತು ಅಭಿವೃದ್ಧಿ) BOSCH Ltd., P.B. No. 3000, ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು–560030–ಕೈಗಾರಿಕಾ ಪ್ರತಿನಿಧಿ.	ಸದಸ್ಯರು
9.	ಅಧ್ಯಕ್ಷರು, ಕಾಸಿಯಾ (ಕೆ.ಎಸ್.ಎಸ್.ಐ.ಎ), ಬೆಂಗಳೂರು – ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರತಿನಿಧಿ	ಸದಸ್ಯರು
10.	ನಿರ್ದೇಶಕರು, ಸರ್ಕಾರಿ ಟೂಲ್ ರೂಮ್ ಅಂಡ್ ಟ್ರೈನಿಂಗ್ ಸೆಂಟರ್, (ಜೆ.ಟಿ.ಟಿ.ಸಿ.) ರಾಜಾಜಿನಗರ, ಬೆಂಗಳೂರು–ವೃತ್ತಿ ಪರ ಅನುಭವಿ ಪ್ರತಿನಿಧಿ	ಸದಸ್ಯರು
11.	ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಅಥವಾ ಅವರ ಪ್ರತಿನಿಧಿ	ಸದಸ್ಯರು

ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಎಸ್.ಡಬ್ಲ್ಯೂಎಲ್ 165 ಇಟಿಐ 1989 ದಿನಾಂಕ: 28–03–1990ರಲ್ಲಿ ನಮೂದಿಸುವಂತೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ

ಪಿಆರ್ ನಂ. 961 ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಸಹಕಾರ ಸಚಿವಾಲಯ

ವಿಷಯ : ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಶೇಕಡಾ 3 ಮತ್ತು ಶೇಕಡಾ 1ರ ಬಡ್ಡಿ ದರದಲ್ಲಿ ನೀಡಿದ ಸಾಲಗಳ ಪೈಕಿ ವಸೂಲಾಗಿರುವ ಸಾಲಗಳ ಬಡ್ಡಿಯ ವ್ಯತ್ಯಾಸದ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಸಿಒ 96 ಸಿಎಲ್ಎಸ್ 2011, ದಿನಾಂಕ: 11–05–2011.
2. ಸರ್ಕಾರದ ಆದೇಶ ಸಂಖ್ಯೆ: ಸಿಒ 96 ಸಿಎಲ್ಎಸ್ 2011, ದಿನಾಂಕ: 20–07–2011.
3. ಸರ್ಕಾರದ ಆದೇಶ ಸಂಖ್ಯೆ: ಸಿಒ 96 ಸಿಎಲ್ಎಸ್ 2011, ದಿನಾಂಕ: 19–10–2011.
4. ಸರ್ಕಾರದ ಆದೇಶ ಸಂಖ್ಯೆ: ಸಿಒ 96 ಸಿಎಲ್ಎಸ್ 2011, ದಿನಾಂಕ: 28–12–2011.
5. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಸಿಆರ್‌ಡಿ/4/ಕೆ.ಆರ್.ಎಫ್/2008–09, ದಿನಾಂಕ: 02–12–2011.

ಪ್ರಸ್ತಾವನೆ :

ಸರ್ಕಾರವು ರೈತರಿಗೆ ಶೇಕಡಾ 3 ಮತ್ತು 1 ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಗಳಡಿಯಲ್ಲಿ 2011–12ನೇ ಸಾಲಿಗೆ ರೂ.30,000,00 ಲಕ್ಷಗಳ ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಓದಲಾದ (1) ,(2), (3) ಮತ್ತು (4) ರ ಆದೇಶಗಳಲ್ಲಿ ಇದುವರೆಗೆ ಒಟ್ಟು ರೂ.30,000,00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮುಂದುವರೆದು ಏಪ್ರಿಲ್–2011 ಸೆಪ್ಟೆಂಬರ್ 2011ರ ಅವಧಿಯಲ್ಲಿ ರೂ.2890.99 ಕೋಟಿಗಳ ಅಲ್ಪಾವಧಿ ಕೃಷಿ ಸಾಲಗಳು ಮತ್ತು ರೂ.135.92 ಕೋಟಿಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳು ವಸೂಲಾಗಿದ್ದು, ಇದರ ಮೇಲೆ ಅಲ್ಪಾವಧಿ ಸಾಲಗಳಿಗೆ

ಅಂದಾಜು ರೂ.281862.75 ಲಕ್ಷಗಳು ಮತ್ತು ರೂ.4077.66 ಲಕ್ಷಗಳು ಒಟ್ಟಾರೆಯಾಗಿ ರೂ.32264.81 ಲಕ್ಷಗಳ ಬಡ್ಡಿ ಸಹಾಯಧನ ಮೊತ್ತ ಬೇಕಾಗಿದ್ದು. ಪೂರಕ ಅಂದಾಜಿನಲ್ಲಿ ಹೆಚ್ಚುವರಿಯಗಿ ರೂ.33331.23 ಲಕ್ಷಗಳ ಅವಕಾಶ ಕಲ್ಪಿಸಿ ಬಿಡುಗಡೆ ಮಾಡುವಂತೆ ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಕೋರಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶದ ಸಂಖ್ಯೆ: ಸಿಒ 96 ಸಿಎಲ್‌ಎಸ್ 2011, ಬೆಂಗಳೂರು, ದಿನಾಂಕ: 15-03-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಶೇಕಡಾ 3 ಮತ್ತು 1ರಬಡ್ಡಿ ದರದಲ್ಲಿ ನೀಡಿದ ಸಾಲಗಳಿಗೆ 2011-12ನೇ ಸಾಲಿನಲ್ಲಿ ಬಡ್ಡಿ ಸಹಾಯಧನದ ಮೊತ್ತ ರೂ. 15000.00 ಲಕ್ಷಗಳನ್ನು (ಹದಿನೈದು ಸಾವಿರ ಲಕ್ಷ ರೂಪಾಯಿಗಳು ಮಾತ್ರ) ಪೂರಕ ಅಂದಾಜುಗಳ ಮೂರನೇ ಕಂತಿನಲ್ಲಿ ಒದಗಿಸಿ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು 2011-12ನೇ ಆಯವ್ಯಯದ ಲೆಕ್ಕಶೀರ್ಷಿಕೆ "2425-00-107-2-41-ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ" (ಯೋಜನೆ) ಇದರಡಿ ಭರಿಸತಕ್ಕದ್ದು.

ಈ ಹಣವನ್ನು ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರು ಹಣ ಸಂದಾಯ ರಸೀದಿ ಮೂಲಕ ಸಹಕಾರ ಸಂಘಗಳ ನಿಬಂಧಕರ ಮೇಲು ಸಹಿ ಪಡೆದು ಖಜಾನೆಯಿಂದ ಪಡೆಯತಕ್ಕದ್ದು, ಖಜಾನೆಯಿಂದ ಡ್ರಾ ಮಾಡಿದ ಮೊತ್ತವನ್ನು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿಯಮಿತ, ಬೆಂಗಳೂರು ಇಲ್ಲಿ ಠೇವಣಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ/54/ವೆಚ್ಚ-2/2012 ದಿನಾಂಕ: 17-02-2012 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಸಿ. ಸತೀಶ್

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಸಹಕಾರ ಇಲಾಖೆ.

ಪಿಆರ್ ನಂ. 962

ಸಹಕಾರ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಸಿಒ 96 ಸಿಎಲ್‌ಎಸ್ 2011 (ಭಾ) ಬೆಂಗಳೂರು, ದಿನಾಂಕ 26-03-2012

ವಿಷಯ: ರಾಜ್ಯದಲ್ಲಿ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಶೇಕಡಾ 3 ಮತ್ತು ಶೇಕಡಾ 1ರ ಬಡ್ಡಿ ದರದಲ್ಲಿ ನೀಡಿದ ಸಾಲಗಳ ಪೈಕಿ ವಸೂಲಾಗಿರುವ ಸಾಲಗಳ ಬಡ್ಡಿಯ ವ್ಯತ್ಯಾಸದ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಇ 96 ಸಿಎಲ್‌ಎಸ್ 2011, ದಿನಾಂಕ 15-03-2012ರ ಆದೇಶದ ಪ್ಯಾರಾ 2ರ ಭಾಗದಲ್ಲಿರುವ ಲೆಕ್ಕಶೀರ್ಷಿಕೆ "2425-00-107-2-41-ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ" (ಯೋಜನೆಯನ್ನು "2425-00-107-2-41-106-ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ" (ಯೋಜನೆ) ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಸಿ. ಸತೀಶ್

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 1031

ಸಹಕಾರ ಸಚಿವಾಲಯ

ವಿಷಯ : ಶಕ್ತಿನಗರ ವೆಲ್‌ಫೇರ್ ಅಸೋಸಿಯೇಷನ್ (ರಿ), ಬೆಂಗಳೂರು ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ:

1. ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಪತ್ರ ಸಂಖ್ಯೆ: ಡಿಆರ್/ಎಸ್‌ಒಆರ್/ಪಿಟಿಎನ್/05/2010-11 ದಿನಾಂಕ: 22-06-2010.
2. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಸಇ/54/ಸಸಂನೊ/2010 ದಿನಾಂಕ: 31-07-2010.
3. ಸಂಸ್ಥೆಯ ಪತ್ರ ಸಂಖ್ಯೆ: 23/2010 ದಿನಾಂಕ: 27-08-2010.
4. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/16/ಎಸ್‌ಒಆರ್-1/2011-12 ದಿನಾಂಕ: 06-02-2012.

ಪ್ರಸ್ತಾವನೆ :

ಶ್ರೀ ಎ.ಕೆ. ವರಧನ್, ಶಕ್ತಿನಗರ, ಬೆಂಗಳೂರು ರವರು ಶಕ್ತಿನಗರ ವೆಲ್‌ಪೇರ್ ಅಸೋಸಿಯೇಷನ್, ಬೆಂಗಳೂರು, ಈ ಸಂಸ್ಥೆಯಲ್ಲಿನ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಕೋರಿ ದಿನಾಂಕ: 28-04-2010 ರಂದು ಸಲ್ಲಿಸಿದ ದೂರಿನ ಬಗ್ಗೆ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಮನವಿದಾರರಿಗೆ ಸೂಕ್ತ ಮಾಹಿತಿ ನೀಡುವಂತೆ ದಿನಾಂಕ: 22-05-2010ರ ಸರ್ಕಾರದ ಪತ್ರದಲ್ಲಿ ಸಹಕಾರ ಸಂಘಗಳ

ನಿಬಂಧಕರನ್ನು ಕೋರಲಾಗಿತ್ತು. ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಮೇಲೆ (1) ರಲ್ಲಿ ಓದಲಾದ ದಿನಾಂಕ: 22–06–2010ರ ಪತ್ರದಲ್ಲಿ ಸದರಿ ಸಂಸ್ಥೆಯ ವಿರುದ್ಧ ಶ್ರೀ ಎ.ಕೆ. ವರದನ್ ಇವರು ಈ ಸಂಘದವರು ಪ್ರತಿ ವರ್ಷ ಸರ್ವಸದಸ್ಯರ ಸಭೆ ನಡೆಸಿಲ್ಲ. ಲೆಕ್ಕಪತ್ರಗಳ ಪರಿಶೋಧನೆ ಮಾಡಿಸಿಲ್ಲ. ಹಾಗೂ ಇಲಾಖೆಗೆ ಲೆಕ್ಕ ಪತ್ರಗಳನ್ನು ದಾಖಲಿಸಿಲ್ಲ. ಎಂಬ ಬಗ್ಗೆ ಉಪ ನೋಂದಣಾಧಿಕಾರಿಗಳು ದೂರು ಅರ್ಜಿ ವಿಚಾರಣೆ ನಡೆಸಿರುವ ವರದಿ ನೀಡಿಲ್ಲ ಎಂದು ಆರೋಪಿಸಿ ದಿನಾಂಕ: 04–05–2009 ಮತ್ತು 29–07–2009 ರಂದು ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ರವರಿಗೆ ಅರ್ಜಿ ಸಲ್ಲಿಸಿದ್ದರ ಬಗ್ಗೆ ಸದರೀ ಸಂಘಕ್ಕೆ ಹಾಗೂ ದೂರುದಾರರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು ವಿಚಾರಣಾಧಿಕಾರಿಗಳು ಹಾಗೂ ಹಿರಿಯ ಉಪ ನೋಂದಣಾಧಿಕಾರಿ, ಕೆ.ಆರ್. ಪುರಂ, ಬೆಂಗಳೂರು. ಇವರ ದಿನಾಂಕ: 27–08–2009ರ ವಿಚಾರಣಾ ವರದಿಯಲ್ಲಿ ಸದರಿ ಸಂಘವು ದಿನಾಂಕ: 30–05–1998 ರಂದು ಸಂಖ್ಯೆ: 196/98–99ನೇ ನಂಬರ್‌ನಲ್ಲಿ ನೋಂದಣಿಯಾಗಿದ್ದು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 12, 13, 14ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದಾಗಿ ಹಾಗೂ ಕಲಂ 12, 13 ರ ಪ್ರಕಾರ ಸಂಬಂಧಪಟ್ಟ ಅವಧಿಯ ಕಾರ್ಯಕಾರಿ ಸಮಿತಿ ಪಟ್ಟಿ, ಹಣಕಾಸಿನ ಲೆಕ್ಕದ ವಿವರಗಳನ್ನು ಕಲಂ 11 ರಂತೆ ಸರ್ವಸದಸ್ಯರ ಸಭೆ ನಡೆಸಿ ಅನುಮೋದನೆ ಪಡೆದು, ಸಕಾಲದಲ್ಲಿ ಸಂಘಗಳ ನೋಂದಣಾಧಿಕಾರಿಗಳಿಗೆ ಕಲಂ 13 ರಂತೆ ಒಪ್ಪಿಸಲು ಆದೇಶಿಸಲಾಗಿದ್ದು, ಈ ಆದೇಶವನ್ನು ಪಾಲಿಸಿರುವುದಿಲವೆಂದು ತಿಳಿಸಿರುತ್ತಾರೆ. ಈ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸಂಘಕ್ಕೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ಸರಿಪಡಿಸಿಕೊಳ್ಳಲು ಯಾವುದೇ ಕ್ರಮ ಕೈಗೊಂಡಿರದ ಹಿನ್ನಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬಹುದಾಗಿದೆ. ಎಂದು ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಯವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ: 31–07–2012ರ ಕಾರಣ ಕೇಳುವ ನೋಟಿಸಿನಲ್ಲಿ ಸದರಿ ಸಂಸ್ಥೆಯಲ್ಲಿನ ನ್ಯೂನತೆಗಳ ಬಗ್ಗೆ ವಿವರಿಸಿ, ಈ ನ್ಯೂನತೆಗಳ ಹಿನ್ನಲೆಯಲ್ಲಿ ಸಂಸ್ಥೆಗೆ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ 27(ಎ) ಪ್ರಕಾರ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂಬ ಬಗ್ಗೆ ಲಿಖಿತ/ಮೌಖಿಕ ಹೇಳಿಕೆಯನ್ನು ಸೂಚನಾ ಪತ್ರ ತಲುಪಿದ ಒಂದು ತಿಂಗಳ ಒಳಗಾಗಿ ಸಲ್ಲಿಸುವಂತೆ ಸದರಿ ಸಂಸ್ಥೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ತಿಳಿಸಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ದಿನಾಂಕ 27/8/2010 ಪತ್ರದಲ್ಲಿ ಸದರಿ ಸಂಸ್ಥೆಯು ಸರ್ಕಾರದ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಸಂಸ್ಥೆಗಳಲ್ಲಿನ ನ್ಯೂನತೆಗಳ ಬಗ್ಗೆ ಸ್ಪಷ್ಟೀಕರಣ ನೀಡಿ, ಇನ್ನು ಮುಂದೆ ಸಂಸ್ಥೆಯು ಸಂಘಗಳ ನೋಂದಣಿ ಕಾಯ್ದೆ, 1960 ಮತ್ತು ಅದರ ನಿಯಮಗಳನ್ನು ತಪ್ಪದೆ ಪಾಲಿಸುವುದಾಗಿ ತಿಳಿಸಿರುತ್ತಾರೆ. ಈ ಹೇಳಿಕೆಯ ಬಗ್ಗೆ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ದಿನಾಂಕ 17/9/2010 ರಂದು ಸಹಕಾರ ಸಂಘಗಳ ನಿಂಬಂಧಕರನ್ನು ಕೋರಲಾಗಿತ್ತು.

ಮೇಲೆ (4) ರಲ್ಲಿ ಓದಲಾದ ದಿನಾಂಕ 6/2/2012ರ ಪತ್ರದಲ್ಲಿ ಸಹಕಾರ ಸಂಘಗಳ ನಿಂಬಂಧಕರು ಮೇಲೆ (1) ರಲ್ಲಿ ಓದಲಾದ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ದಿನಾಂಕ 22/6/20/10ರ ಪತ್ರದಲ್ಲಿನ ಅಂಶಗಳನ್ನು ಪುನರುಚ್ಚರಿಸುತ್ತಾ, ಪ್ರಸ್ತುತ ಸಂಘವು ನೋಂದಣಿಯಾದ 1998–99 ರಿಂದ 2009–10ನೇ ಸಾಲುಗಳ ಲೆಕ್ಕಪತ್ರಗಳ ಆಡಿಟ್ ವರದಿ ಹಾಗೂ ಇತರೆ ದಾಖಲಾತಿಗಳನ್ನು ದಿನಾಂಕ 15/11/2010 ರಂದು ನೋಂದಣಾಧಿಕಾರಿಯವರಿಗೆ ಅನುಮೋದನೆಗೆ ಸಲ್ಲಿಸಿದ್ದು, ದೂರು ಅರ್ಜಿಯ ಅಂಶಗಳಿಗೆ ಸಂಬಂಧಿಸಿದಂತೆ ಪರಿಶೀಲನೆಗೆ ಬಾಕಿ ಇರುವುದಾಗಿ ಸಹಕಾರ ಸಂಘಗಳ ಉಪ ನಿಬಂಧಕರು ತಮ್ಮ ದಿನಾಂಕ 30/12/2011ರ ಪತ್ರದಲ್ಲಿ ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಶಕ್ತಿನಗರ ಕ್ಷೇಮಾಭಿವೃದ್ಧಿ ಸಂಘದ ಹೆಸರಿನಲ್ಲಿ ಅದೇ ವಿಳಾಸದಲ್ಲಿ 2007–08 ರಲ್ಲಿ ಇನ್ನೊಂದು ಸಂಘವನ್ನು ನೋಂದಣಿ ಸಂಖ್ಯೆ: 71/2007–08 ರಲ್ಲಿ ನೋಂದಾಯಿಸಲು ಪದಾಧಿಕಾರಿಗಳು ಕ್ರಮವಹಿಸಿರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬರುತ್ತದೆ. ಆದರೆ ಸದರಿ ದಸ್ತಾವೇಜು ಸಂಖ್ಯೆಯಲ್ಲಿಯೂ ಸಂಘ ನೋಂದಾಯಿಸಲ್ಪಟ್ಟಿರುವುದಿಲ್ಲ. ಈ ದಸ್ತಾವೇಜು ಕ್ರಮಾಂಕದಲ್ಲಿ ಬೇರೊಂದು ಸಂಘವು ನೋಂದಾಯಿಸಲ್ಪಟ್ಟಿರುತ್ತದೆ. ಶಕ್ತಿನಗರ ಕ್ಷೇಮಾಭಿವೃದ್ಧಿ ಸಂಘವು ನೋಂದಣಿ ಸಂಖ್ಯೆ: 71/2007–08 ರಲ್ಲಿಯೂ ಪ್ರತಿ ವರ್ಷ ನಿಯಮಾನುಸಾರ ವಾರ್ಷಿಕ ಸಭೆಯನ್ನು ನಡೆಸಿದ ಬಗ್ಗೆ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ. ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ದೂರುದಾರರ ಆಪಾದನೆಯಂತೆ ಸಂಘವು ನಿರ್ವಹಿಸಿರುವ ದಾಖಲೆಗಳು ಹಾಗೂ ಲೆಕ್ಕಪತ್ರಗಳಲ್ಲಿ ನಮೂದಿಸಿದ ಅಂಶಗಳು, ವಾಸ್ತವವಾಗಿ ಸಾರ್ವಜನಿಕರಿಂದ ಸಂಗ್ರಹಿಸಿದ ಡೊನೇಷನ್ ಹಾಗೂ ಸದಸ್ಯರಿಂದ ಸಂಗ್ರಹಿಸಿದ ಚಂದಾ ಹಣ, ಸಂಘದ ಲೆಕ್ಕ ಪತ್ರಗಳಲ್ಲಿ ದಾಖಲಿಸಿದ ನಿಗದಿತ ಮಾಹಿತಿಯನ್ನು ಸಂಘವು ಪ್ರತಿ ವರ್ಷ ವಾರ್ಷಿಕ ಮಹಾಸಭೆಯನ್ನು ಕರೆದು ಸರ್ವಸದಸ್ಯರ ಮುಂದೆ ಮಂಡಿಸಿ ಅನುಮೋದನೆ ಪಡೆಯದೇ ಸುಮಾರು 12 ವರ್ಷಗಳ ದಾಖಲೆಗಳನ್ನು ದಿನಾಂಕ: 15–11–2010 ರಂದು ಸಲ್ಲಿಸಿರುವುದಾಗಿ ತಿಳಿಸುತ್ತಾ, ಸದರಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ತಿಳಿಸಿ ಸಹಕಾರ ಸಂಘಗಳ ನಿಬಂಧಕರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶದ ಸಂಖ್ಯೆ: ಸಇ 54 ಸಸಂನೋ 2010, ಬೆಂಗಳೂರು, ದಿನಾಂಕ: 15ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶಕ್ತಿನಗರ ವೆಲ್‌ಫೇರ್ ಅಸೋಸಿಯೇಷನ್, ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27–ಎ ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಸಹಾಯಕ

ನಿಬಂಧಕರು, ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ವಲಯ ಇವರನ್ನು ಆಡಳಿತಾಧಿಕಾರಿಯಾಗಿ ಆರು(6) ತಿಂಗಳ ಅವಧಿಗೆ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘಕ್ಕೆ ಚುನಾವಣೆಯನ್ನು ನಡೆಸಿ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಹಾಗೂ ಸರ್ಕಾರಕ್ಕೆ ವರದಿ ಮಾಡುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಎಸ್. ವಿಶ್ವೇಶ್ವರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ–2

ಪಿಆರ್ ನಂ. 963 ಸಹಕಾರ ಇಲಾಖೆ.

TRANSPORT SECRETARIAT

Sub: Committee formation for implementation of Jayanagar and Kathriguppe projects under Public Private Partnership (PPP).

Read: 1. Proceedings of the State Level Single Window Agency Meeting held on 09-09-2008.

2. Proceedings of the Meeting held on 29-02-2012.

Preamble:

BMTC has initiated the development of Traffic and Transit Management Centres at Jayanagar 4th 'T' Block and Kathriguppe and also invited the tender for the said projects under Public Private Partnership (PPP) scheme. During the meeting of the State Level Single Window Agency for PPP project held on 09-09-2008, read at (1) above, it was decided that: " A Committee will be constituted with Principal Secretary - IDD, Finance Secretary, Secretary of the project sponsoring department and experts to advise the finer details of the project structuring and draft Connection Agreement for initial 3-4 projects before project documents are standardized to form the Model concession Agreement". In this context, in the meeting held on 29-02-2012 read at (2) above, it was decided to constitute a committee. The Committee may invite experts in the field of transport Traffic police and other releated areas.

Hence the Order,

Government Order No. SARIE 15 NASAE 2012, Bangalore Dated: 19-03-2012.

In view of the reasons mentioned in the preamble, a Committee is constituted with the following members.

1. Principal Secretary to Government, Transport Department:- Chairman.
2. Principal Secretary to Government, Finance Department, Budget & Resources:- Member
3. The Secretary to Government, Infrastructure Development Department:- Member
4. The Managing Director, KSRTC:- Member
5. The Managing Director, BMTC:- Member
6. Additional Commissioner of Police, Traffic:- Member
7. Director S.V. & E, BMTC :- Member
8. Town Planning Member BDA:- Member
9. Sri H.M. Shivananda Swamy, Associate Director & Dean, CEPT, University, Ahmedabad:- Member
10. Prof. T.G. Sitharam, Chairman, Centre of Infrastructure, Sustainable Transport and Urban Planning (CISTUP) Bangalore:- Member

The Chairman of the Committee may co-opt/invite additional members as and when required.

By Order and in the name of the Governor of Karnataka

Ramachandra

Under Secretary to Government

PR No. 964 Transport Department

ಸಹಕಾರ ಸಚಿವಾಲಯ

ವಿಷಯ : ಚಿಕ್ಕಮಗಳೂರು–ಉಡುಪಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ಆಡಳಿತ ಸಮಿತಿಗಳ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ: 1. ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ, ಇವರ ಪತ್ರ ಸಂಖ್ಯೆ: ಸಿಆಸುಇ 01 ಚುಮಾಸಂ 2012 (ಪಿ) ದಿನಾಂಕ: 18–02–2012.

2. ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಸಿ/173/2011–12 ದಿನಾಂಕ: 25–02–2012.

ಪ್ರಸ್ತಾವನೆ :

ಪ್ರಸ್ತುತ ಚಿಕ್ಕಮಗಳೂರು–ಉಡುಪಿ ಲೋಕಸಭೆ ಉಪ ಚುನಾವಣೆ ಕುರಿತಂತೆ ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ: 18–02–2012 ರ ಪತ್ರದ ಪ್ರಕಾರ ದಿನಾಂಕ: 16–02–2012 ರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಈ ಜಿಲ್ಲೆಗಳ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ

ಆಡಳಿತ ಮಂಡಳಿಯ ಚುನಾವಣೆ ಇದೇ ಅವಧಿಯಲ್ಲಿ ಬಂದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39 ಎ(4)ರ ರೀತ್ಯಾ ಚಿಕ್ಕಮಗಳೂರು–ಉಡುಪಿ ಲೋಕಸಭೆ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ಆಡಳಿತ ಮಂಳಿಯ ಚುನಾವಣೆಯನ್ನು ಲೋಕಸಭೆ ಚುನಾವಣೆ ಪ್ರಕ್ರಿಯೆ ಅಂತ್ಯಗೊಳ್ಳುವ ದಿನಾಂಕ: 22–03–2012 ರಿಂದ 30 ದಿನಗಳ ಅವಧಿಗೆ ಮುಂದೂಡಿ ಆದೇಶ ಹೊರಡಿಸಲು ಸಹಕಾರ ಸಂಘಗಳ ನಿಬಂಧಕರು ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 34 ಸಿಎಲ್ಎಂ 2012, ಬೆಂಗಳೂರು, ದಿನಾಂಕ: 15–03–2012

ಪ್ರಸ್ತಾವನೆಯಲ್ಲಿನ ಕಾರಣಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು–ಉಡುಪಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ಆಡಳಿತ ಸಮಿತಿಗಳ ಚುನಾವಣೆಯನ್ನು ಕರ್ನಾಟಕ ಸಹಕರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4)ರ ರೀತ್ಯಾ ಲೋಕಸಭೆ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ದಿನಾಂಕ: 22–03–2012 ರಿಂದ 30 ದಿನಗಳ ಒಳಗೆ ನಡೆಸುವಂತೆ ಆದೇಶಿಸಿದೆ.

ಸೂಚನೆಗಳು:–

1. ಪ್ರಕರಣ (28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ಆದೇಶ ದಿನಾಂಕ: 22–03–2012ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.
2. ಈ ಮಾರ್ಪಾಟು ಈಗಾಗಲೇ ಆಡಳಿತ ಸಮಿತಿಗಳಿಗೆ ಚುನಾವಣೆ ನಡೆಸಿರುವ ಮತ್ತು ಚುನಾವಣೆ ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿರುವ ಹಾಗೂ ನ್ಯಾಯಾಲಯದ ನಿರ್ದಿಷ್ಟ ಆದೇಶಗಳ ಮೇರೆಗೆ ಚುನಾವಣೆ ನಡೆಸುವ ಸಹಕಾರ ಸಂಘಗಳಿಗೆ ಅನ್ವಯವಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಸಿ. ಸತೀಶ್
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಸಹಕಾರ ಇಲಾಖೆ.

ಪಿಆರ್ ನಂ. 965

ಮೂಲ ಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡಕ್ಕೆ ಹೆಚ್ಚುವರಿ ಸಂಪರ್ಕ ರಸ್ತೆ ನಿರ್ಮಾಣಕ್ಕಾಗಿ ಪರಿಷ್ಕರಿಸಿದ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂ: ಮೂಅಇ 114 ರಅವಿ 2009, ದಿನಾಂಕ: 25–01–2011.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂ: ಕ.ರ.ಅ.ನಿ.ನಿ/ವ್ಯ.ನಿ/ ಮಂ.ವಿ.ನಿ.ರಸ್ತೆ/ 2011–12/2500, ದಿನಾಂಕ: 12–01–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರಿ ಆದೇಶ ದಿ: 25–01–2011 ರಲ್ಲಿ, ಮಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡಕ್ಕೆ ಚತುಷ್ಪಥ (ಸುಮಾರು 1000 ಮೀ.) ಹೆಚ್ಚುವರಿ ಸಂಪರ್ಕ ರಸ್ತೆಯನ್ನು ನಿರ್ಮಿಸುವ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಇವರು ಅಂದಾಜಿಸಿದ ಮೊತ್ತ ರೂ.7.60 ಕೋಟಿಗಳಿಗೆ ಅನುಮೋದನೆಯನ್ನು ನೀಡಿ ಜಿಲ್ಲಾ ಪಂಚಾಯತ್ ಸಹಮತಿಯೊಂದಿಗೆ ಕಾಮಗಾರಿಯನ್ನು ಕೆ.ಆರ್.ಡಿ.ಸಿ.ಎಲ್. ಗೆ ವಹಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿರುತ್ತದೆ.

2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪತ್ರದ ಸಂಖ್ಯೆ: ಮುಸದ/ತಾಂಸ–3/ಸ.ಇಂ.4/ಶಿವಮೊಗ್ಗ ಜಿಲ್ಲೆ/ಪ್ರ.ನಿ.ಕಾ/ ಇಪ್ರೊಕ್ಯೂರ್ ಮೆಂಟ್/ ಟೆಂಡರ್ ಅನುಮೋದನೆ/2011/1046, ದಿನಾಂಕ 13.03.2012.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಭಾರತ ಸರ್ಕಾರದ ಪ್ರವಾಹ ನಿರ್ವಹಣೆ ಕಾರ್ಯಕ್ರಮದಡಿ ಶಿವಮೊಗ್ಗ ಜಿಲ್ಲೆ, ತುಂಗಾ ನದಿಯ ದಂಡೆಗಳಿಗೆ ಶಿವಮೊಗ್ಗ ನಗರದ ಹತ್ತಿರ ಸರಪಳಿ 11.754 ಕಿ.ಮೀ.ನಿಂದ 14.410 ಕಿ.ಮೀ ವರೆಗೆ ಮತ್ತು ಮತ್ತೂರು ಗ್ರಾಮದ ಹತ್ತಿರ ಸರಪಳಿ

6.006 ಕಿ.ಮೀ ನಿಂದ 7.036 ಕಿ.ಮೀ ವರೆಗೆ ಪ್ರವಾಹ ಸಂರಕ್ಷಣಾ ಕಾಮಗಾರಿಯ ರೂ. 5518.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	24.11.2011
ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್	19.11.2011
ವಿಜಯ ಕರ್ನಾಟಕ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆ	10.12.2011
ದೈನಿಕ್ ಭಾಸ್ಕರ್ ದಿನ ಪತ್ರಿಕೆ	16.12.2011
ಇಂಡಿಯನ್ ಟ್ರೇಡ್ ಜರ್ನಲ್	14.12.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಐವರು ಗುತ್ತಿಗೆದಾರರು ಭಾಗವಹಿಸಿದ್ದು ಇವರಲ್ಲಿ ಮೂವರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 21.02.2012ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ 52,86,58,699/–
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 71,38,56,587
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ /ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ರಾಮಲಿಂಗಂ ಕನ್‌ಸ್ಟ್ರಕ್ಷನ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಗುತ್ತಿಗೆದಾರರು, ಇರೋಡ್.	66,16,24,998/–	25.152 ಹೆಚ್ಚು	7.317 ಕಡಿಮೆ
2	ಅಮೃತ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಗುತ್ತಿಗೆದಾರರು, ಸಿಂಧನೂರು.	74,94,74,914/–	41.769 ಹೆಚ್ಚು	4.989 ಹೆಚ್ಚು
3	ಬಿ.ವಿ.ಎಸ್.ಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಗುತ್ತಿಗೆದಾರರು, ಹೈದ್ರಾಬಾದ್.	84,23,12,529/–	59.33 ಹೆಚ್ಚು	17.995 ಹೆಚ್ಚು

ಮೇಲ್ಕಂಡಂತೆ ಮೆಸರ್ಸ್ ರಾಮಲಿಂಗಂ ಕನ್‌ಸ್ಟ್ರಕ್ಷನ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಗುತ್ತಿಗೆದಾರರು, ಇರೋಡ್ ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 7.317 ರಷ್ಟು ಕಡಿಮೆಯಾಗಿರುತ್ತದೆ ಇವರ ಟೆಂಡರ್‌ಅನ್ನು ದಿನಾಂಕ 16.03.2012 ರಂದು ನಡೆದ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಗೆ ಮಂಡಿಸಿ ಪರಿಶೀಲಿಸಲಾಯಿತು, ಗುತ್ತಿಗೆದಾರರು ಕೆಲಸವನ್ನು ನಿರ್ವಹಿಸಲು ಉಂಟಾಗುವ ಸಮಸ್ಯೆಗಳ ಕುರಿತು ವಿವರಿಸಿದರು ಹಾಗೂ ದರಗಳನ್ನು ಕಡಿಮೆ ಮಾಡಲು ನಿರಾಕರಿಸಿದರು. ಸಮಿತಿಯು ಈ ಟೆಂಡರ್‌ಅನ್ನು ಸುಧೀರ್ಘವಾಗಿ ಪರಿಶೀಲಿಸಿ, ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತದ ಮೇಲೆ ಶೇಕಡ 7.317 ರಷ್ಟು ಕಡಿಮೆ ದರಗಳಲ್ಲಿ ಟೆಂಡರನ್ನು ಅನುಮೋದಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಅದರಂತೆ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ ರೂ. 71,38,56,587/– ಗಳ ಮೇಲೆ ಶೇಕಡ 7.317 ರಷ್ಟು ಕಡಿಮೆ ದರಗಳಲ್ಲಿ ಅಂದರೆ ರೂ. 66,16,24,998/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 03 ಪ್ರನಿಕಾ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ತುಂಗಾ ನದಿಯ ದಂಡೆಗಳಿಗೆ ಶಿವಮೊಗ್ಗ ನಗರದ ಹತ್ತಿರ ಸರಪಳಿ 11.754 ಕಿ.ಮೀ ನಿಂದ 14.410 ಕಿ.ಮೀ ವರೆಗೆ ಮತ್ತು ಮತ್ತೂರು ಗ್ರಾಮದ ಹತ್ತಿರ ಸರಪಳಿ 6.006 ಕಿ.ಮೀ ನಿಂದ 7.036 ಕಿ.ಮೀ ವರೆಗೆ ಪ್ರವಾಹ ಸಂರಕ್ಷಣಾ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 71,38,56,587/– ಗಳ ಮೇಲೆ ಶೇ. 7.317 ರಷ್ಟು ಕಡಿಮೆ ದರಗಳಲ್ಲಿ ಅಂದರೆ ರೂ. 66,16,24,998/– ಗಳಿಗೆ (ರೂ ಅರವತ್ತಾರು ಕೋಟಿ ಹದಿನಾರು ಲಕ್ಷ ಇಪ್ಪತ್ತನಾಲ್ಕು ಸಾವಿರದ ಒಂಬೈನೂರ ತೊಂಬತ್ತೆಂಟು ರೂಪಾಯಿಗಳು. ಮಾತ್ರ ಮೆಸರ್ಸ್ ರಾಮಲಿಂಗಂ ಕನ್‌ಸ್ಟ್ರಕ್ಷನ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 985

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಗುಂದವಾನ ಸೈಟ್–2 ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010 ದಿನಾಂಕ: 28.09.2011

2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರ ಕ್ರಮಾಂಕ: ಮುಇಂ/ಸನೀ(ಉ)ವ/ ಬಿಜೆಪಿ/ಪಿ–9/ಗುಂದವಾನ (ಸೈಟ್–2) ಸ.ನೀ ಕೆರೆ ಸುಧಾರಣೆ / 2011–12/1179 ದಿನಾಂಕ: 01.03.2012

ಪ್ರಸ್ತಾವನೆ :

ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಗುಂದವಾನ ಸೈಟ್–2 ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯು 13ನೇ ಹಣಕಾಸು ಆಯೋಗದ ಅನುದಾನದಡಿ ಕೆರೆಗಳ ಹಾಗೂ ಪಾರಂಪರಿಕ ಜಲಕಾಯಗಳ ಪುನರುಜ್ಜೀವನ ಯೋಜನಯಡಿ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಕಾಮಗಾರಿಯ ರೂ. 150.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	08.12.2011
ವಿಜಯ ಕರ್ನಾಟಕ ದಿನ ಪತ್ರಿಕೆ	06.12.2011
ಟೈಮ್ಸ್ ಆಫ್ ಇಂಡಿಯಾ ಅಂಗ್ಲ ದಿನ ಪತ್ರಿಕೆ	06.12.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುವುದಾಗಿ ವರದಿಯಾಗಿರುತ್ತದೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 14.02.2012ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ 1,36,25,052/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ /ಕಡಿಮೆ
1	ರವಿಗೌಡ ವಿ. ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರು	1,55,28,464/–	13.97 ಹೆಚ್ಚು

ಮೇಲ್ಕಂಡಂತೆ ಶ್ರೀ ರವಿಗೌಡ ವಿ ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿರುವ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.97 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,36,25,052/– ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,51,91,933/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 13 ಕೆಜಿದು 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 21ನೇ ಮಾರ್ಚ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಗುಂದವಾನ ಸೈಟ್–2 ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 1,36,25,052/– ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,51,91,933/– ಗಳಿಗೆ (ರೂ. ಒಂದು ಕೋಟಿ ಐವತ್ತೊಂದು ಲಕ್ಷ ತೊಂಭತ್ತೊಂದು ಸಾವಿರದ ಒಂಭೈನೂರ ಮೂವತ್ತೂರು ಮಾತ್ರ) ಗಳಿಗೆ ಶ್ರೀ ರವಿಗೌಡ ವಿ ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರುರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 986 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಗುಂದವಾನ ಸೈಟ್–1 ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010 ದಿನಾಂಕ: 28.09.2011
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವ/ ಬಿಜೆಪಿ/ಪಿಬಿ–9/ಗುಂದವಾನ (ಸೈಟ್–1) ಸ.ನೀ ಕೆರೆ ಸುಧಾರಣೆ / 2011–12/1180 ದಿನಾಂಕ: 01.03.2012

ಪ್ರಸ್ತಾವನೆ :

ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಗುಂದವಾನ ಸೈಟ್–1 ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯು 13ನೇ ಹಣಕಾಸು ಆಯೋಗದ ಅನುದಾನದಡಿ ಕೆರೆಗಳ ಹಾಗೂ ಪಾರಂಪರಿಕ ಜಲಕಾಯಗಳ ಮನರುಜ್ಜೀವನ ಯೋಜನೆಯಡಿ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಕಾಮಗಾರಿಯ ರೂ. 195.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	08.12.2011
ವಿಜಯ ಕರ್ನಾಟಕ ದಿನ ಪತ್ರಿಕೆ	06.12.2011
ಟೈಮ್ಸ್ ಆಫ್ ಇಂಡಿಯಾ ಅಂಗ್ಲ ದಿನ ಪತ್ರಿಕೆ	06.12.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುವುದಾಗಿ ವರದಿಯಾಗಿರುತ್ತದೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 4.02.2012ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ 1,75,80,206/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ /ಕಡಿಮೆ
1	ರವಿಗೌಡ ವಿ. ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರು	2,03,87,356/–	15.97 ಹೆಚ್ಚು

ಮೇಲ್ಕಂಡಂತೆ ಶ್ರೀ ರವಿಗೌಡ ವಿ ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.97

ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,75,80,206/– ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,96,01,930/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 14 ಕೆಜಿದು 2012 (ತಾಂತ್ರಿಕ) ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಗುಂದವಾನ ಸೈಟ್–1 ಹತ್ತಿರ ಸಣ್ಣ ನಿರಾವರಿ ಕೆರೆ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 1,75,80,206/– ಗಳ ಮೇಲೆ ಶೇ.11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,96,01,930/– ಗಳಿಗೆ (ರೂ. ಒಂದು ಕೋಟಿ ತೊಂಭತ್ತಾರು ಲಕ್ಷ ಒಂದು ಸಾವಿರದ ಒಂಭೈ ನೂರ ಮೂವತ್ತು ಮಾತ್ರ) ಗಳಿಗೆ ಶ್ರೀ ರವಿಗೌಡ ವಿ ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರುರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 987

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ, ಹಾಗೂ ತಾಲ್ಲೂಕಿನ ಹಂಚಿನಾಳ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010 ದಿನಾಂಕ: 28.09.2011
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರ ಕ್ರಮಾಂಕ: ಮುಇಂ/ಸನೀ(ಉ)ವ/ ಬಿಜೆಪಿ/ಪಿಬಿ–9/ ಹಂಚಿನಾಳ ಸ.ನೀ ಕೆರೆ ಸುಧಾರಣೆ / 2011–12/1223 ದಿನಾಂಕ: 03.03.2012

ಪ್ರಸ್ತಾವನೆ :

ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಹಂಚಿನಾಳ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯು 13ನೇ ಹಣಕಾಸು ಆಯೋಗದ ಅನುದಾನದಡಿ ಕೆರೆಗಳ ಹಾಗೂ ಪಾರಂಪರಿಕ ಜಲಕಾಯಗಳ ಪುನರುಜ್ಜೀವನ ಯೋಜನಯಡಿ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಕಾಮಗಾರಿಯ ರೂ. 160.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	12.12.2011
ವಿಜಯ ಕರ್ನಾಟಕ ದಿನ ಪತ್ರಿಕೆ	13.12.2011
ದಿ ಹಿಂದೂ ಆಂಗ್ಲ ದಿನ ಪತ್ರಿಕೆ	13.12.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುವುದಾಗಿ ವರದಿಯಾಗಿರುತ್ತದೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ:18.02.2012 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ 1,39,16,903/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ /ಕಡಿಮೆ
1	ಎಸ್. ಐ. ಡೋಣೂರ, ಒಂದನೇ ದರ್ಜೆ ಗುತ್ತಿಗೆದಾರರು	1,59,96,437/–	14.94 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್. ಐ. ಡೋಣೂರ, ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.94 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,39,16,903/– ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,55,17,347/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಕೆಜಿದು 2012 (ತಾಂತ್ರಿಕ) ಬೆಂಗಳೂರು, ದಿನಾಂಕ: 21ನೇ ಮಾರ್ಚ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಹಂಚಿನಾಳ ಸಣ್ಣ ನಿರಾವರಿ ಕೆರೆ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 1,39,16,903/– ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,55,17,347/– ಗಳಿಗೆ (ರೂ. ಒಂದು ಕೋಟಿ ಐವತ್ತೈದು ಲಕ್ಷ ಹದಿನೇಳು ಸಾವಿರದ ಮುನ್ನೂರ ನಲವತ್ತೇಳು ಮಾತ್ರ) ಗಳಿಗೆ ಎಸ್. ಐ. ಡೋಣೂರ, ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 988

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

COMMERCE & INDUSTRIES SECRETARIAT

Sub : Project proposal of M/s Wipro Ltd. to establish a " Sector Specific SEZ for IT/ITES" at Sarjapura Village & Hobli, Anekal Taluk, Bangalore Rural District.

Read : File No. KUM/SHLCC/E2/716/2011-12.

Preamble :

M/s Wipro Ltd. have proposed to set up a "Sector Specific SEZ for IT/ITES" at Sarjapura village & Hobli, Anekal Taluk, Bangalore Rural District, with an investment of Rs. 461 Cr. Generating employment to 16500 persons.

The Karnataka Udyog Mitra has sent the scrutiny report.

The Government has examined the proposal from all aspects.

Hence the following order.

GOVERNMENT ORDER NO. CI 84 SPI 2012, Bangalore, Dated: 21st March 2012

Government is pleased to approve in- principle the project proposal of M/s Wipro Ltd. To establish a "Sector Specific SEZ for IT/ITES" at Sarjapura Village & Hobli, Anekal Taluk, Bangalore Rural District, with an investment of Rs. 461 Cr. Generating employment to 16500 persons by extending the infrastructure facilities, incentives & concessions as mentioned below:

Land: 35 acres 35.5 guntas of their own land at Sy. Nos. 488, 498, 500/1, 495, 499/2, 494/1, 482/1, 482/2, 476, 607/1,490/1, 492/1, 491, 492/2, 500/2, 498, 496, 491, 492/1, 493, 492/2, 494/1 and 492/1 of Sarjapura Village & Hobli, Anekal Taluk, Bangalore Rural District, Subject to approval of Development Plan By Anekal Planning Authority.

Water: 2 lakh LPD from BWSSB / own source.

Power: 32000 KVA to be serviced by BESCOM.

Incentives & Concessions: As per applicable Policy of the State.

This Order is valid for two years from the date issue.

By Order and in the name of the Governor of Karnataka,

Jyothi. R.J

Desk Officer (Technical Cell)

P.R. 990

Commerce & Industries Depatment.

INFRASTRUCTURE DEVELOPMENT SECRETARIAT

Sub : Release of funds towards cost sharing Project of Bangalore-Mysore Doubling Railway Project-reg.

Read :
1. G.O. No. IDD 1 NSW 2002 dated: 22-11-2002.
2. G.O. No. IDD 1 NSW 2002 dated 22.03.2002.
3. G.O. No. IDD 1 NSW 2002 dated 19.02.2003.
4. G.O. No. IDD 47 NSW 2003 dated: 12-09-2003.
5. G.O. No. IDD 47 NSW 2003 dated: 22-01-2004.
6. G.O. No. IDD 47 NSW 2003 (P) dated: 26-03-2004.
7. G.O. No. IDD 51 NSW 2004 dated 19.07.2004.
8. G.O. No. IDD 63 IDM 2005 dated 25.05.2005.
9. G.O. No. IDD 66 NSW 2005 dated 15.12.2005.
10. G.O. No. IDD 68 NSW 2003 dated 30.08.2006.
11. G.O. No. IDD 68 NSW 2003 dated 24.07.2007.
12. G.O. No. IDD 101 NSW 2007 dated 25.4.2008.
13. G.O. No. IDD 101 NSW 2007 dated 25.10.2008.
14. G.O. No. IDD 101 NSW 07 dated 04.03.2009.
15. G.O. No. IDD 101 NSW 07 dated 28.03.2009.
16. G.O. No. IDD 101 NSW 07 dated 31.03.2009.
17. G.O. No. IDD 101 NSW 07 dated 18.12.2009.
18. G.O. No. IDD 101 NSW 07 dated 05.02.2010.
19. G.O. No. IDD 101 NSW 07 dated 26.06.2010.
20. G.O. No. FD 143 BRS 2010, dated 29.11.2010.
21. G.O. No. IDD 101 NSW 07 dated 06.12.2010.
22. G.O. No. IDD 101 NSW 2007 dated 08.02.2012.
23. D.O. letter No. IDD 101 NSW 2007 dated 04.11.2011.
24. Letter No. W.63/CN/BNC/MPIC & UC dated 21.02.2012 of CAO, SWR, Bangalore.

Preamble:

The Government of Karnataka has so far released an amount of ₹ 246.99 crore towards its share of the investment on cost sharing projects of Bangalore-Mysore Railway Doubling through various Government Orders read at Sl. No. (1) to (22) above.

2. In the letter read at (23) above, Government of Karnataka has communicated to Chief Administrative Officer, South Western Railway, Bangalore, stating that cost of electrification of the Ramanagaram-Mysore doubling railway line should be borne by the Ministry of Railways.

3. In the letter read at (24) above, the Chief Administrative Officer, South Western Railway, Bangalore, has reported that the Railway grant made available for the current year has been fully utilized for the project. The progress of the work will get hampered if the grant from GoK is not made available to Railways immediately and requested to release ₹ 50.00 crores for the construction of Ramanagaram-Mysore doubling railway line.

4. The proposal has been examined in detail and hence this order.

Government Order No. IDD 101 NSW 2007, Bangalore, Dated: 20-03-2012

Under the circumstances explained in the preamble, Government is pleased to release an amount of ₹ 50.00 crores (Rupees Fifty Crores only) being the part of the GoK share.

2. This expenditure shall be met under the Head of account 5465-01-190-3-05 cost sharing for new project (plan)-211 Investment for Ramanagaram - Mysore doubling Railway line project, subject to condition that the entire Cost of Electrification of this line should be borne by Ministry of Railways.

3. The Chief Executive Officer, K-RIDE, Bangalore is authorized to draw the amount on a payee's receipt duly countersigned by the Under Secretary to Government Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

4. This order is issued with the concurrence of the Finance Department, vide endorsement No. FD 366 EXP-I/2012 dated 15.03.2012.

By Order and in the name of the Governor of Karnataka,

S.J. Sampath Kumar
Under Secretary to Government
Infrastructure Development Department

P.R. 976

INFRASTRUCTURE DEVELOPMENT SECRETARIAT

Sub : Servicing of HUDCO Loan availed for procurement of land for Bangalore International Airport Project - reg.

Read :
1. G.O. No. IDD 47 DIA 2006 dated: 29-06-2007.
2. G.O. No. IDD 47 DIA 2006 (P) dated 24.09.2007.
3. G.O. No. IDD 47 DIA 2006 (P) dated 25.09.2007.
4. G.O. No. IDD 47 DIA 2006 (P) dated 03.12.2007
5. G.O. No. IDD 47 DIA 2006 dated: 25-03-2008.
6. G.O. No. IDD 47 DIA 2006 dated: 23-06-2008.
7. G.O. No. IDD 47 DIA 2007 dated 16.09.2008.
8. G.O. No. IDD 47 DIA 2007 dated 15.12.2008.
9. G.O. No. IDD 47 DIA 2006 dated 13.3.2009.
10. G.O. No. IDD 47 DIA 2006 dated 12.08.2009.
11. G.O. No. IDD 47 DIA 2006 dated 26.09.2009.
12. G.O. No. IDD 47 DIA 2006 dated 17.12.2009.
13. G.O. No. IDD 33 DIA 2010 dated 23.03.2010.
14. G.O. No. IDD 33 DIA 2010 dated 22.06.2010
15. G.O. No. IDD 33 DIA 2010 dated 23.09.2010.
16. G.O. No. IDD 33 DIA 2010 dated 21.12.2010.
17. G.O. No. IDD 33 DIA 2010 dated 04.03.2011.
18. G.O. No. IDD 33 DIA 2010 dated 21.06.2011.
19. G.O. No. IDD 33 DIA 2010 dated 26.09.2011.
20. G.O. No. IDD 33 DIA 2010 dated 21.12.2011.
21. Letter No. DGM (IPD-1)/2660/2011-12 dated 15.02.2012, of the Deputy General Manager (IPD-1), KSIIDC, Bangalore.
22. G.O. No. FD 356 BRS 2011 dated 13.03.2012.

Preamble:

In G.O's read at Sl. No. (1) to (20) above, periodical release of funds have been made to KSIIDC, Bangalore for servicing HUDCO loan for the period 2007-08, 2008-09 2009-10, 2010-11 and for the quarters ending June, September and December 2011.

2. In letter dated 15.02.2012 read at Sl. No. (21) above, the Deputy General Manager (IPD-I), KSIIDC, Bangalore has requested for release of an amount of Rs. 361.96 lakhs (Principal Rs. 272.58 lakhs+Interest Rs. 84.27 lakhs+service charges Rs. 5.11 lakhs) only towards servicing of HUDCO loan for the quarter ending March 2012.

3. In G.O. read at Sl.No. (22) above, Finance Department has issued a reappropriation order for Rs. 0.42 lakhs under the Head of Account "5465-01-190-2-05-(P) Alternate Roads-211 Investment to provide sufficient funds for servicing of HUDCO loan for the quarter ending March 2012 for release of funds to KSIIDC towards the repayment of HUDCO loan instalment for the quarter ending March 2012.

4. The proposal of KSIIDC has been examined in detail and hence this order.

Government Order No. IDD 33 DIA 2010 (P), Bangalore, Dated: 20-03-2012

After careful examination of the proposal, sanction is accorded for release of Rs. 3.56,85,000-00 (Rupees Three crores Fifty Six lakhs Eighty Five thousand only i.e. Principal Rs. 2,72,58,000-00+Interest Rs. 84,27,000-00 lakhs) to KSIIDC, Bangalore towards HUDCO loan service for the quarter ending March 2012.

2) This expenditure shall be met from the balance amount of Rs. 356.43 lakhs available under the Head of Account "**5465-01-190-1-04 (P)-BIAP Assistance for repayment of HUDCO loan-240 Debt Servicing"** and remaining amount of Rs. 0.42 lakhs by re-appropriation from the Head of A/c **"5465-01-190-2-05 (P) Alternate Roads - 211 Investments".**

3) The Managing Director, KSIIDC, Bangalore is authorized to draw the amount on a payees receipt duly countersigned by the Under Secretary to Government, Infrastructure Development Department **and to pay it to the HUDCO within the due date.**

4) This order is issued with the concurrence of Finance Department vide Note No. FD 265 Exp-1/12 dated 15.03.2012.

By Order and in the name of the Governor of Karnataka,

P.R. 977

S.J. Sampath Kumar
Under Secretary to Government
Infrastructure Development Department

INFRASTRUCTURE DEVELOPMENT SECRETARIAT

Sub : Approval for the revision in the revised cost of construction of an underpass below the RoB under construction by NHAI over the LC No. 14 on NH-7 near the Bangalore International Airport Project site-release of funds.

Read :
1. G.O. No. IDD2 DIA 2010d. Dated 20.03.2010.
2. Letter No. DGM (IPD-1)/918/2010-11 dated 19.07.2010 of the Deputy General Manager (IPD-T-1), Karnataka State Industrial and Infrastructure Development Corporation, Bangalore.
3. G.O. No. IDD 2 DIA 2010 Dated 04.09.2010.
4. G.O. No. IDD 2 DIA 2010 Dated 07.03.2011.
5. Letter No. DGM (IPD-1)/1404/2011-12 dated 21.09.2011, of the Deputy General Manager (IPD-T-1), Karnataka State Industrial and Infrastructure Development Corporation, Bangalore.

Preamble:

In G.O. Dated 20.03.2010 read at (1) above, Government had released an amount of Rs. 100/- lakhs to Karnataka State Industrial and Infrastructure Development Corporation towards the construction of underpass below the ROB at L.C.No. 14 on NH-7 near Bangalore International Airport for providing access to the Devanahalli Business Park being developed by Government through Karnataka State Industrial and Infrastructure Development Corporation.

2. In the letter dated 19.07.2010 read at Sl. No. (2) above, the Deputy General Manager (IPD-T-1) Karnataka State Industrial and Infrastructure Development Corporation, Bangalore had stated that NHAI, vide, its letter dated 26.03.2010 has informed that the competent authority has accorded final approval for the construction of the underpass as well as the service roads connecting the underpass on either side at a revised cost of 2.12.05.961.00 as per the details given below and had sought release of the balance amount as per the revised cost.

a)	Underpass construction	Rs. 1,41,30,612/-
b)	Service Roads connecting the underpass	Rs. 70,75,349/-
		Rs. 2,12,05,961/-

3. In G.O. dated 04.09.2010, read at Sl. No. (3) above, sanction was accorded for release of Rs. 100.00 lakhs to Karnataka State Industrial and Infrastructure Development Corporation towards balance payment of the revised cost towards construction of under pass and service roads for access to Devanahalli Business Park near BIAL.

4. In G.O. dated: 07-03-2011, read at (4) above, an amount of Rs. 12,05,961 (Rupees twelve lakh five thousand nine hundred and sixty one only) has been released to Karnataka State Industrial and Infrastructure Development Corporation being the balance amount of the revised cost towards the construction of underpass and service roads for access to the Devanahalli Business Park near Bangalore International Airport Limited.

5. In letter dated 21.09.2011 read at Sl. No. (5) DGM Karnataka State Industrial and Infrastructure Development Corporation, Bangalore has stated that NHAI has informed that the construction of vent underpass as well as service roads has been completed but during the execution of the work, the requirement of various quantities of materials mainly for reinforcement have increased thereby increasing the cost of VUP (Vent Under Pass) from Rs. 141.31 lakhs to Rs. 205.89 lakhs and the cost of construction of service roads has decreased from Rs. 70.75 lakhs to Rs. 67.24 lakhs which has resulted in the overall increase in the cost of construction from the original estimate by Rs. 61.68 lakhs and hence have requested for approval of revision of cost of VUP and service road from Rs. 211.46 lakhs to Rs. 273.14 lakhs and release of the additional funds of Rs. 61.68 lakhs being the increase in the cost of construction claimed by NHAI.

6. Government have examined the above proposal and hence the following order.

Government Order No. IDD 96 DIA 2011, Bangalore, Dated: 21-03-2012

After careful examination of the proposal, sanction of the Government is hereby accorded for release of Rs. 61.08 (Rupees Sixty One Lakhs Eight Thousand only) to Karnataka State Industrial and Infrastructure Development Corporation under the Head of Account 5465-01-190-2-07 Development of 408 acres of Government land adjacent to BAIP (Plan) - 051, General Expense, being the additional amount of the revised cost for construction of underpass and service roads for access to the Devanahalli Business Park near Bangalore International Airport Limited, subject to the following condition:-

(a) Government shall not consider the further cost of revision of construction.
(b) Karnataka State Industrial and Infrastructure Development Corporation shall submit the Utilization Certificate & physical progress of the work.

2) The Managing Director Karnataka State Industrial and Infrastructure Development Corporation, Bangalore is authorized to draw the amount on a payees receipt duly countersigned by the Under Secretary to Government, Infrastructure Development Department.

3) This order is issued with the concurrence of FD, vide note No. FD 357 Exp. 1/12, dated: 15-03-2012.

By Order and in the name of the Governor of Karnataka,

P.R. 978

S.J. Sampath Kumar
Under Secretary to Government
Infrastructure Development Department

COMMERCE & INDUSTRIES SECRETARIAT

CORRIGENDUM

No. CI 281 SPI 2011, Bangalore, Dated : 18-4-2012

Sub : Establishment of a Cement Plant in Gulbarga District by M/s. Shree Renuka Energy Limited-Approval for mode of acquisition of land.

READ :
1) Proceedings of the 26th State High Level Clearance Committee (SHLCC) Meeting held on 9-11-2011.
2) Government Order No. CI 53 SPI 2012, dated : 18-2-2012.
3) Application of M/s. Shree Renuka Energy Limited dated : 6-1-2012.

In the order portion of the Government Order No. CI 281 SPI 2011 dated : 29-12-2011 under infrastructure facilities, the Land portion shall be read as "The requirement of 1437 hectares of land for the project including mining area, to be acquired and allotted by KIADB or U/s 109 of KLR Act with mining area to be assessed by Department of Mines and Geology" in place of "the requirement of 1437 Hectares of land for the project including mining are to be assessed by Department of Mines and Geology".

Other terms and conditions, infrastructure facilities, incentives and concessions remain the same as in the G.O. read at (2) above.

By Order and in the name of the Governor of Karnataka,
JYOTHI R.J.
Desk Officer (Technical Cell)
Commerce & Industries Department.

P.R. 1246

ನಗರಾಭಿವೃದ್ಧಿ ಸಚಿವಾಲಯ

ಸುತ್ತೋಲೆ

ಸಂಖ್ಯೆ: ನಅಇ 75 ಎಬಿಸಿ 2011, ಬೆಂಗಳೂರು, ದಿನಾಂಕ 20/3/2012

ವಿಷಯ :– ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಾಣಗೊಳ್ಳುವ ಕಟ್ಟಡಗಳ ಪರವಾನಗಿ, ಪರಿಶೀಲನೆ ಮತ್ತು ದಂಡ ವಿಧಿಸುವಿಕೆ ಹಾಗೂ ಅಕ್ರಮ ನಿರ್ಮಾಣಗಳನ್ನು ತಡೆಯುವ ನಿಟ್ಟಿನಲ್ಲಿ ಹೆಚ್ಚುವರಿ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವ ಬಗ್ಗೆ

ಉಲ್ಲೇಖ :– ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 17 ಎಬಿಸಿ 2010, ದಿನಾಂಕ 15/04/2010

ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಪರವಾನಗಿ, ಪರಿಶೀಲನೆ ಮತ್ತು ದಂಡ ವಿಧಿಸುವಿಕೆ ಹಾಗೂ ಅಕ್ರಮ ನಿರ್ಮಾಣಗಳನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಿ ಪಾಲನಾ ವರದಿಯನ್ನು ನೀಡಲು ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಆದೇಶಿಸಲಾಗಿತ್ತು. ಆದರೆ ಇಲ್ಲಿಯವರೆಗೆ ಯಾವುದೇ ನಗರ ಸ್ಥಳೀಯ ಸಂಸ್ಥೆಯು ಸುತ್ತೋಲೆಯಲ್ಲಿನ ಸೂಚನೆಗಳನ್ನು ಅಳವಡಿಸಿಕೊಂಡು ಅನಧಿಕೃತ ಮತ್ತು ಅಕ್ರಮ ನಿರ್ಮಾಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ನಿಯಮಿತವಾಗಿ ವರದಿಯನ್ನು ಸಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2) ಮಾನ್ಯ ನಗರಾಭಿವೃದ್ಧಿ ಸಚಿವರು ಕೈಗೊಂಡ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದ್ದು ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು ಹಾಗೂ ಇತರೆ ಸಂಬಂಧಿತ ಅಧಿಕಾರಿಗಳು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳದೆ ಇರುವ ಬಗ್ಗೆ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿ, ನಗರ ಪ್ರದೇಶಗಳಲ್ಲಿ ಅನಧಿಕೃತ ಮತ್ತು ಅಕ್ರಮ ನಿರ್ಮಾಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಿತ ಅಧಿಕಾರಿಗಳಿಗೆ ಸೂಕ್ತ ಜವಾಬ್ದಾರಿಯನ್ನು ವಹಿಸಲು ಹಾಗೂ ನಿಯಮಗಳ ಉಲ್ಲಂಘನೆಯ ಪ್ರಸಂಗಗಳಲ್ಲಿ ಶಿಸ್ತು ಕ್ರಮ ಜರುಗಿಸಲು ಆದೇಶಿಸಿರುತ್ತಾರೆ.

(3) ಈ ಹಿನ್ನಲೆಯಲ್ಲಿ ಉಲ್ಲೇಖಿತ ಸುತ್ತೋಲೆಯಲ್ಲಿನ ಸೂಚನೆಗಳ ಅನ್ವಯ ನಗರ ಪ್ರದೇಶಗಳ ಕಟ್ಟಡಗಳ ಪರವಾನಗಿ, ಪರಿಶೀಲನೆ ಮತ್ತು ಅನಧಿಕೃತ ಹಾಗೂ ಅಕ್ರಮ ಕಟ್ಟಡಗಳ ಬಗ್ಗೆ ದಂಡ ಸಹಿತ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ, ನಿಯಮಿತವಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಪಾಲನಾ ವರದಿಯನ್ನು ಸಲ್ಲಿಸಲು ಅನುವಾಗುವಂತೆ ಈ ಕೆಳಕಂಡ ಸೂಚನೆಗಳನ್ನು ಹೊರಡಿಸಲಾಗಿದೆ.

1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ ಮಹಾಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸಿರುವ ನಗರ / ಪಟ್ಟಣಗಳಲ್ಲಿ ಕಟ್ಟಡ ನಿರ್ಮಾಣಗಳಿಗೆ ಅನುಮತಿ ನೀಡುವಾಗ ನಡುಜಾಗ ಮತ್ತು ಭೂ ವಿಸ್ತೀರ್ಣ ಅನುಪಾತಗಳಿಗೆ ಸಂಬಂಧಿಸಿದಂತೆ ಮಾಸ್ಟರ್ ಪ್ಲಾನ್‌ನ ವಲಯ ನಿಯಮಾವಳಿಗಳನ್ನು ಅನುಸರಿಸತಕ್ಕದ್ದು. ಇತರ ಪಟ್ಟಣಗಳಲ್ಲಿ ಮಾದರಿ ಕಟ್ಟಡ ನಿಯಾಮವಳಿಗಳನ್ನು ಅನುಸರಿಸತಕ್ಕದ್ದು.

2) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನೂತನ ಕಟ್ಟಡ ನಿರ್ಮಾಣ/ಹಾಲಿ ಕಟ್ಟಡಗಳ ಮಾರ್ಪಾಡು ಪ್ರಸ್ತಾವನೆಗಳಿಗೆ ಪರವಾನಗಿಯಲ್ಲಿ ಅಳವಡಿಸಬೇಕಾದ ಸೆಟ್ ಬ್ಯಾಕ್, ಭೂ ವಿಸ್ತೀರ್ಣ ಅನುಪಾತ (ಎಫ್.ಎ.ಆರ್) ಹಾಗೂ ಇತರೆ ಎಲ್ಲಾ ಷರತ್ತುಗಳನ್ನು ಪರವಾನಗಿ ಆದೇಶ ಹಾಗೂ ಅನುಮೋದಿತ ನಕ್ಷೆಗಳಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದ್ದು.

3) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣದ ಅನುಮೋದಿತ ನಕ್ಷೆ ಉಲ್ಲಂಘನೆ ಬಗ್ಗೆ ಸಾರ್ವಜನಿಕರು ದೂರು ನೀಡಲು ಅನುವಾಗುವಂತೆ ನಗರ ಸ್ಥಳೀಯ ಸಂಸ್ಥೆಯವತಿಯಿಂದ ಕಟ್ಟಡ ನಿರ್ಮಾಣ/ಮಾರ್ಪಾಡು ಅನುಮೋದಿತ ನಕ್ಷೆಯ ಪ್ರತಿಯನ್ನು 3 ಅಡಿ ಅಗಲ ಮತ್ತು 2 ಅಡಿ ಎತ್ತರದ (3'*2') ಫಲಕ ಸಿದ್ದಪಡಿಸಿ ಅರ್ಜಿದಾರರು/ಕಟ್ಟಡದ ಮಾಲೀಕರಿಗೆ ಒದಗಿಸತಕ್ಕದ್ದು. ಈ ಬಾಬ್ತು ತಗಲುವ ವೆಚ್ಚವನ್ನು ಪರವಾನಗಿ ಶುಲ್ಕದ ಜೊತೆಯಲ್ಲಿಯೇ ಅರ್ಜಿದಾರರಿಂದ ವಸೂಲು ಮಾಡತಕ್ಕದ್ದು.

4) ನಗರ ಸ್ಥಳೀಯ ಸಂಸ್ಥೆಯು ಅನುಮೋದಿಸಿರುವ ಕಟ್ಟಡ ನಿರ್ಮಾಣ/ಮಾರ್ಪಾಡು ಅನುಮೋದಿತ ನಕ್ಷೆಯ ಫಲಕವನ್ನು ನಿರ್ಮಾಣ ಸ್ಥಳದಲ್ಲಿ ಅರ್ಜಿದಾರರು/ಕಟ್ಟಡದ ಮಾಲೀಕರು ಕಾಮಗಾರಿಯ ಪ್ರಾರಂಭದಿಂದ ಪೂರ್ಣಗೊಳ್ಳುವ ಸಂಪೂರ್ಣ ಅವಧಿಗೆ ಕಟ್ಟಡದ ಮುಂಭಾಗದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕೆಂಬ ಷರತ್ತನ್ನು ಪರವಾನಗಿ ಆದೇಶದಲ್ಲಿ ಅಳವಡಿಸತಕ್ಕದ್ದು.

5) ನಗರ ಸ್ಥಳೀಯ ಸಂಸ್ಥೆಯು ವಿತರಿಸುವ ಕಟ್ಟಡ ನಿರ್ಮಾಣ/ಮಾರ್ಪಾಡು ಅನುಮೋದಿತ ನಕ್ಷೆಯ ಫಲಕವನ್ನು ಕಟ್ಟಡ ನಿರ್ಮಾಣ/ಮಾರ್ಪಾಡು ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆಗಿನ ಅವಧಿಯಲ್ಲಿ ಕಳವು/ಹವಮಾನ ವೈಪರೀತ್ಯದಿಂದ ಹಾಳಾದ ಎಲ್ಲಾ ಸಂದರ್ಭಗಳಲ್ಲಿ ಅರ್ಜಿದಾರರು/ಕಟ್ಟಡದ ಮಾಲೀಕರು, ನಿಗದಿಪಡಿಸಿರುವ ಶುಲ್ಕವನ್ನು ಪುನಃ ನಗರ ಸ್ಥಳೀಯ ಸಂಸ್ಥೆಗೆ ಪಾವತಿ ಮಾಡಿ ಮತ್ತೊಮ್ಮೆ ಫಲಕವನ್ನು ಪಡೆದು ಕಟ್ಟಡದ ಮುಂಭಾಗದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು ಎಂಬ ಷರತ್ತನ್ನು ಪರವಾನಗಿ ಆದೇಶದಲ್ಲಿ ಅಳವಡಿಸತಕ್ಕದ್ದು.

6) ಪರವಾನಗಿ ಆದೇಶದಲ್ಲಿನ ಷರತ್ತನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅನುಮೋದಿತ ನಕ್ಷೆಯ ಫಲಕವನ್ನು ಪ್ರದರ್ಶಿಸಲು ವಿಫಲರಾಗುವ ಅರ್ಜಿದಾರರು/ ಕಟ್ಟಡದ ಮಾಲೀಕರಿಗೆ ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿಗಳು ನೋಟೀಸ್ ಜಾರಿ ಮಾಡಿ, ಅನುಮೋದಿತ ನಕ್ಷೆಯ ಫಲಕವನ್ನು ಪ್ರದರ್ಶಿಸುವವರೆಗೆ ಕಟ್ಟಡ ನಿರ್ಮಾಣ/ಮಾರ್ಪಾಡು ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಆದೇಶಿಸತಕ್ಕದ್ದು.

7) ಕಟ್ಟಡದ ನಿರ್ಮಾಣ/ಮಾರ್ಪಾಡು ಕಾಮಗಾರಿ ಪ್ರಾರಂಭಗೊಂಡ ನಂತರ ನಗರ ಸ್ಥಳೀಯ ಸಂಸ್ಥೆಯ ಸಕ್ಷಮ ಅಧಿಕಾರಿಗಳು ಈ ಕೆಳಕಂಡ ಹಂತಗಳಲ್ಲಿ ಕಡ್ಡಾಯವಾಗಿ ಸ್ಥಳ ಪರಿಶೀಲನೆ ಮಾಡಿ ಅನುಮೋದಿತ ನಕ್ಷೆ ಹಾಗೂ ವಿಧಿಸಿರುವ ನಡುಜಾಗ, ಭೂ ವಿಸ್ತೀರ್ಣ ಅನುಪಾತ ಹಾಗೂ ಇತರೆ ಎಲ್ಲಾ ಷರತ್ತುಗಳ ಅನ್ವಯ ಕಟ್ಟಡದ ನಿರ್ಮಾಣ/ ಮಾರ್ಪಾಡು ಕೈಗೊಂಡಿರುವ ಬಗ್ಗೆ ಧೃಢೀಕರಿಸಿಕೊಳ್ಳತಕ್ಕದ್ದು.

   ಅ) ಕಟ್ಟಡದ ತಳಪಾಯದ ಅಗೆತ ಪೂರ್ಣಗೊಂಡ ನಂತರ

   ಆ) ಕಟ್ಟಡದ ಬೇಸ್‌ಮೆಂಟ್ ಹಂತ ಪೂರ್ಣಗೊಂಡ ನಂತರ

   ಇ) ಭೂಮಟ್ಟದಿಂದ ಮೇಲಿನ ಕಟ್ಟಡದ ಭಾಗ ಪೂರ್ಣಗೊಂಡ ನಂತರ

   ಈ) ಇತರೆ ಬಾಕಿ ಕಾಮಗಾರಿಗಳು ಪೂರ್ಣಗೊಂಡ ನಂತರ ಹಾಗೂ ಮುಕ್ತಾಯ ಪ್ರಮಾಣ ಪತ್ರ ನೀಡುವ ಪೂರ್ವದಲ್ಲಿ

8) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪರವಾನಗಿ ಪಡೆದು ನಿರ್ಮಿಸಲಾಗುವ ಕಟ್ಟಡಗಳ ನಿರ್ಮಾಣದ ವಿವಿಧ ಹಂತಗಳಲ್ಲಿ ಆಗುವ ಉಲ್ಲಂಘನೆ ಮತ್ತು ಪರವಾನಗಿ ಇಲ್ಲದೇ ನಿರ್ಮಾಣಗೊಳ್ಳಬಹುದಾದ ಅನಧಿಕೃತ ಕಟ್ಟಡಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಎಲ್ಲಾ ಹಂತದ ಅಧಿಕಾರಿಗಳು ಈ ಕೆಳಕಂಡಂತೆ ತಪಾಸಣಾ ಕಾರ್ಯವನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಅಧಿಕಾರಿಯ ಹುದ್ದೆ	ತಪಾಸಣೆ ಕೈಗೊಳ್ಳಬೇಕಾದ ಪ್ರಮಾಣ		
		ಪರವಾನಗಿ ನೀಡುವ ಪೂರ್ವದಲ್ಲಿ	ಪರವಾನಗಿ ನೀಡಿದ ನಂತರ ಕಟ್ಟಡ ಪೂರ್ಣ ಗೊಳ್ಳುವ ವರೆಗೆ ವಿವಿಧ ಹಂತಗಳಲ್ಲಿ	ಅನಧಿಕೃತ ಕಟ್ಟಡ ನಿರ್ಮಾಣ
1	ಆಯುಕ್ತರು/ಅಧೀಕ್ಷಕ ಅಭಿಯಂತರರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳು	ಪರವಾನಗಿ ನೀಡಿರುವ ಕನಿಷ್ಟ ಶೇ 50 ಪ್ರಕರಣಗಳು	ಪರವಾನಗಿ ನೀಡಿರುವ ಕನಿಷ್ಟ ಶೇ 25 ರಷ್ಟು ಪ್ರಕರಣಗಳು	ಕನಿಷ್ಟ ಶೇ 25 ರಷ್ಟು ಅನಧಿಕೃತ ನಿರ್ಮಾಣಗಳು
2	ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯ ಪಾಲಕ ಅಭಿಯಂತರರು	ಪರವಾನಗಿ ನೀಡಿರುವ ಎಲ್ಲಾ ಪ್ರಕರಣಗಳು	ಪರವಾನಗಿ ನೀಡಿರುವ ಕನಿಷ್ಟ ಶೇ 50 ರಷ್ಟು ಪ್ರಕರಣಗಳು	ಎಲ್ಲಾ ಅನಧಿಕೃತ ನಿರ್ಮಾಣಗಳು
3	ಸಹಾಯಕ ಅಭಿಯಂತರರು/ ಕಿರಿಯ ಅಭಿಯಂತರರು	ಪರವಾನಗಿ ನೀಡಿರುವ ಎಲ್ಲಾ ಪ್ರಕರಣಗಳು	ಪರವಾನಗಿ ನೀಡಿರುವ ಎಲ್ಲಾ ಪ್ರಕರಣಗಳು	ಎಲ್ಲಾ ಅನಧಿಕೃತ ನಿರ್ಮಾಣಗಳು

9) ಅನಧಿಕೃತ ನಿರ್ಮಾಣ / ಕಟ್ಟಡ ನಕ್ಷೆ ಉಲ್ಲಂಘನೆ ಬಗ್ಗೆ ಸಾರ್ವಜನಿಕರಿಂದ ದೂರು ಸ್ವೀಕರಿಸಿದಲ್ಲಿ, ಅವುಗಳನ್ನು ಪ್ರತ್ಯೇಕವಾಗಿ ವಹಿಯಲ್ಲಿ ದಾಖಲಿಸಿಕೊಂಡು ನಂತರ ಎಲ್ಲಾ ಅಂತಹ ಕಟ್ಟಡಗಳ ತಪಾಸಣೆ ಕೈಗೊಳ್ಳತಕ್ಕದ್ದು.

10) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವ್ಯವಸ್ಥಿತ ಕಟ್ಟಡ ನಿರ್ಮಾಣ ಪ್ರಕ್ರಿಯೆ ಹಾಗೂ ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ತಡೆಗಟ್ಟಲು ಸಕ್ಷಮ ಅಧಿಕಾರಿಗಳು ಕೈಗೊಂಡಿರುವ ತಪಾಸಣಾ ಕಾರ್ಯದ ಬಗ್ಗೆ ಕೆಳಕಂಡ ನಮೂನೆಯಲ್ಲಿ ತ್ರೈಮಾಸಿಕ ವರದಿಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

ನಮೂನೆ

______________ ತ್ರೈಮಾಸಿಕ ಅಂತ್ಯಕ್ಕೆ ಅನ್ವಯಿಸುವಂತೆ ಕಟ್ಟಡ ನಿರ್ಮಾಣ ತಪಾಸಣಾ ವರದಿಯ ತಃಖ್ತೆ

ಕ್ರಮ ಸಂಖ್ಯೆ	ಪರಿಶೀಲ ನಾಧಿಕಾರಿಯ ಹುದ್ದೆ	ನಗರ ಸ್ಥಳೀಯ ಸಂಸ್ಥೆ ನೀಡಿರುವ ಕಟ್ಟಡ ಪರವಾ ನಗಿಯ ಒಟ್ಟು ಸಂಖ್ಯೆ	ಕಟ್ಟಡ ನಿರ್ಮಾಣ ಹಂತದಲ್ಲಿ ಕೈಗೊಂಡ ತಪಾಸಣೆಯ ಸಂಖ್ಯೆ				ಅನಧಿಕೃತ ನಿರ್ಮಾಣ ಗಳು	ಅತಿಕ್ರಮ/ ಅನಧಿಕೃತ ನಿರ್ಮಾಣ ಪ್ರಕರಣದಲ್ಲಿ ಕೈಗೊಂಡಿ ರುವ ಕ್ರಮ
			ಕಟ್ಟಡದ ತಳ ಪಾಯದ ಅಗೆತ ಪೂರ್ಣ ಗೊಂಡ ನಂತರ	ಕಟ್ಟಡದ ಬೇಸ್ ಮೆಂಟ್ ಹಂತ ಪೂರ್ಣ ಗೊಂಡ ನಂತರ	ಭೂಮಟ್ಟ ದಿಂದ ಮೇಲಿನ ಕಟ್ಟಡದ ಭಾಗ ಪೂರ್ಣ ಗೊಂಡ ನಂತರ	ಇತರೆ ಬಾಕಿ ಕಾಮ ಗಾರಿಗಳು ಪೂರ್ಣ ಗೊಂಡ ನಂತರ ಮುಕ್ತಾಯ ಪ್ರಮಾಣ ಪತ್ರ ನೀಡುವ ಪೂರ್ವದಲ್ಲಿ		

11) ನಗರ ಸ್ಥಳೀಯ ಸಂಸ್ಥೆಯ ಸಕ್ಷಮ ಅಧಿಕಾರಿಗಳು ಕಟ್ಟಡಗಳ ಪರಿಶೀಲನೆಯ ಸಂದರ್ಭದಲ್ಲಿ ಅವರ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಅನಧಿಕೃತ/ಅತಿಕ್ರಮ ಕಟ್ಟಡಗಳ ನಿರ್ಮಾಣ ಕಂಡುಬರದ ಸಂದರ್ಭದಲ್ಲಿ ಈ ಕೆಳಕಂಡಂತೆ ಧೃಢೀಕರಣ ಪ್ರಮಾಣ ಪತ್ರವನ್ನು ಅವರ ಹುದ್ದೆಯ ಅನುಸಾರ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ/ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ಪ್ರತಿ ತಿಂಗಳು ಸಲ್ಲಿಸತಕ್ಕದ್ದು.

"ಶ್ರೀ ______________________, ಆದ ನಾನು __________________ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಗರ ಸ್ಥಳೀಯ ಸಂಸ್ಥೆಯ ವತಿಯಿಂದ ನನಗೆ ನೀಡಲಾಗಿರುವ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ, ___________. ______________ ತಿಂಗಳಿನಲ್ಲಿ ನಾನು ಕೈಗೊಂಡಿರುವ ಪರಿಶೀಲನೆಯ ಅನ್ವಯ ಯಾವುದೇ ಅನಧಿಕೃತ/ಅತಿಕ್ರಮ ಕಟ್ಟಡಗಳ ನಿರ್ಮಾಣವು ಕಂಡುಬಂದಿರುವುದಿಲ್ಲ ಎಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: ಸಹಿ :

ಹೆಸರು :

ಹುದ್ದೆ :

ನಗರ ಸ್ಥಳೀಯ ಸಂಸ್ಥೆಯ ಹೆಸರು :

12) ನಗರ ಸ್ಥಳೀಯ ಸಂಸ್ಥೆಯ ಸಕ್ಷಮ ಅಧಿಕಾರಿಗಳು ಆಯಾ ತಿಂಗಳಲ್ಲಿ ಕೈಗೊಂಡಿರುವ ಅನಧಿಕೃತ ಕಟ್ಟಡ ನಿರ್ಮಾಣ ಉಲ್ಲಂಘನೆ ತಪಾಸಣಾ ಕಾರ್ಯದ ವಿವರಗಳನ್ನು ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರು ಕ್ರೋಢೀಕರಿಸಿ ವೆಬ್‌ಸೈಟ್‌ನಲ್ಲಿ ಪ್ರತಿ ತಿಂಗಳ 5ನೇ

ದಿನಾಂಕದ ಒಳಗೆ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು ಹಾಗೂ ಈ ವಿವರಗಳನ್ನು ನಗರ ಸ್ಥಳೀಯ ಸಂಸ್ಥೆಯ ಕೇಂದ್ರ ಕಛೇರಿ, ವಲಯ ಕಛೇರಿ ಹಾಗೂ ಇತರೆ ಅಧೀನ ಕಛೇರಿಗಳ ಸೂಚನಾ ಫಲಕದಲ್ಲಿ ಸಾರ್ವಜನಿಕರ ವೀಕ್ಷಣೆಗೆ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

13) ಅನಧಿಕೃತ ಕಟ್ಟಡ ನಿರ್ಮಾಣ ಉಲ್ಲಂಘನೆ ಕಂಡುಬಂದ ಪ್ರತಿಯೊಂದು ಸಂದರ್ಭದಲ್ಲಿ ಕೂಡಲೇ ಸಂಬಂಧಿತ ಕಟ್ಟಡದ ಪರವಾನಗಿ ಕಡತದಲ್ಲಿ ಈ ಬಗ್ಗೆ ತಪಾಸಣಾ ವರದಿಯನ್ನು ಅಧೀನ ಅಧಿಕಾರಿಗಳು ದಾಖಲಿಸಿ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಗೆ ಕಡತವನ್ನು ಅಗತ್ಯ ಕ್ರಮಕ್ಕಾಗಿ ಮಂಡಿಸತಕ್ಕದ್ದು ಹಾಗೂ ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ, 1976ರ ಕಲಂ 308 ಮತ್ತು 321 ಹಾಗೂ ಕರ್ನಾಟಕ ಸಿಟಿ ಮುನ್ಸಿಪಾಲಿಟಿಸ್ (ಮಾದರಿ) ಕಟ್ಟಡ ಉಪ ವಿಧಿಗಳು, 1979ರ ನಿಯಮ 16, 17 ಹಾಗೂ 22ರಲ್ಲಿ ವಿಧಿಸಿರುವಂತೆ ಕಟ್ಟಡದ ಮಾಲೀಕರಿಗೆ ಕಾರಣ ಕೇಳುವ ನೋಟೀಸ್‌ಗಳನ್ನು ಜಾರಿ ಮಾಡಿ ಅಗತ್ಯವಿದ್ದಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲು ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಆದೇಶಗಳನ್ನು ಹೊರಡಿಸತಕ್ಕದ್ದು.

14) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವ್ಯವಸ್ಥಿತ ಕಟ್ಟಡ ನಿರ್ಮಾಣ ಪ್ರಕ್ರಿಯೆ ಹಾಗೂ ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ತಡೆಗಟ್ಟಲು ಸಕ್ಷಮ ಅಧಿಕಾರಿಗಳು ಕೈಗೊಂಡಿರುವ ತಪಾಸಣಾ ವರದಿಯ ಬಗ್ಗೆ ಚರ್ಚಿಸಲು ಸದರಿ ವಿಷಯವನ್ನು ಪ್ರತಿ ಕೌನ್ಸಿಲ್ ಸಭೆಯ ಅಜೆಂಡಾದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

4) ಈ ಸುತ್ತೋಲೆಯಲ್ಲಿನ ಮಾರ್ಗದರ್ಶಿ ಸೂತ್ರಗಳು ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ ನಗರ ಸ್ಥಳೀಯ ಸಂಸ್ಥೆಗಳ ಸಕ್ಷಮ ಅಧಿಕಾರಿಗಳು ಸುತ್ತೋಲೆಯಲ್ಲಿನ ಸೂಚನೆಯ ಅನ್ವಯ ಕಟ್ಟುನಿಟ್ಟಾಗಿ ಕ್ರಮ ಜರುಗಿಸಿ ಮೇಲಿನ ನಮೂನೆಯಲ್ಲಿ ತ್ರೈಮಾಸಿಕ ವರದಿಯನ್ನು ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಎಂ.ಆರ್. ಮಹೇಶ್ ಕುಮಾರ್,
ಸರ್ಕಾರದ ಅಧೀನ ಕಾರ್ಯದರ್ಶಿ
(ಮಹಾನಗರಪಾಲಿಕೆ-2)
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 1207

ಒಳಾಡಳಿತ ಸಚಿವಾಲಯ

ವಿಷಯ :- ಶ್ರೀ.ಹೆಚ್.ಆರ್.ಮಹಾದೇವಯ್ಯ, ಡಿವೈ.ಎಸ್.ಪಿ, ಕೊಳ್ಳೇಗಾಲ ಉಪ ವಿಭಾಗ, ಚಾಮರಾಜನಗರ ಜಿಲ್ಲೆ ರವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ಬಗ್ಗೆ.

ಓದಲಾಗಿದೆ :-
1) ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಆದೇಶ ಸಂಖ್ಯೆ: ಸಿಬಿ(5)80/2010-11, ದಿನಾಂಕ 29-09-2011.
2) ಶ್ರೀ ಹೆಚ್.ಆರ್.ಮಹಾದೇವಯ್ಯ ರವರ ಮೇಲ್ಮನವಿ ದಿನಾಂಕ 17-10-2011.
3) ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ: ಸಿಬಿ(5)80/2010-11, ದಿನಾಂಕ 17-11-2011.
4) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 200 ಸಿಎನ್‌ಎಸ್ ದಿನಾಂಕ 16-03-2012.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಹೆಚ್.ಆರ್.ಮಹಾದೇವಯ್ಯ, ಡಿವೈ.ಎಸ್.ಪಿ, ಕೊಳ್ಳೇಗಾಲ ರವರು ಈ ಹಿಂದೆ ತಿಪಟೂರು ಉಪ ವಿಭಾಗದಲ್ಲಿ ಪಿ.ಐ. ಯಾಗಿ ದಿನಾಂಕ 18-02-1998ರಿಂದ 21-04-2000ರ ವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾಗ ತಿಪಟೂರು ಪೊಲೀಸ್ ಠಾಣೆಯಲ್ಲಿ ದಾಖಲಾದ ಮೊಕದ್ದಮೆ ಸಂಖ್ಯೆ:40/97 ಕಲಂ 408,114 ಐಪಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮುದ್ದೆ ಮಾಲುಗಳನ್ನು ಶ್ರೀ ಎಂ.ನಾಗರಾಜ್, ಪ್ರಭಾರ ಪಿ.ಐ ರವರು ವರ್ಗಾವಣೆಯಾಗಿ ಹೋಗುವಾಗ ಅವರಿಂದ ಪೂರ್ಣ ಪ್ರಮಾಣದ ಪ್ರಭಾರ ಪಡೆದಿರುವುದಿಲ್ಲ. ಪೂರ್ಣ ಪ್ರಮಾಣದ ಪ್ರಭಾರ ನೀಡದಿರುವ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ. ಪ್ರಕರಣದ ಮುದ್ದೆಮಾಲುಗಳನ್ನು ವಿಚಾರಣೆ ಸಮಯದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಸೂಚಿಸಿದ್ದಾಗ್ಯೂ ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಸಾಧ್ಯವಾಗದೆ ಪ್ರಕರಣವು ದಿನಾಂಕ 31-07-2010ರಂದು ಖುಲಾಸೆಗೊಳ್ಳಲು ಕಾರಣವಾಗುವುದರ ಮೂಲಕ ಕರ್ತವ್ಯ ಚ್ಯುತಿ ಬೇಜವಾಬ್ದಾರಿ ಎಸಗಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಆರೋಪದ ಮೇರೆಗೆ ಕೆ.ಎಸ್.ಪಿ (ಡಿ.ಪಿ) ನಿಯಮಗಳು, 1965ರ ನಿಯಮ 7ರಡಿಯಲ್ಲಿ ನೋಟೀಸು ಜಾರಿ ಮಾಡಿ ಅವರಿಂದ ಸಮಜಾಯಿಷಿಯನ್ನು ಪಡೆದು ಶ್ರೀ ಮಹದೇವಯ್ಯ ರವರು ನೀಡಿರುವ ಸಮಜಾಯಿಷಿ ತೃಪ್ತಿಕರವಾಗಿಲ್ಲದ ಕಾರಣ ಅಧಿಕಾರಿಗಳ ಮುಂಬರುವ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ

ವಾರ್ಷಿಕ ವೇತನ ಬಡ್ತಿಗೆ ದಕ್ಕೆಯಾಗದಂತೆ ಆರು ತಿಂಗಳುಗಳ ಕಾಲ ತಡೆಹಿಡಿದು ಡಿಜಿ ಮತ್ತು ಐಜಿಪಿ ರವರು ದಿನಾಂಕ 29-09-2011ರಂದು ಆದೇಶ ಹೊರಡಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಹೆಚ್.ಆರ್.ಮಹದೇವಯ್ಯ ರವರು ಡಿವೈ.ಎಸ್.ಪಿ ರವರ ಆದೇಶ ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಮೇಲ್ಮನವಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರು ಅಭಿಪ್ರಾಯಪಟ್ಟಿರುತ್ತಾರೆ. ಈ ಪ್ರಕರಣವು ನಾನ್ ಹೀನಸ್ ಪ್ರಕರಣವಾದ್ದರಿಂದ ಪಿ.ಎಸ್.ಐ ರವರೆ ತನಿಖಾಧಿಕಾರಿಯಾಗಿದ್ದು, ಅವರ ವ್ಯಾಪ್ತಿಯಲ್ಲಿ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ಅಪೀಲುದಾರರು ನುಡಿದಿರುತ್ತಾರೆ. ಈ ಕುರಿತು ಈ ಹಿಂದೆ ನಿಯಮ 7ರಡಿಯಲ್ಲಿ ನೋಟೀಸು ಜಾರಿ ಮಾಡಿದ ಸಮಯದಲ್ಲಿ ಈ ಅಂಶಗಳನ್ನು ತಮ್ಮ ಸಮಜಾಯಿಷಿಯಲ್ಲಿ ನಮೂದಿಸದೆ ಮೇಲ್ಮನವಿಯಲ್ಲಿ ನಮೂದಿಸಿರುವುದರಿಂದ ಈ ಅಂಶಗಳ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಕ್ರಮ ಜರುಗಿಸಲು ಹಾಗೂ ಅಧೀನ ಅಧಿಕಾರಿಗಳ ಕಾರ್ಯ ವೈಖರಿ ಬಗ್ಗೆ ಮೇಲ್ವಿಚಾರಣೆ ನಡೆಸುವಲ್ಲಿ ಅಧಿಕಾರಿಗಳು ವಿಫಲರಾಗಿರುತ್ತಾರೆ. ಆದ್ದರಿಂದ ಅಧಿಕಾರಿಗಳಿಗೆ ವಿಧಿಸಿರುವ ದಂಡನೆಯು ಸೂಕ್ತವಾಗಿದ್ದು ಮೇಲ್ಮನವಿ ತಿರಸ್ಕರಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಆರೋಪಿತ ಅಧಿಕಾರಿಗಳ ಮೇಲ್ಮನವಿ ಬಗ್ಗೆ ಪೊಲೀಸ್ ಮಹಾನಿರ್ದೇಶಕರು ನೀಡಿರುವ ಅಭಿಪ್ರಾಯವನ್ನು ಪರಿಶೀಲಿಸಿದೆ.

ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಆರ್.ಮಹದೇವಯ್ಯ, ಪೊಲೀಸ್ ಉಪಾಧೀಕ್ಷಕರು, ಕೊಳ್ಳೇಗಾಲ ಇವರು ದಿನಾಂಕ 17-10-2011ರಂದು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯಲ್ಲಿ, ಮೊಕದ್ದಮೆ ಸಂಖ್ಯೆ:40/97 ಕಲಂ 468, 114 ಐಪಿಸಿ ಪ್ರಕರಣವು ನಾನ್-ಹೇನಸ್ ಪ್ರಕರಣವಾಗಿದ್ದರಿಂದ, ಅದು ಪಿ.ಎಸ್.ಐ ರವರುಗಳ ತನಿಖಾ ವ್ಯಾಪ್ತಿಯಲ್ಲಿ ಬರುವ ಪ್ರಕರಣವಾಗಿದ್ದು, ಶ್ರೀ ಹೆಚ್.ಎಂ.ಮಹದೇವಪ್ಪ, ಪಿ.ಎಸ್.ಐ ರವರೇ ತನಿಖೆ ಮಾಡಿ ಮುಗಿಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ದಿನಾಂಕ 28-07-2001ರಂದು ಸಲ್ಲಿಸಿರುತ್ತಾರೆ. ತಾವು ಪ್ರಕರಣ ದಾಖಲಾದ ದಿನಾಂಕ 22-02-2001ರಂದು ದೋಷಾರೋಪಣಾ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ದಿನಾಂಕ 28-07-2001ರಂದು ಸದರಿ ಠಾಣೆಯ ಕರ್ತವ್ಯದ ಮೇಲಿರುವುದಿಲ್ಲ. ಪಿ.ಎಸ್.ಐ ಮಟ್ಟದ ಅಧಿಕಾರಿಗಳೇ ಸಂಬಂಧಿತ ಸ್ವತ್ತುಗಳನ್ನು ತಮ್ಮ ವಶದಲ್ಲಿಟ್ಟುಕೊಂಡು, ಅವರ ಉತ್ತರಾಧಿಕಾರಿಗಳಿಗೆ ಹಸ್ತಾಂತರಿಸಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಯಲ್ಲದ ಕಾರಣ ಇದರ ಕಡತ ತಮಗೆ ಹಸ್ತಾಂತರವಾಗಿರುವುದಿಲ್ಲವೆಂದೂ ಮತ್ತು ಈ ತನಿಖೆಯನ್ನು ಶ್ರೀ ಹೆಚ್.ಎಂ.ಮಹದೇವಪ್ಪ, ಪಿ.ಎಸ್.ಐ ರವರು ವಹಿಸಿಕೊಂಡಾಗ ತಾವು ಆ ಠಾಣೆಯಲ್ಲಿ ಇರಲಿಲ್ಲ. ಇದನ್ನು ಶಿಸ್ತು ಪ್ರಾಧಿಕಾರ ಸರಿಯಾಗಿ ಗಮನಿಸದೆ ತಮ್ಮನ್ನು ಹೊಣೆಗಾರರನ್ನಾಗಿ ನಿಗಧಿ ಮಾಡಿ ಶಿಕ್ಷೆ ವಿಧಿಸಿರುತ್ತದೆ ಎಂದು ಆರೋಪಿತ ಶ್ರೀ ಹೆಚ್.ಆರ್.ಮಹಾದೇವಯ್ಯ ರವರು ಮೇಲ್ಮನವಿಯಲ್ಲಿ ನಮೂದಿಸಿರುವ ಅಂಶವನ್ನು ಗಮನಿಸಲಾಗಿದೆ. ಈ ಅಂಶಕ್ಕೆ ಪೂರಕವಾಗಿ ಡಿಜಿ ಮತ್ತು ಐಜಿಪಿರವರು ತಮ್ಮ ದಿನಾಂಕ 17-11-2011ರಂದು ಸರ್ಕಾರಕ್ಕೆ ಸಲ್ಲಿಸಿರುವ ಕಂಡಿಕಾವಾರು ಷರಾದಲ್ಲಿ, ಈ ಅಂಶವನ್ನು ಆಪಾದಿತರು ಸಮಜಾಯಿಷಿ ಸಲ್ಲಿಸುವ ವೇಳೆಯಲ್ಲಿ ನಮೂದಿಸದೆ ಮೇಲ್ಮನವಿಯಲ್ಲಿ ನಮೂದಿಸಿದ್ದು, ಈ ಬಗ್ಗೆ ಸರ್ಕಾರದಿಂದಲೇ ಪರಿಶೀಲಿಸಿ ಕ್ರಮ ಜರುಗಿಸಲು ಕೋರಿರುತ್ತಾರೆ. ಮೇಲಿನ ಈ ವಾಸ್ತವಾಂಶದ ಹಿನ್ನೆಲೆಯಲ್ಲಿ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ಪುರಸ್ಕರಿಸಿ, ಇವರ ವಿರುದ್ಧ ದಿನಾಂಕ 29-09-2011ರಲ್ಲಿ ವಿಧಿಸಿದ ದಂಡನಾ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿದೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಅಧಿಕಾರಿಗಳಿಗೆ ಶಿಸ್ತುಪ್ರಾಧಿಕಾರ ವಿಧಿಸಿರುವ ದಂಡನೆಯನ್ನು ರದ್ದುಪಡಿಸಲು ನಿಯಮಾನುಸಾರ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಸಹ ಪಡೆಯಲಾಗಿದೆ.

ಕಾರಣ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 344 ಪೊಸಿಪ 2011, ಬೆಂಗಳೂರು, ದಿನಾಂಕ: 18-04-2012.

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಶ್ರೀ ಹೆಚ್.ಆರ್.ಮಹದೇವಯ್ಯ, ಡಿವೈ.ಎಸ್.ಪಿ, ಕೊಳ್ಳೇಗಾಲ (ಈ ಹಿಂದೆ ಪಿ.ಐ, ತಿಪಟೂರು ಉಪ ವಿಭಾಗ) ರವರಿಗೆ ಪೊಲೀಸ್ ಮಹಾ ನಿರ್ದೇಶಕರು ವಿಧಿಸಿರುವ ದಂಡನಾದೇಶ ಸಂಖ್ಯೆ:ಸಿಬಿ(5)80:2010-11 ದಿನಾಂಕ 29-09-2011ರ ಆದೇಶವನ್ನು ರದ್ದುಪಡಿಸಿ ಅರ್ಜಿದಾರರ ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಎ)

ಪಿ.ಆರ್. 1218

ಶಿಕ್ಷಣ ಸಚಿವಾಲಯ

ವಿಷಯ: ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರು ನಡೆಸುತ್ತಿರುವ ಹರಿಹರದ ಬಾಬಾ ಸಾಹೇಬ ಅಂಬೇಡ್ಕರ್ ಶತಮಾನೋತ್ಸವ ಪದವಿ ಕಾಲೇಜಿನ ಬೋಧಕೇತರ ಹುದ್ದೆಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು

ಓದಲಾಗಿದೆ:

1) ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 551 ಯುಪಿಸಿ 99 ದಿನಾಂಕ: 07–08–2003

2) ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 30 ಯುಪಿಸಿ 2008 ದಿನಾಂಕ:13–05–2009

3) ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 30 ಯುಪಿಸಿ 2008 ದಿನಾಂಕ: 05–10–2009

4) ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:07:ಜಿಇಎ.ಶಿವಿ:2010–11:ಪಿಸಿಸಿ–3, ದಿನಾಂಕ: 30–10–2010.

5) ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ:ಸಿ:499:2011, ದಿನಾಂಕ:28–10–2011.

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ: 07–08–2003ರ ಸರ್ಕಾರಿ ಅಧಿಸೂಚನೆಯಲ್ಲಿ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ನಿಯಮ 8(1)ರನ್ವಯ ದಿನಾಂಕ: 01–06–1987ರ ನಂತರ ಪ್ರಾರಂಭಿಸಲಾದ ಯಾವುದೇ ಖಾಸಗಿ ಪದವಿ ಕಾಲೇಜುಗಳು ಮತ್ತು ವಿಷಯಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ದಿನಾಂಕ:01–06–1987ರಿಂದ ದಿನಾಂಕ:31–03–1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲಾಗುತ್ತಿರುವ ಕಾಲೇಜುಗಳು ಮತ್ತು ಕೋರ್ಸ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರ ತೀರ್ಮಾನಿಸಿ ಈ ಕುರಿತು ನಿಯಮಗಳನ್ನು ರಚಿಸಲು ದಿನಾಂಕ:18–02–2009ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಿಂದ ನಡೆಸಲ್ಪಡುತ್ತಿರುವ ಖಾಸಗಿ ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಮಾತ್ರ ಮೇಲೆ ಹೇಳಿದ ನಿಯಮ 8ಕ್ಕೆ ಸೂಕ್ತ ಸೇರ್ಪಡೆ ಮಾಡಿ ದಿನಾಂಕ: 01–06–87 ರಿಂದ 31–03–95ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಓದಲಾದ (2) ದಿನಾಂಕ:13–05–2009ರ ಅಧಿಸೂಚನೆಯಲ್ಲಿ ಸೂಕ್ತ ತಿದ್ದುಪಡಿ ಮಾಡಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ: 05–10–2009ರಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ: 01–06–1987 ರಿಂದ 31–03–1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ಕೆಲವು ಮಾನದಂಡಗಳನ್ನು ನಿಗಧಿಪಡಿಸಿ ಆದೇಶ ಹೊರಡಿಸಿದೆ. ಮೇಲೆ (4)ರಲ್ಲಿ ಓದಲಾದ ದಿನಾಂಕ: 30–10–2010ರ ಪ್ರಸ್ತಾವನೆಯಲ್ಲಿ ಕಾಲೇಜು ಶಿಕ್ಷಣ ಆಯುಕ್ತರು ಸದರಿ ಕಾಲೇಜಿನ ಯಾವ ಯಾವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರನ್ನು ವೇತನಾನುದಾನಕ್ಕೆ ಒಳಪಡಿಸಬೇಕು ಎಂಬುದನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಕಾಲೇಜು ಶಿಕ್ಷಣ ನಿರ್ದೇಶನಾಲಯದ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾದ ಅಭ್ಯರ್ಥಿಗಳ ವಿದ್ಯಾರ್ಹತೆ ಮತ್ತು ಮೀಸಲಾತಿ ಪರಿಶೀಲಿಸಿ ಸದರಿ ಕಾಲೇಜನ್ನು ಮತ್ತು ಸದರಿ ಕಾಲೇಜಿನಲ್ಲಿರುವ ಹುದ್ದೆಗಳ ಎದುರು ಕಾರ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕೇತರ ನೌಕರರುಗಳನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಅನುದಾನದ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 188 ಯುಪಿಸಿ 2010 ಬೆಂಗಳೂರು ದಿನಾಂಕ:21–04–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ: 01–06–1987 ರಿಂದ 31–03–1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ ಹರಿಹರದ ಬಾಬಾ ಸಾಹೇಬ ಅಂಬೇಡ್ಕರ್ ಶತಮಾನೋತ್ಸವ ಪದವಿ ಕಾಲೇಜನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯದೊಂದಿಗೆ ಜಾರಿಗೆ ಬರುವಂತೆ ಸದರಿ ಹುದ್ದೆಗಳ ಎದುರು ಕಾರ್ಯ ನಿರ್ವಹಿಸುತ್ತಿರುವ ಕೆಳಕಂಡ ಅರ್ಹ ಬೋಧಕೇತರ ಸಿಬ್ಬಂದಿಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ವೇತನಾನುದಾನದ ವ್ಯಾಪ್ತಿಗೆ ತರಲಾಗಿದೆ.

ಕ್ರಮ ಸಂಖ್ಯೆ	ವೇತನಾನುದಾನಕ್ಕೆ ಒಳಪಡಿಸಿದ ಬೋಧಕೇತರರ ಹೆಸರು	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆ / ವಿಷಯ	ಪರಿಗಣಿಸಲಾಗಿರುವ ಮೀಸಲಾತಿ ಬಿಂದು
1	ಜಗನ್ನಾಥ. ಹೆಚ್.	ಅಧೀಕ್ಷಕರು	ಅನ್ವಯಿಸುವುದಿಲ್ಲ.
2	ರವೀಂದ್ರನಾಥ್.ಬಿ.ಜೆ.	ಪ್ರ.ದ.ಸಹಾಯಕ	ಅನ್ವಯಿಸುವುದಿಲ್ಲ

ಕ್ರಮ ಸಂಖ್ಯೆ	ವೇತನಾನುದಾನಕ್ಕೆ ಒಳಪಡಿಸಿದ ಬೋಧಕೇತರರ ಹೆಸರು	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆ / ವಿಷಯ	ಪರಿಗಣಿಸಲಾಗಿರುವ ಮೀಸಲಾತಿ ಬಿಂದು
3	ರಾಜು.ಎ.	ದ್ವಿದ.ಸಹಾಯಕರು	ಪ.ಜಾ.
4	ಕೃಷ್ಣ ಕುಮಾರಿ	ದ್ವಿ.ದ.ಸ.	ಜಿ.ಎಂ.
5	ಜಗದೀಶಪ್ಪ ಪಿ.ಮಾಗಡಿ	ದ್ವಿದ.ಬೆರಳಚ್ಚುಗಾರರು	ಜಿ.ಎಂ.
6	ರಾಜೇಶ್ವರಿ. ಹೆಚ್.	ಬೆರಳಚ್ಚುಗಾರರು	ಪ.ಜಾ.
7	ಶಿವರಾಜ್.ವೈ.ಮಡಿವಾಳರ	ಗ್ರಂಥಾಲಯ ಸಹಾಯಕ	ಜಿ.ಎಂ.
8	ಸುರೇಶ.ಬಿ.ಜಿ.	ಅಟೆಂಡರ್	ಜಿ.ಎಂ.
9	ಚಂದ್ರಕಾಂತ್.ಬಿ.ಎನ್.	ಅಟೆಂಡರ್	ಪ.ಜಾ.
10	ಅಣ್ಣಪ್ಪ.ಬಿ.	ಪರಿಚಾರಕರು	ಜಿ.ಎಂ.
11	ಮಂಜುನಾಥ.ಹೆಚ್.	ಪರಿಚಾರಕರು	ಜಿ.ಎಂ.
12	ಪುಟ್ಟಮ್ಮ.ಎಮ್.	ಪರಿಚಾರಕಿ	ಪ.ಜಾ.

1. ಒಂದು ವೇಳೆ ಈ ಆದೇಶದಲ್ಲಿ ವೇತನಾನುದಾನಕ್ಕೆ ಒಳಪಟ್ಟ ಬೋಧಕೇತರರುಗಳ ಪೈಕಿ ಯಾವುದೇ ಅನರ್ಹತೆ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ, ವೇತನಾನುದಾನವನ್ನು ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.

2. ಈ ನೇಮಕಾತಿಗಳಲ್ಲಿ ಮೀಸಲಾತಿಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬಂದಲ್ಲಿ ಅಂಥವರ ವೇತನಾನುದಾನವನ್ನು ಸಹ ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.

3. ವೇತನಾನುದಾನದ ವ್ಯಾಪ್ತಿಗೆ ಒಳಪಟ್ಟಂತಹ ಮೇಲ್ಕಂಡ ಬೋಧಕೇತರರುಗಳ ವೇತನವನ್ನು ಆದೇಶ ಹೊರಡಿಸಿದ ದಿನಾಂಕದಿಂದ ವಿಸ್ತರಿಸಿರುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದಲ್ಲಿ ನಿಗದಿ ಪಡಿಸತಕ್ಕದ್ದು. ಹಾಗೂ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲಾದ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಸೇವಾ ಹಾಗೂ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವಂತಿಲ್ಲ.

6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಅಂತಹ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕನಿಷ್ಠ ಶೇಕಡಾ 35ರಷ್ಟು ಇರತಕ್ಕದ್ದು. ಪ್ರವೇಶಾವಕಾಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿಗಳ ಕನಿಷ್ಠ ಪ್ರಮಾಣವನ್ನು ವಿವರವಾಗಿ ಅನುಸರಿಸತಕ್ಕದ್ದು. ತಪ್ಪಿದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

7. ವಿಶ್ವವಿದ್ಯಾಲಯದವರು ನಿಗದಿಪಡಿಸಿರುವ ಸರಾಸರಿ ಪ್ರವೇಶಾತಿಗೆ ಸಮಾನಾಂತರವಾಗಿ ಈ ಕಾಲೇಜುಗಳು ಕನಿಷ್ಠ ಪ್ರವೇಶಾತಿಯನ್ನು ಮಾಡಿಕೊಳ್ಳತಕ್ಕದ್ದು ಮತ್ತು ಪ್ರವೇಶಾತಿ (enrollment) ಪಡೆದ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 75ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವಂತೆ ಕ್ರಮವಹಿಸತಕ್ಕದ್ದು. ತಪ್ಪಿದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

8. ಇಂತಹ ಕಾಲೇಜುಗಳಲ್ಲಿನ ಪರೀಕ್ಷಾ ಫಲಿತಾಂಶಗಳು ಸಂಬಂಧಪಟ್ಟ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರತಕ್ಕದಲ್ಲ. ತಪ್ಪಿದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

9. ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಪದವಿ ಕಾಲೇಜುಗಳನ್ನು ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಸಿರಬೇಕು. ವಿಚ್ಛಿನ್ನತೆ ಉಂಟಾದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

10. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ಮತ್ತು ಇತರೆ ಸಂಬಂಧಿತ ನಿಯಮಗಳಡಿಯಲ್ಲಿ ನಿಗಧಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಳ್ಳತಕ್ಕದ್ದು. ಪ್ರತಿಯೊಂದು ತರಗತಿಯಲ್ಲಿ ನಿಗಧಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು. ಪದವಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರಬೇಕು. ಭಾಷಾ ವಿಷಯದಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಹಾಗೂ ಐಚ್ಚಿಕ ವಿಷಯಗಳಿಗೆ ಕನಿಷ್ಠ 15 ವಿದ್ಯಾರ್ಥಿಗಳ ಸಂಖ್ಯೆ ಇರಬೇಕು.

11. ನಿಗಧಿತ ಮೂಲಭೂತ ಸೌಲಭ್ಯಗಳಲ್ಲದೆ ಸ್ವಂತ ಕಟ್ಟಡ ಮತ್ತು ಆಟದ ಮೈದಾನಗಳನ್ನು ಹೊಂದಿರತಕ್ಕದ್ದು. ಇವುಗಳನ್ನು ಹೊಂದದೇ ಇರುವ ಸಂಸ್ಥೆಗಳ ಪ್ರಕರಣಗಳಲ್ಲಿ ಈ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶ ನೀಡಬಹುದು. ಹಾಗೂ ಮೂರು ವರ್ಷಗಳ ನಂತರವೂ ಈ ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

12. ಇನ್ನು ಮುಂದೆ ಭವಿಷ್ಯಾನುಸಾರ ಭರ್ತಿ ಮಾಡಬೇಕಾಗಿರುವ ಹುದ್ದೆಗಳಿಗೆ ಸಕ್ಷಮ ಅಧಿಕಾರಿಯಿಂದ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.

13. ನೇರ ನೇಮಕಾತಿ, ಬಡ್ತಿ ಮತ್ತು ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸುವ ಸರ್ಕಾರದ ನಿಯಮಗಳು/ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

14. ಸದರಿ ಕಾಲೇಜಿನಲ್ಲಿ ಇನ್ನು ಮುಂದೆ ನೌಕರರ ರಾಜೀನಾಮೆ, ನಿವೃತ್ತಿ ಮತ್ತು ನಿಧನದಿಂದ ತೆರವಾದ ಬೋಧಕ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಪೂರ್ವಾನುಮತಿ ಪಡೆಯುವುದು ಮತ್ತು ಸರ್ಕಾರದ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

15. ಅನುಮೋದಿತ ಹುದ್ದೆಗಳಿಗೆ ವೇತನಾನುದಾನ ಬಿಡುಗಡೆ ಮಾಡುವ ಮುನ್ನ ಸರ್ಕಾರದ ಮತ್ತು ಯುಜಿಸಿ ನಿಯಮಗಳ ಪ್ರಕಾರ ವಯೋಮಿತಿ : ವಿದ್ಯಾರ್ಹತೆ ಮತ್ತಿತರ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

16. ಸದರಿ ಕಾಲೇಜಿನ ಬೋಧಕೇತರ ಸಿಬ್ಬಂದಿಯ ವೇತನವನ್ನು ಇಲಾಖೆಗೆ ಒದಗಿಸಿದ ಯೋಜನಾ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು.

ಪ್ರತೀ ವರ್ಷವೂ ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವ ಕುರಿತು ಸಂಬಂಧಪಟ್ಟ ಜಂಟಿ ನಿರ್ದೇಶಕರು ದೃಢೀಕರಿಸಿದ ನಂತರವೇ ಆಯಾ ವರ್ಷದ ವೇತನಾನುದಾನ ಬಿಡುಗಡೆ ಮಾಡುವಂತೆ ಆಯುಕ್ತಾಲಯಕ್ಕೆ ಸೂಚಿಸಲಾಗಿದೆ. ನ್ಯೂನ್ಯತೆಗಳಾದಲ್ಲಿ ಸಂಬಂಧಪಟ್ಟ ಜಂಟಿ ನಿರ್ದೇಶಕರೇ ಜವಾಬ್ದಾರರಾಗಿರುತ್ತಾರೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ:957/ವೆಚ್ಚ–8/2011, ದಿನಾಂಕ:11–04–2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು.ಬಿ.ಉಳವಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಪಿ.ಆರ್. 1295

ಒಳಾಡಳಿತ ಸಚಿವಾಲಯ

ವಿಷಯ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸರ್ಕಾರಿ ಅಭಿಯೋಜಕರು / ಕಾನೂನು ಅಧಿಕಾರಿ (ಹಿರಿಯ) ವೃಂದದ ಅಧಿಕಾರಿಗಳ ಸ್ಥಾನಪನ್ನ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಕುರಿತು.

ಓದಲಾಗಿದೆ: ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ: ಡಿಪಿಎನ್ / ಸಿಶಾ–1 / 07 / 2010–11, ದಿನಾಂಕ 13/21.03.2012.

ಪ್ರಸ್ತಾವನೆ:–

ಮೇಲೆ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ 13/21.03.2012ರ ಪತ್ರದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಈ ಕೆಳಕಂಡ ಸರ್ಕಾರಿ ಅಭಿಯೋಜಕರು / ಕಾನೂನು ಅಧಿಕಾರಿ (ಹಿರಿಯ) ಗಳು ಸ್ಥಾನಪನ್ನ ಅವಧಿಯಲ್ಲಿ ಅವರಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾ ಇಲ್ಲದೇ ಇದ್ದು, ಇವರುಗಳ ಸೇವೆಯು ಸದರಿ ಅವಧಿಯಲ್ಲಿ ತೃಪ್ತಿಕರವಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 19(3)(ಸಿ) ಪ್ರಕಾರ ಸದರಿ ಅಧಿಕಾರಿಗಳ ಸ್ಥಾನಪನ್ನ ಅವಧಿ ತೃಪ್ತಿಕರವೆಂದು ಘೋಷಿಸುವಂತೆ ಕೋರಿರುತ್ತಾರೆ.

1)	ಆರ್.ಎನ್. ಚಾಟೆ	2)	ಎಸ್.ಎಸ್. ಪಾಟೀಲ್
3)	ಎಸ್.ಸಿ. ಅಗಸೀಮನಿ	4)	ಕೆ.ರಾಮಣ್ಣ
5)	ಕೆ.ಬಿ. ಕುಲಕರ್ಣಿ	6)	ಸುದೀಪ್ ಬಂಗೇರ
7)	ಎಫ್.ಯು. ನಾಯಕ್‌ವಾಡಿ	8)	ಎಂ.ಹೆಚ್. ಇಟಗಿ
9)	ಹೆಚ್.ಜಿ. ಬಣಕಾರ್	10)	ಕೆ.ಆರ್. ಎಕ್ಸಾಂಬಿ
11)	ಎಂ.ಕೆ.ರುದ್ರಪ್ಪ	12)	ಸಿ.ಎಸ್. ಪಾಟೀಲ್
13)	ವಿ.ಆರ್. ಹೊಸೂರ್	14)	ಪಿ.ಕೆ.ಮಲಪುರೆ
15)	ಎಸ್.ಎಸ್. ಅರಹುಣಸಿ	16)	ವಿ.ಆರ್. ಉಪಾಧ್ಯ
17)	ಎಸ್.ಬಿ. ಪೂಜಾರಿ	18)	ಕೆ.ಕೆ.ಸೀತಾರಾಮ
19)	ಎಂ.ವಿ. ಭಟಪನ್ನೆ	20)	ಎಸ್.ವಿ. ವಡವಡಗಿ
21)	ಎಸ್.ಕೆ. ಹುಚರೆಡ್ಡಿ	22)	ಎ.ಎಸ್. ಚಾಂದಕವಟೆ
23)	ಐ.ಬಿ. ಚೌದರಿ	24)	ಎಸ್.ಎನ್.ಭೂಸಣ್ಣವರ್
25)	ಬಸವನಗೌಡ	26)	ಬಿ.ಎಸ್.ಕೂಕನಗೌಡರ್

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 163 ಪಿಪಿಇ 2012, ಬೆಂಗಳೂರು, ದಿನಾಂಕ:28ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 19(3)(ಸಿ)ರ ಪ್ರಕಾರ ಈ ಕೆಳಕಂಡ ತ:ಖ್ತೆಯಲ್ಲಿ ಅಂಕಣ (2)ರಲ್ಲಿ ನಮೂದಿಸಿರುವ ಸರ್ಕಾರಿ ಅಭಿಯೋಜಕರು / ಕಾನೂನು ಅಧಿಕಾರಿ (ಹಿರಿಯ) ಅವರ ಹೆಸರಿನ ಮುಂದೆ ಅಂಕಣ (5)ರಲ್ಲಿ ನಮೂದಿಸಿರುವ ದಿನಾಂಕದಿಂದ ಸ್ಥಾನಪನ್ನ ಅವಧಿಯನ್ನು ತೃಪ್ತಿಕರವೆಂದು ಘೋಷಿಸಲಾಗಿದೆ.

ಕ್ರ. ಸಂ.	ಅಧಿಕಾರಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಈಗಿನ ಉದ್ಯೋಗ ವೃಂದಕ್ಕೆ ವರದಿ ಮಾಡಿಕೊಂಡ ದಿನಾಂಕ	ಸ್ಥಾನಪನ್ನ ಅವಧಿ ಮುಕ್ತಾಯಗೊಂಡ ದಿನಾಂಕ	ಸ್ಥಾನಪನ್ನ ಅವಧಿಯನ್ನು ತೃಪ್ತಿಕರವೆಂದು ಘೋಷಣೆ ಮಾಡಿದ ದಿನಾಂಕ
1	2	3	4	5
1)	ಆರ್.ಎನ್. ಚಾಟೆ	4.7.96 ಪೂರ್ವಾಹ್ನ	3.7.97	4.7.97
2)	ಎಸ್.ಎಸ್. ಪಾಟೀಲ್	17.8.98 ಪೂರ್ವಾಹ್ನ	16.8.99	17.8.99
3)	ಎಸ್.ಸಿ. ಅಗಸೀಮನಿ	3.3.99 ಪೂರ್ವಾಹ್ನ	2.3.2000	3.3.2000
4)	ಕೆ.ರಾಮಣ್ಣ	22.12.99 ಪೂರ್ವಾಹ್ನ	21.12.2000	22.12.2000
5)	ಕೆ.ಬಿ. ಕುಲಕರ್ಣಿ	13.1.2000 ಪೂರ್ವಾಹ್ನ	12.1.2001	13.1.2001
6)	ಸುದೀಪ್ ಬಂಗೇರ	3.3.2000 ಪೂರ್ವಾಹ್ನ	2.3.2001	3.3.2001
7)	ಎಫ್.ಯು. ನಾಯಕ್‌ವಾಡಿ	16.2.2000 ಪೂರ್ವಾಹ್ನ	15.2.2001	16.2.2001
8)	ಎಂ.ಹೆಚ್. ಇಟಗಿ	4.3.2002 ಪೂರ್ವಾಹ್ನ	3.3.2003	4.3.2003
9)	ಹೆಚ್.ಜಿ. ಬಣಕಾರ್	6.2.2002 ಪೂರ್ವಾಹ್ನ	5.2.2003	6.2.2003
10)	ಕೆ.ಆರ್. ಎಕ್ಸಾಂಬಿ	21.7.2003 ಪೂರ್ವಾಹ್ನ	20.7.2004	21.7.2004
11)	ಎಂ.ಕೆ.ರುದ್ರಪ್ಪ	17.7.2003 ಪೂರ್ವಾಹ್ನ	16.7.2004	17.7.2004
12)	ಸಿ.ಎಸ್. ಪಾಟೀಲ್	7.3.2005 ಪೂರ್ವಾಹ್ನ	6.3.2006	7.3.2006
13)	ವಿ.ಆರ್. ಹೊಸೂರ್	7.3.2005 ಪೂರ್ವಾಹ್ನ	6.3.2006	7.3.2006
14)	ಪಿ.ಕೆ.ಮಲಪುರೆ	8.4.2005 ಪೂರ್ವಾಹ್ನ	7.4.2006	8.4.2006
15)	ಎಸ್.ಎಸ್. ಅರಹುಣಸಿ	4.3.2005 ಪೂರ್ವಾಹ್ನ	3.3.2006	4.3.2006
16)	ವಿ.ಆರ್. ಉಪಾಧ್ಯ	11.4.2005 ಪೂರ್ವಾಹ್ನ	10.4.2006	11.4.2006
17)	ಎಸ್.ಬಿ. ಪೂಜಾರಿ	1.12.2004 ಪೂರ್ವಾಹ್ನ	30.11.2005	1.12.2005
18)	ಕೆ.ಕೆ.ಸೀತಾರಾಮ	1.12.2004 ಪೂರ್ವಾಹ್ನ	30.11.2005	1.12.2005
19)	ಎಂ.ವಿ. ಭಟಪನ್ನೆ	1.12.2004 ಪೂರ್ವಾಹ್ನ	30.11.2005	1.12.2005
20)	ಎಸ್.ವಿ. ವಡವಡಗಿ	1.12.2004 ಪೂರ್ವಾಹ್ನ	30.11.2005	1.12.2005
21)	ಎಸ್.ಕೆ. ಹುಚರೆಡ್ಡಿ	1.12.2004 ಪೂರ್ವಾಹ್ನ	30.11.2005	1.12.2005
22)	ಎ.ಎಸ್. ಚಾಂದಕವಟೆ	1.12.2004 ಪೂರ್ವಾಹ್ನ	30.11.2005	1.12.2005
23)	ಐ.ಬಿ. ಚೌದರಿ	1.12.2004 ಪೂರ್ವಾಹ್ನ	30.11.2005	1.12.2005
24)	ಎಸ್.ಎನ್.ಭೂಸಣ್ಣವರ್	1.12.2004 ಪೂರ್ವಾಹ್ನ	30.11.2005	1.12.2005
25)	ಬಸವನಗೌಡ	1.12.2004 ಪೂರ್ವಾಹ್ನ	30.11.2005	1.12.2005
26)	ಬಿ.ಎಸ್.ಕೂಕನಗೌಡರ್	1.12.2004 ಪೂರ್ವಾಹ್ನ	30.11.2005	1.12.2005

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
(ಪೊಲೀಸ್ ಸೇವೆಗಳು–'ಬಿ')

ಪಿ.ಆರ್. 1333

ಒಳಾಡಳಿತ ಸಚಿವಾಲಯ

ವಿಷಯ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ 61 ಶೀಘ್ರಲಿಪಿಗಾರರ ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ

ಓದಲಾಗಿದೆ:
1) ಸರ್ಕಾರದ ಆದೇಶ ಸಂ:ಲಾ 130 ಎಲ್ಎಜಿ 79, ದಿನಾಂಕ:07.10.1980,
2) ಸರ್ಕಾರದ ಆದೇಶ ಸಂ:ಲಾ 61 ಪಿಪಿಇ 1978, ದಿನಾಂಕ:21.10.78,
3) ಸರ್ಕಾರದ ಆದೇಶ ಸಂ:ಲಾ 100 ಪಿಪಿಇ 1981, ದಿನಾಂಕ:30.04.1981,
4) ಸರ್ಕಾರದ ಆದೇಶ ಸಂ:ಲಾ 64 ಪಿಪಿಇ 1984, ದಿನಾಂಕ:18.07.1984,
5) ಸರ್ಕಾರದ ಆದೇಶ ಸಂ:ಲಾ 73 ಪಿಪಿಇ 1984, ದಿನಾಂಕ:16.01.1985,
6) ಸರ್ಕಾರದ ಆದೇಶ ಸಂ:ಲಾ 126 ಎಲ್‌ಸಿಇ 1993, ದಿನಾಂಕ:05.12.1994,
7) ಸರ್ಕಾರದ ಆದೇಶ ಸಂ:ಲಾ 18 ಎಲ್‌ಸಿಇ 1999, ದಿನಾಂಕ:14.06.2000,
8) ಸರ್ಕಾರದ ಆದೇಶ ಸಂ:ಒಇ 428 ಪಿಪಿಇ 2010, ದಿನಾಂಕ:13.07.2011,
9) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ:ಡಿಪಿಎನ್/ಕೇಂಸ/ವಿವ/32/2011-12, ದಿನಾಂಕ:07.07.2011

ಪ್ರಸ್ತಾವನೆ:-

ಮೇಲೆ (1)ರಲ್ಲಿ ಓದಲಾದ ದಿನಾಂಕ:07.10.1980ರ ಸರ್ಕಾರದ ಆದೇಶದನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವಿವಿಧ ಕಛೇರಿಗಳಿಗೆ ಹೊಂದಿಕೊಂಡಂತೆ 33 ಶೀಘ್ರಲಿಪಿಗಾರರ, ಮೇಲೆ (2)ರಲ್ಲಿ ಓದಲಾದ ದಿನಾಂಕ:21.10.1978ರ ಸರ್ಕಾರದ ಆದೇಶದನ್ವಯ 01 ಶೀಘ್ರಲಿಪಿಗಾರರ, ಮೇಲೆ (3)ರಲ್ಲಿ ಓದಲಾದ ದಿನಾಂಕ:30.04.1981ರ ಸರ್ಕಾರದ ಆದೇಶದನ್ವಯ 21 ಶೀಘ್ರಲಿಪಿಗಾರರ, ಮೇಲೆ(4)ರಲ್ಲಿ ಓದಲಾದ ದಿನಾಂಕ:18.07.1984ರ ಸರ್ಕಾರದ ಆದೇಶದನ್ವಯ 01 ಶೀಘ್ರಲಿಪಿಗಾರರ, ಮೇಲೆ (5)ರಲ್ಲಿ ಓದಲಾದ ದಿನಾಂಕ:16.01.1985ರ ಸರ್ಕಾರಿ ಆದೇಶದನ್ವಯ 04 ಶೀಘ್ರಲಿಪಿಗಾರರ ಹಾಗೂ ಮೇಲೆ (6)ರಲ್ಲಿ ಓದಲಾದ ದಿನಾಂಕ: 05.12.1994 ಸರ್ಕಾರದ ಆದೇಶದನ್ವಯ ಸೃಜನೆಯಾಗಿ ಮೇಲೆ (7)ರಲ್ಲಿ ಓದಲಾದ 14.02.2000ರ ಸರ್ಕಾರಿ ಆದೇಶದನ್ವಯ ದಾವಣಗೆರೆಯ ಅಧಿಕ ಸರ್ಕಾರಿ ಅಭಿಯೋಜಕರ ಕಛೇರಿಗೆ ಸ್ಥಳಾಂತರಗೊಂಡ 01 ಶೀಘ್ರಲಿಪಿಗಾರರ ಒಟ್ಟು 61 ಶೀಘ್ರಲಿಪಿಗಾರರ ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸೃಜಿಸಲಾಗಿದೆ.

ಮೇಲೆ (8)ರಲ್ಲಿ ಓದಲಾದ ದಿನಾಂಕ:13.07.2011ರ ಸರ್ಕಾರದ ಆದೇಶದನ್ವಯ ಮೇಲೆ (1) ರಿಂದ (6)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜಿಸಿ, ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದಿರುವ 61 ಶೀಘ್ರಲಿಪಿಗಾರರ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ:31.03.2012ರ ಮುಂದುವರೆಸಲಾಗಿದೆ.

ಮೇಲೆ (9)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ದಿನಾಂಕ:07.07.2011ರ ಪತ್ರದಲ್ಲಿ ಇಲಾಖೆಯಲ್ಲಿನ 115 ತಾತ್ಕಾಲಿಕ ಹುದ್ದೆಗಳಲ್ಲಿ ಮೇಲೆ (1) ರಿಂದ (6)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜಿಸಿ, ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದು ಮೇಲೆ (8)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ದಿನಾಂಕ:31.03.2012ರ ಮುಂದುವರೆಸಲಾಗಿರುವ 61 ಶೀಘ್ರಲಿಪಿಗಾರರ ತಾತ್ಕಾಲಿಕ ಹುದ್ದೆಗಳು ಇಲಾಖೆಯ ದೈನಂದಿನ ಆಡಳಿತಾತ್ಮಕ ಕಾರ್ಯದ ದೃಷ್ಟಿಯಿಂದ ಅತಿ ಅವಶ್ಯಕ ಹುದ್ದೆಗಳಾಗಿದ್ದು, ಇವುಗಳನ್ನು ಇಲಾಖೆಯ ಹಿತದೃಷ್ಟಿಯಿಂದ ಖಾಯಂಗೊಳಿಸುವುದು ಅವಶ್ಯಕವಾಗಿದೆ. ಆದ್ದರಿಂದ, ಸದರಿ 61 ಶೀಘ್ರಲಿಪಿಗಾರರ ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 314 ಪಿಪಿಇ 2011, ಬೆಂಗಳೂರು, ದಿನಾಂಕ: 03ನೇ ಮೇ 2012.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಅಂಕಣ(2)ರಲ್ಲಿನ ಕಛೇರಿಗಳಿಗೆ ಹೊಂದಿಕೊಂಡಂತೆ ಅಂಕಣ (3)ರ ಸರ್ಕಾರಿ ಆದೇಶಗಳನ್ವಯ ಸೃಜನೆಯಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ 61 ಶೀಘ್ರಲಿಪಿಗಾರರ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸಿದೆ.

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ '2014-ನ್ಯಾಯಾಪರಿಪಾಲನೆ -00-114-ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು -0-02 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು' ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 171 ವೆಚ್ಚ-11/2012, ದಿನಾಂಕ:20.04.2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ.ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು – ಬಿ)

ಸರ್ಕಾರಿ ಆದೇಶ ಸಂ:ಒಇ 314 ಪಿಪಿಇ 2011, ದಿನಾಂಕ: 03ನೇ ಮೇ 2012

ಅನುಬಂಧ

ಕ್ರ. ಸಂ	ಹುದ್ದೆಯ ಕಛೇರಿ	ಹುದ್ದೆಯು ಮಂಜೂರಾದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ
(1)	(2)	(3)
1	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
2	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
3	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಬೆಂಗಳೂರು ನಗರ	ಲಾ 130 ಎಲ್ಎಜಿ 79, ದಿನಾಂಕ:07.10.1980.
4	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಬೆಂಗಳೂರು ನಗರ	ಲಾ 130 ಎಲ್ಎಜಿ 79, ದಿನಾಂಕ:07.10.1980.
5	ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ನಗರ	ಲಾ 130 ಎಲ್ಎಜಿ 79, ದಿನಾಂಕ:07.10.1980.
6	ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ನಗರ	ಲಾ 130 ಎಲ್ಎಜಿ 79, ದಿನಾಂಕ:07.10.1980.
7	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಬೆಂಗಳೂರು ವಲಯ,	ಲಾ 130 ಎಲ್ಎಜಿ 79, ದಿನಾಂಕ:07.10.1980.
8	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಬೆಂಗಳೂರು ವಲಯ	ಲಾ 130 ಎಲ್ಎಜಿ 79, ದಿನಾಂಕ:07.10.1980.
9	ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ಗ್ರಾಮಾಂತರ	ಲಾ 130 ಎಲ್ಎಜಿ 79, ದಿನಾಂಕ:07.10.1980.
10	ಸರ್ಕಾರಿ ಅಭಿಯೋಜಕರ ಕಛೇರಿ, ತುಮಕೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
11	ಸರ್ಕಾರಿ ಅಭಿಯೋಜಕರ ಕಛೇರಿ, ಕೋಲಾರ	ಲಾ 130 ಎಲ್ಎಜಿ 79, ದಿನಾಂಕ:07.10.1980.
12	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಮೈಸೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
13	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಮೈಸೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
14	ಸರ್ಕಾರಿ ಅಭಿಯೋಜಕರ ಕಛೇರಿ, ಮೈಸೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
15	ಸರ್ಕಾರಿ ಅಭಿಯೋಜಕರ ಕಛೇರಿ, ಮಂಡ್ಯ	ಲಾ 130 ಎಲ್ಎಜಿ 79, ದಿನಾಂಕ:07.10.1980.
16	ಸರ್ಕಾರಿ ಅಭಿಯೋಜಕರ ಕಛೇರಿ, ಹಾಸನ	ಲಾ 130 ಎಲ್ಎಜಿ 79, ದಿನಾಂಕ:07.10.1980.
17	ಸರ್ಕಾರಿ ಅಭಿಯೋಜಕರ ಕಛೇರಿ, ಮಡಿಕೇರಿ	ಲಾ 130 ಎಲ್ಎಜಿ 79, ದಿನಾಂಕ:07.10.1980.
18	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಬೆಳಗಾಂ	ಲಾ 130 ಎಲ್ಎಜಿ 79, ದಿನಾಂಕ:07.10.1980.
19	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಬೆಳಗಾಂ	ಲಾ 130 ಎಲ್ಎಜಿ 79, ದಿನಾಂಕ:07.10.1980.
20	ಸರ್ಕಾರಿ ಅಭಿಯೋಜಕರ ಕಛೇರಿ, ಬೆಳಗಾಂ	ಲಾ 130 ಎಲ್ಎಜಿ 79, ದಿನಾಂಕ:07.10.1980.
21	ಸರ್ಕಾರಿ ಅಭಿಯೋಜಕರ ಕಛೇರಿ, ಧಾರವಾಡ	ಲಾ 130 ಎಲ್ಎಜಿ 79, ದಿನಾಂಕ:07.10.1980.
22	ಸರ್ಕಾರಿ ಅಭಿಯೋಜಕರ ಕಛೇರಿ, ಬಿಜಾಪುರ	ಲಾ 130 ಎಲ್ಎಜಿ 79, ದಿನಾಂಕ:07.10.1980.
23	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಗುಲ್ಬರ್ಗಾ	ಲಾ 130 ಎಲ್ಎಜಿ 79, ದಿನಾಂಕ:07.10.1980.

ಕ್ರ. ಸಂ	ಹುದ್ದೆಯ ಕಛೇರಿ	ಹುದ್ದೆಯು ಮಂಜೂರಾದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ
(1)	(2)	(3)
24	ಅಭಿಯೋಗ ಉಪ ನಿರ್ದೇಶಕರ ಕಛೇರಿ, ಗುಲ್ಬರ್ಗಾ	ಲಾ 130 ಎಲ್ಎಜಿ 79, ದಿನಾಂಕ:07.10.1980.
25	ಸರ್ಕಾರಿ ಅಭಿಯೋಜಕರ ಕಛೇರಿ, ಗುಲ್ಬರ್ಗಾ	ಲಾ 130 ಎಲ್ಎಜಿ 79, ದಿನಾಂಕ:07.10.1980.
26	ಸರ್ಕಾರಿ ಅಭಿಯೋಜಕರ ಕಛೇರಿ, ಬೀದರ್	ಲಾ 130 ಎಲ್ಎಜಿ 79, ದಿನಾಂಕ:07.10.1980.
27	ಸರ್ಕಾರಿ ಅಭಿಯೋಜಕರ ಕಛೇರಿ, ರಾಯಚೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
28	ಸರ್ಕಾರಿ ಅಭಿಯೋಜಕರ ಕಛೇರಿ, ಚಿತ್ರದುರ್ಗ	ಲಾ 130 ಎಲ್ಎಜಿ 79, ದಿನಾಂಕ:07.10.1980.
29	ಸರ್ಕಾರಿ ಅಭಿಯೋಜಕರ ಕಛೇರಿ, ಶಿವಮೊಗ್ಗ	ಲಾ 130 ಎಲ್ಎಜಿ 79, ದಿನಾಂಕ:07.10.1980.
30	ಸರ್ಕಾರಿ ಅಭಿಯೋಜಕರ ಕಛೇರಿ, ಬಳ್ಳಾರಿ	ಲಾ 130 ಎಲ್ಎಜಿ 79, ದಿನಾಂಕ:07.10.1980.
31	ಸರ್ಕಾರಿ ಅಭಿಯೋಜಕರ ಕಛೇರಿ, ಮಂಗಳೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
32	ಸರ್ಕಾರಿ ಅಭಿಯೋಜಕರ ಕಛೇರಿ, ಕಾರವಾರ	ಲಾ 130 ಎಲ್ಎಜಿ 79, ದಿನಾಂಕ:07.10.1980.
33	ಸರ್ಕಾರಿ ಅಭಿಯೋಜಕರ ಕಛೇರಿ, ಚಿಕ್ಕಮಗಳೂರು	ಲಾ 130 ಎಲ್ಎಜಿ 79, ದಿನಾಂಕ:07.10.1980.
34	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಬೆಂಗಳೂರು ನಗರ	ಲಾ 100 ಪಿಪಿಇ 1981, ದಿನಾಂಕ:30.04.1981
35	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ	ಲಾ 100 ಪಿಪಿಇ 1981, ದಿನಾಂಕ:30.04.1981
36	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ತುಮಕೂರು	ಲಾ 100 ಪಿಪಿಇ 1981, ದಿನಾಂಕ:30.04.1981
37	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಕೋಲಾರ	ಲಾ 100 ಪಿಪಿಇ 1981, ದಿನಾಂಕ:30.04.1981
38	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಕೆ.ಜಿ.ಎಫ್	ಲಾ 100 ಪಿಪಿಇ 1981, ದಿನಾಂಕ:30.04.1981
39	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಮೈಸೂರು	ಲಾ 100 ಪಿಪಿಇ 1981, ದಿನಾಂಕ:30.04.1981
40	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಮಂಡ್ಯ	ಲಾ 100 ಪಿಪಿಇ 1981, ದಿನಾಂಕ:30.04.1981
41	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಹಾಸನ	ಲಾ 100 ಪಿಪಿಇ 1981, ದಿನಾಂಕ:30.04.1981
42	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಬಳ್ಳಾರಿ	ಲಾ 100 ಪಿಪಿಇ 1981, ದಿನಾಂಕ:30.04.1981
43	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಧಾರವಾಡ	ಲಾ 100 ಪಿಪಿಇ 1981, ದಿನಾಂಕ:30.04.1981
44	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಬಿಜಾಪುರ	ಲಾ 100 ಪಿಪಿಇ 1981, ದಿನಾಂಕ:30.04.1981
45	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಮಡಿಕೇರಿ	ಲಾ 100 ಪಿಪಿಇ 1981, ದಿನಾಂಕ:30.04.1981
46	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಗುಲ್ಬರ್ಗಾ	ಲಾ 100 ಪಿಪಿಇ 1981, ದಿನಾಂಕ:30.04.1981
47	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಬೀದರ್	ಲಾ 100 ಪಿಪಿಇ 1981, ದಿನಾಂಕ:30.04.1981
48	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ರಾಯಚೂರು	ಲಾ 100 ಪಿಪಿಇ 1981, ದಿನಾಂಕ:30.04.1981
49	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಚಿತ್ರದುರ್ಗ	ಲಾ 100 ಪಿಪಿಇ 1981, ದಿನಾಂಕ:30.04.1981
50	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಶಿವಮೊಗ್ಗ	ಲಾ 100 ಪಿಪಿಇ 1981, ದಿನಾಂಕ:30.04.1981
51	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ದಕ್ಷಿಣ ಕನ್ನಡ	ಲಾ 100 ಪಿಪಿಇ 1981, ದಿನಾಂಕ:30.04.1981
52	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಕಾರವಾರ	ಲಾ 100 ಪಿಪಿಇ 1981, ದಿನಾಂಕ:30.04.1981
53	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಚಿಕ್ಕಮಗಳೂರು	ಲಾ 100 ಪಿಪಿಇ 1981, ದಿನಾಂಕ:30.04.1981
54	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಬೆಳಗಾಂ	ಲಾ 100 ಪಿಪಿಇ 1981, ದಿನಾಂಕ:30.04.1981
55	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 61 ಪಿಪಿಇ 78, 21.10.78
56	5ನೇ ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ನಗರ	ಲಾ 64 ಪಿಪಿಇ 84, ದಿನಾಂಕ:18.07.1984

ಕ್ರ. ಸಂ	ಹುದ್ದೆಯ ಕಛೇರಿ	ಹುದ್ದೆಯು ಮಂಜೂರಾದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ
(1)	(2)	(3)
57	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 73 ಪಿಪಿಇ 1984, ದಿನಾಂಕ:16.01.1985
58	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 73 ಪಿಪಿಇ 1984, ದಿನಾಂಕ:16.01.1985
59	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 73 ಪಿಪಿಇ 1984, ದಿನಾಂಕ:16.01.1985
60	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 73 ಪಿಪಿಇ 1984, ದಿನಾಂಕ:16.01.1985
61	ಅಧಿಕ ಸರ್ಕಾರಿ ಅಭಿಯೋಜಕರ ಕಛೇರಿ,ದಾವಣಗೆರೆ	ಲಾ 126 ಎಲ್‌ಸಿಇ 1993, ದಿನಾಂಕ:05.12.1994 ಸ್ಥಳಾಂತರ : ಲಾ 18 ಎಲ್‌ಸಿಇ 99, 14.06.2000

ಹೆಚ್.ಕೆ.ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು – ಬಿ)

ಪಿ.ಆರ್. 1334

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಎಂ.ನರಸಪ್ಪ, ನಿವೃತ್ತ ಸರ್ಕಾರಿ ಅಭಿಯೋಜಕರು, ರಾಯಚೂರು, ಇವರ ವಿರುದ್ಧ ಇಲಾಖಾ ವಿಚಾರಣೆ ಬಗ್ಗೆ.

ಓದಲಾಗಿದೆ:

1. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂ:ಡಿಪಿಎನ್:ಕೆಡಿಜಿ:414:2003, ದಿನಾಂಕ: 03.03.2004
2. ಶ್ರೀ ಎಂ.ನರಸಪ್ಪ, ಆಗಿನ ಸರ್ಕಾರಿ ಅಭಿಯೋಜಕರು, ಹಾಸನ ಇವರಿಗೆ ಜಾರಿ ಮಾಡಲಾದ ಕಾರಣ ಕೇಳುವ ತಿಳುವಳಿಕೆ ಪತ್ರದ ಸಂ:ಒಇ 946 ಪಿಪಿಇ 2005, ದಿನಾಂಕ:07.11.2006,
3. ಶ್ರೀ ಎಂ.ನರಸಪ್ಪ, ಆಗಿನ ಸರ್ಕಾರಿ ಅಭಿಯೋಜಕರು, ಹಾಸನ ಇವರ ಲಿಖಿತ ಹೇಳಿಕೆಯ ದಿನಾಂಕ:11.06.2007
4. ಸರ್ಕಾರದ ಆದೇಶ ಸಂ:ಒಇ 946 ಪಿಪಿಇ 2005, ದಿನಾಂಕ:03.07.2010.
5. ಸರ್ಕಾರದ ಆದೇಶ ಸಂ:ಒಇ 946 ಪಿಪಿಇ 2005, ದಿನಾಂಕ:28.10.2011.
6. ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ:15.02.2012

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:03.03.2004ರ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಅವರ ಪತ್ರದಲ್ಲಿ, ಶ್ರೀ ಎಂ.ನರಸಪ್ಪ, ಪ್ರಸ್ತುತ ನಿವೃತ್ತ ಸರ್ಕಾರಿ ಅಭಿಯೋಜಕರವರು ಮಡಿಕೇರಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸದರಿ ನ್ಯಾಯಾಲಯದ ಎಸ್.ಸಿ.ನಂ:08/98ರ ಪ್ರಕರಣದ ವಿಚಾರಣೆ ನಡೆಸುವ ಸಂದರ್ಭದಲ್ಲಿ ಸದರಿ ಪ್ರಕರಣದ ಪ್ರಮುಖ ಮತ್ತು ಸ್ಥಳದಲ್ಲಿದ್ದ ಸಾಕ್ಷಿಗಳಾದ ಚಾ.ಸಾ.–2 ಮತ್ತು ಚಾ.ಸಾ.–3ನ್ನು ವಿಚಾರಣೆ ಮಾಡದೇ ಕೈಬಿಟ್ಟು ಕರ್ತವ್ಯ ನಿರ್ಲಕ್ಷ್ಯ ತೋರಿಸಿದ್ದು ಇವರ ವಿರುದ್ದ ನಿಯಮಾವಳಿಯನ್ವಯ ಕ್ರಮಕ್ಕೆ ಸರ್ಕಾರವನ್ನು ಕೋರಿರುತ್ತಾರೆ.

ಈ ಸಂಬಂಧ ಮೇಲೆ (2)ರಲ್ಲಿ ಓದಲಾದ ದಿನಾಂಕ:07.11.2006ರಂದು ಕಾರಣ ಕೇಳುವ ತಿಳುವಳಿಕೆ ಪತ್ರವನ್ನು ಮತ್ತು ಅನುಬಂಧ–1 ರಿಂದ 4ನ್ನು ಆರೋಪಿತ ಅಧಿಕಾರಿಯಾದ ಎಂ.ನರಸಪ್ಪರವರಿಗೆ ಜಾರಿ ಮಾಡಿದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ:11.06.2007ರ ಪತ್ರದಲ್ಲಿ ಶ್ರೀ ಎಂ.ನರಸಪ್ಪರವರು ಲಿಖಿತ ಹೇಳಿಕೆಯನ್ನು ನೀಡಿ– ಅವರ ವಿರುದ್ದ ಹೊರಿಸಲಾದ ಆರೋಪಗಳನ್ನು ನಿರಾಕರಿಸಿ, ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ದುರ್ನಡತೆ, ನಿರ್ಲಕ್ಷ್ಯತನದ ಲೋಪದೋಷ ಎಸಗಿರುವುದಿಲ್ಲವಾಗಿದ್ದು, ಈ ಬಗ್ಗೆ ಶಿಸ್ತಿನ ಕ್ರಮ ಪ್ರಾರಂಭಿಸುವುದನ್ನು ಕೈ ಬಿಡಬೇಕೆಂದು ಕೋರಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ:03.07.2010ರ ಸರ್ಕಾರಿ ಆದೇಶದಲ್ಲಿ, ಶ್ರೀ ಎಂ.ನರಸಪ್ಪರವರ ಲಿಖಿತ ಹೇಳಿಕೆಯನ್ನು ಪರಿಗಣಿಸದೆ, ಅವರ ಮೇಲೆ ಹೊರಿಸಲಾಗಿರುವ ಆರೋಪಗಳ ಸತ್ಯಾಸತ್ಯತೆಯನ್ನು ವಿಚಾರಣೆ ಮೂಲಕ ತಿಳಿಯುವ ದೃಷ್ಠಿಯಿಂದ ಹಾಗೂ ಕರ್ನಾಟಕ ನಾಗರೀಕಾ ಸೇವಾ(ನಡತೆ) ನಿಯಮಾವಳಿ, 1966ರ ನಿಯಮ 3(i) (ii) ಮತ್ತು (iii) ನ್ನು ಉಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಿಸಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ:28.10.2011ರ ಸರ್ಕಾರಿ ಆದೇಶದಲ್ಲಿ ಮೇಲೆ (4)ರಲ್ಲಿ ಓದಲಾದ ಸರ್ಕಾರಿ ಆದೇಶವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ರದ್ದುಪಡಿಸಿ, ಕರ್ನಾಟಕ ಸರ್ಕಾರಿ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 11(2)ರಡಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಬಿ.ರಂಗಸ್ವಾಮಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ:768, 9ನೇ ಮೈನ್, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಸರ್ಕಾರದ ಪರವಾಗಿ ಪ್ರಕರಣವನ್ನು ಪ್ರತಿನಿಧಿಸಿ ದಾಖಲೆಗಳನ್ನು, ವಾದವನ್ನು ವಿಚಾರಣಾ ಪ್ರಾಧಿಕಾರಿಯವರ ಮುಂದೆ ಮಂಡಿಸಲು ಮೇಲ್ಕಂಡ ನಿಯಮಾವಳಿಯ ನಿಯಮ 11(5)(ಸಿ)ರ ಅನ್ವಯ ಶ್ರೀ ಬಿ.ರಂಗಸ್ವಾಮಿ, ಸಹಾಯಕ ಅಭಿಯೋಗ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಮೇಲೆ (6)ರಲ್ಲಿ ಓದಲಾದ ದಿನಾಂಕ:15.02.2012ರ ಇಲಾಖಾ ವಿಚಾರಣಾ ವರದಿಯಲ್ಲಿ ವಿಚಾರಣಾಧಿಕಾರಿರವರು ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಎಂ.ನರಸಪ್ಪ ಮಡಿಕೇರಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ವಿಶೇಷ ಮೊಕದ್ದಮೆ ಸಂ:08/98ರಲ್ಲಿ ಚಾ.ಸ.-2 ಮತ್ತು ಚಾ.ಸ.-3ರವರನ್ನು ವಿಚಾರಣೆ ಮಾಡದೇ ಕೈಬಿಟ್ಟು ಕರ್ನಾಟಕ ನಾಗರೀಕಾ ಸೇವಾ(ನಡತೆ) ನಿಯಮಾವಳಿ, 1966ರ ನಿಯಮ 3(i) (ii) (iii) ರ ದುರ್ನಡತೆ ಎಸಗಿರುವ ಆರೋಪದ ಬಗ್ಗೆ ನಿರ್ಣಯದ ಉತ್ತರವಾಗಿ **'ಇಲ್ಲ'** ಎಂದು ನೀಡಿರುತ್ತಾರೆ. ಕಾರಣಗಳನ್ನು ನೀಡಿ ಆರೋಪಿತ ಅಧಿಕಾರಿಯಾದ ಶ್ರೀ ಎಂ.ನರಸಪ್ಪರವರ ಮೇಲೆ ಹೊರಿಸಲಾಗಿರುವ ಆರೋಪವನ್ನು ಸಾಬೀತು ಪಡಿಸಲು ಶಿಸ್ತು ಪ್ರಾಧಿಕಾರವು ವಿಫಲವಾಗಿದೆ. ಆದ್ದರಿಂದ, ಆರೋಪವನ್ನು **'ನ'** ಕಾರಾತ್ಮಕ ಎಂದು ನಿರ್ಣಯಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 946 ಪಿಪಿಇ 2005, ಬೆಂಗಳೂರು, ದಿನಾಂಕ: 03ನೇ ಮೇ 2012

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಎಂ.ನರಸಪ್ಪ, ಪ್ರಸ್ತುತ ನಿವೃತ್ತ ಸರ್ಕಾರಿ ಅಭಿಯೋಜಕರವರು ಮಡಿಕೇರಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸದರಿ ನ್ಯಾಯಾಲಯದ ಎಸ್.ಸಿ.ನಂ:08/98ರ ಪ್ರಕರಣದಲ್ಲಿ ಎಸಗಿರುವ ಕರ್ತವ್ಯ ನಿರ್ಲಕ್ಷ ಆರೋಪ ಸಂಬಂಧ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 11ರ (2)ರಡಿ ಇಲಾಖಾ ವಿಚಾರಣೆ ನಡೆಸಿ, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಗಳು, 1966ರ ನಿಯಮ3ರ ಉಪನಿಯಮ (i) , (ii) ಮತ್ತು (iii) ವನ್ನು ಸ್ಪಷ್ಟವಾಗಿ ಉಲಂಘಿಸಿರುತ್ತಾರೆ ಎಂಬ ಬಗ್ಗೆ ಇಲಾಖಾ ವಿಚಾರಣಾ ವರದಿಯ ನಿರ್ಣಯದ ಮೇರೆಗೆ ಆರೋಪಗಳಿಂದ ಸಂಪೂರ್ಣವಾಗಿ ಮುಕ್ತಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ.ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು – ಬಿ)

ಪಿ.ಆರ್. 1336

PLANNING, PROGRAMME MONITORING AND STATISTICS SECRETARIAT

CIRCULAR

No:PD 37 SMC 2012, Bangalore, Dt:02.05.2012

Sub : Correction of an entry in the Register of Births and Deaths.

Ref : Discussion which was held on 16.6.2011 of Legislative Council Statutory Committee.

In the State, as per section 7(2) of Registration of Births and Deaths Act, 1969, every Registrar shall take steps to ascertain himself carefully of every Birth and every Death which takes place in his jurisdiction and to confirm himself whether the forms have been filled correctly and accurately and register the particulars without giving further scope for errors. While entering any entry in the register of Birth and Death, if (1) clerical or formal error made (2) error in matter and (3) erroneous in form or improper entry is found, under the provision of section 15 of the RBD Act, 1969 and corresponding Rule 11 of Karnataka Registration of Births and Deaths Rule, 1999 enquiry should be conducted and if error in entry is found, correction of entry can be made in the birth / death register.

The Extract of Section 15 of RBD Act, 1969 is as follows:

15. Correction or cancellation of entry in the register of births and deaths:

If it is proved to the satisfaction of the Registrar that any entry of a birth or death in any register kept by him under this Act is erroneous in form or substance, or has been fraudulently or improperly made, he may, subject to such rules as may be made by the State Government with respect to the conditions on which and the circumstances in which such entries may be corrected or cancelled, correct the error or cancel the entry by suitable entry in the margin, without any alteration of the original entry, and shall sign the marginal entry and add thereto the date of the correction or cancellation.

The Extract of Rule 11 of KRBD Rules, 1999 is as follows:

11. Correction or cancellation of entry in the register of births and deaths.

1) If it is reported to the registrar that a clerical or formal error has been made in the register or if such error is otherwise noticed by him and if the register is in his possession, the Registrar shall enquire into the matter and if he is satisfied that any such error has been made, he shall correct the error (by correcting or canceling the entry) as provided in section 15 and shall send an extract of the entry showing the error and how it has been corrected to the State Government or the Tahsildar or Commissioner/Chief Officer of the Municipal Corporation / Municipal Council,as the case may be.

2) In the case referred to in sub rule (1) if the register is not in his possession the Registrar shall make a report to the State Government or the Tahsildar or Commissioner / Chief Officer of the Municipal Corporation / Municipal Council, as the case may be, and call for the relevant register and after enquiring into the matter, if he is satisfied that any such error has been made, make the necessary correction.

3) Any such correction as mentioned in sub-rule (2) shall be countersigned by the State Government or the Tahsildar or Commissioner / Chief Officer of the Municipal Corporation / Municipal Council, as the case may be when the register is received from the Registrar.

4) If any person asserts that any entry in the register of births and deaths is erroneous in substance, the Registrar may correct the entry in the manner prescribed under section 15 upon production by that person a declaration setting forth nature of the error and true facts of the case made by two credible persons having knowledge of the facts of the case.

5) Notwithstanding anything contained in sub rule (1) or sub-rule (4), the Registrar shall report of any correction of the kind referred to therein giving necessary details to the State Government or the Tahsildar or Commissioner/ Chief Officer of the Municipal Corporation / Municipal Council, as the case may be.

6) If it is proved to the satisfaction of the Registrar that any entry in the register of births and deaths has been fraudulently or improperly made, he shall make a report giving necessary details to the officer authorised by the Chief Registrar by General or special order in this behalf under section 25 and on hearing from him take necessary action in the matter.

7) In every case in which an entry is corrected or cancelled under this rule, intimation thereof shall be sent to the permanent address of the person who has given information under section 8 or section 9.

Although, above legal provision are clearly mentioned, it came to the notice of the Government that Registrars of some District / Taluk / Urban areas are unnecessarily directing the public to obtain Court Order, if public appeal for correction of each event. In such cases it leads unnecessary financial burden and problem to the public. This matter has been discussed in the Legislative Council Statutory Committee meeting which was held on 16.6.2011 and the Committee members have expressed their dissatisfaction and raised objection regarding improper implementation of legal aspects in this regard.

Therefore, it is hereby instructed that, if pubic applies for any correction in the birth and death register or for any other appeal, Registrars should be thorough with regard to the provision made in the legal aspects and necessary action should be taken in implementation of Birth and Death Rules, without making the public to suffer, unnecessarily.

Sanjiv Kumar,

Principal Secretary to Government,

Planning, Programme Monitoring and Statistics Department

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ಸುತ್ತೋಲೆ

ಪಿಡಿ 37 ಎಸ್‌ಎಮ್‌ಸಿ 2012, ಬೆಂಗಳೂರು, ದಿನಾಂಕ:02.05.2012

ವಿಷಯ : ಜನನ, ಮರಣ ನೋಂದಣಿಯ ದಾಖಲೆಗಳಲ್ಲಿ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ : ದಿನಾಂಕ:16.6.2011 ರಂದು ನಡೆದ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿ ಸಭೆಯ ಚರ್ಚೆ.

ರಾಜ್ಯದಲ್ಲಿ ಜನನ, ಮರಣ ನೋಂದಣಿ ಅಧಿನಿಯಮ, 1969 ರ ಸೆಕ್ಷನ್ 7(2) ರ ಮೇರೆಗೆ ಪ್ರತಿಯೊಬ್ಬ ರಿಜಿಸ್ಟ್ರಾರ್‌ರನು ತನ್ನ ಕಾರ್ಯವ್ಯಾಪ್ತಿಯಲ್ಲಿ ಸಂಭವಿಸುವ ಪ್ರತಿಯೊಂದು ಜನನದ ಅಥವಾ ಮರಣದ ವಿಚಾರವನ್ನು ಎಚ್ಚರಿಕೆಯಿಂದ ತಿಳಿದುಕೊಂಡು ವರದಿ ನಮೂನೆಗಳು ಪರಿಪೂರ್ಣವಾಗಿ ಮತ್ತು ಕರಾರುವಕ್ಕಾಗಿ ಭರ್ತಿಯಾಗಿದೆಯೇ ಎಂದು ಖಚಿತಪಡಿಸಿಕೊಂಡು ಯಾವುದೇ ತಪ್ಪಿಗೆ ಆಸ್ಪದವಿಲ್ಲದಂತೆ ನೋಂದಣಿ ಮಾಡಿಕೊಳ್ಳತಕ್ಕದ್ದು. ಒಂದು ವೇಳೆ, ಜನನ ಮತ್ತು ಮರಣದ ರಿಜಿಸ್ಟರಿನ ಯಾವುದೇ ನಮೂದಿನಲ್ಲಿ ನಮೂದು ಮಾಡುವಾಗ (1) ಬರವಣಿಗೆ ಅಥವಾ ಸ್ವರೂಪದಲ್ಲಿ ತಪ್ಪು (2) ವಿಷಯದಲ್ಲಿ ತಪ್ಪು ಮತ್ತು (3) ದೋಷಪೂರಿತ ಅಥವಾ ಅಸಮರ್ಪಕ ನಮೂದು ಆಗಿರುವುದು ತಿಳಿದುಬಂದರೆ, ಈ ವಿಷಯದ ಬಗ್ಗೆ ತನಿಖೆ ಮಾಡಿ ತಪ್ಪು ನಡೆದಿರುವುದು ಖಚಿತವಾದಲ್ಲಿ ಜನನ, ಮರಣ ನೋಂದಣಿ ಅಧಿನಿಯಮ, 1969 ರ ಸೆಕ್ಷನ್ 15 ಹಾಗೂ ಕರ್ನಾಟಕ ಜನನ, ಮರಣ ನೋಂದಣಿ ನಿಯಮಗಳು, 1999 ರ ನಿಯಮ 11 ರ ಮೇರೆಗೆ ತಪ್ಪುಗಳನ್ನು ತಿದ್ದುಪಡಿ ಮಾಡಲು ಅವಕಾಶವಿದೆ.

ಜನನ, ಮರಣ ನೋಂದಣಿ ಅಧಿನಿಯಮ, 1969 ರ ಸೆಕ್ಷನ್ 15 ರ ಉದ್ಧೃತ ಭಾಗ ಈ ಕೆಳಗಿನಂತಿದೆ:

" <u>ಸೆಕ್ಷನ್ 15: ಜನನ, ಮರಣಗಳ ರಿಜಿಸ್ಟರ್‌ನಲ್ಲಿ ದಾಖಲೆಯ ತಿದ್ದುಪಡಿ ಅಥವಾ ರದ್ದಿಯಾತಿ:</u>

ಈ ಅಧಿನಿಯಮದ ಮೇರೆಗೆ ತಾನು ಇಟ್ಟಿರುವ ಯಾವುದೇ ರಿಜಿಸ್ಟರಿನಲ್ಲಿ ಒಂದು ಜನನದ ಇಲ್ಲವೇ ಮರಣದ ಯಾವುದೇ ನಮೂದು ರೂಪದಲ್ಲಾಗಲಿ, ವಿಷಯದಲ್ಲಾಗಲಿ ತಪ್ಪಾಗಿದೆಯೆಂದು ರುಜುವಾತಾದ ಪಕ್ಷದಲ್ಲಿ ಅಂಥ ನಮೂದುಗಳನ್ನು ಯಾವ ಷರತ್ತುಗಳ ಮೇಲೆ ಮತ್ತು ಯಾವ ಸನ್ನಿವೇಶಗಳಲ್ಲಿ ತಿದ್ದಬಹುದೆಂಬ ಅಥವಾ ರದ್ದುಪಡಿಸಬಹುದೆಂಬ ವಿಚಾರದಲ್ಲಿ ರಾಜ್ಯ ಸರ್ಕಾರದವರು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಮೂಲ ನಮೂದನ್ನು ಯಾವ ರೀತಿಯಲ್ಲೂ ಬದಲಾವಣೆ ಮಾಡದೆ, ಅಂಚಿನಲ್ಲಿ ಸೂಕ್ತ ಷರಾ ಬರೆದು ಆ ತಪ್ಪನ್ನು ತಿದ್ದಬಹುದು ಅಥವಾ ನಮೂದನ್ನು ರದ್ದುಪಡಿಸಬಹುದು ಮತ್ತು ಅಂಚಿನಲ್ಲಿ ಬರೆದ ಷರಾಕ್ಕೆ ರುಜು ಹಾಕಿ ಆ ತಿದ್ದುಪಡಿಯ ಇಲ್ಲವೇ ರದ್ದಿಯಾತಿಯ ದಿನಾಂಕವನ್ನು ಬರೆಯತಕ್ಕದ್ದು".

ಕರ್ನಾಟಕ ಜನನ, ಮರಣ ನೋಂದಣಿ ನಿಯಮಗಳು, 1999 ರ ನಿಯಮ 11 ರ ಉದ್ಧೃತ ಭಾಗ ಈ ಕೆಳಗಿನಂತಿದೆ:

1. ವಹಿಯಲ್ಲಿ ಬರವಣಿಗೆಯ ಅಥವಾ ಔಪಚಾರಿಕ ತಪ್ಪನ್ನು ಮಾಡಲಾಗಿದೆ ಎಂದು ನೋಂದಣಿದಾರರಿಗೆ ವರದಿ ಮಾಡಲ್ಪಟ್ಟರೆ ಅಥವಾ ಅಂತಹ ತಪ್ಪನ್ನು ತಾವು ಬೇರೆ ರೀತಿಯಲ್ಲಿ ಗಮನಿಸಿದ್ದರೆ ಮತ್ತು ವಹಿಯು ಅವರ ಸ್ವಾಧೀನದಲ್ಲಿದ್ದರೆ, ನೋಂದಣಿದಾರರು ವಿಷಯದ ಬಗ್ಗೆ ವಿಚಾರಿಸತಕ್ಕದ್ದು ಮತ್ತು ಅಂತಹ ಯಾವುದೇ ತಪ್ಪು ಮಾಡಲ್ಪಟ್ಟಿದೆಯೆಂದು ಮನವರಿಕೆಯಾದರೆ, 15ನೆಯ ಪ್ರಕರಣದಲ್ಲಿ ಉಪಬಂಧಿಸಿರುವ ರೀತ್ಯಾ (ನಮೂದನ್ನು ತಿದ್ದುವುದರ ಅಥವಾ ರದ್ದುಗೊಳಿಸುವುದರ ಮೂಲಕ) ತಪ್ಪನ್ನು ತಿದ್ದತಕ್ಕದ್ದು, ಮತ್ತು ಆ ತಪ್ಪನ್ನು ಹೇಗೆ ತಿದ್ದಲಾಗಿದೆ ಎಂಬುದನ್ನು ತೋರಿಸುವ ನಮೂದಿನ ಉದ್ಧೃತ ಭಾಗವನ್ನು ರಾಜ್ಯ ಸರ್ಕಾರಕ್ಕೆ ಅಥವಾ ಆಯಾ ಸಂಧರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

2. (1)ನೆಯ ಉಪ–ನಿಯಮದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ವಹಿಯು ಅವರ ಸ್ವಾಧೀನದಲ್ಲಿಲ್ಲದಿದ್ದರೆ, ನೋಂದಣಿದಾರರು ರಾಜ್ಯ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ ಮುಖ್ಯಾಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ವಹಿಯನ್ನು ಒದಗಿಸಬೇಕೆಂದು ಕೋರತಕ್ಕದ್ದು ಮತ್ತು ವಿಷಯವನ್ನು ಪರಿಶೀಲಿಸಿದ ತರುವಾಯ, ಅಂತಹ ಯಾವುದೇ ತಪ್ಪನ್ನು ಮಾಡಲಾಗಿದೆಯೆಂದು ಮನವರಿಕೆಯಾದರೆ, ಅವಶ್ಯಕವಾದ ತಿದ್ದುಪಡಿಯನ್ನು ಮಾಡತಕ್ಕದ್ದು.

3. (2)ನೆಯ ಉಪನಿಯಮದಲ್ಲಿ ನಮೂದಿಸಿದಂತಹ ಯಾವುದೇ ತಿದ್ದುಪಡಿಯ ಬಗ್ಗೆ ನೋಂದಣಿದಾರರಿಂದ ವಹಿಯನ್ನು ಪಡೆದಾಗ ರಾಜ್ಯ ಸರ್ಕಾರದಿಂದ ಅಥವಾ ಆಯಾ ಸಂದರ್ಭಾನುಸಾರ ತಹಸೀಲ್ದಾರರಿಂದ ಅಥವಾ ಮುನಿಸಿಪಾಲಿಟಿಯ ಕಮೀಷನರಿಂದ/ ಮುಖ್ಯಾಧಿಕಾರಿಯಿಂದ ಮೇಲುರುಜು ಮಾಡಲ್ಪಡತಕ್ಕದ್ದು.

4. ಜನನ ಮತ್ತು ಮರಣಗಳ ವಹಿಯಲ್ಲಿಯ ಯಾವುದೇ ನಮೂದು ದೋಷಯುಕ್ತವಾಗಿದೆಯೆಂದು ಯಾವುದೇ ವ್ಯಕ್ತಿಯು ನಿಖರವಾಗಿ ಹೇಳಿದರೆ, ಅಂತಹ ವ್ಯಕ್ತಿಯು ತಪ್ಪಿನ ಸ್ವರೂಪವನ್ನು ಮತ್ತು ಆ ವ್ಯವಹಾರಕ್ಕೆ ಸಂಬಂಧಿಸಿದ ನಿಜವಾದ ಅಂಶಗಳ ಬಗ್ಗೆ ತಿಳುವಳಿಕೆ ಹೊಂದಿರುವ ಇಬ್ಬರು ವಿಶ್ವಾಸಾರ್ಹ ವ್ಯಕ್ತಿಗೆ ಘೋಷಣೆಯನ್ನು ಒಪ್ಪಿಸಿದಾಗ, ನೋಂದಣಿದಾರರು 15ನೆಯ ಪ್ರಕರಣದ ಮೇರೆಗೆ ನಿಗದಿಪಡಿಸಿದ ರೀತಿಯಲ್ಲಿ ನಮೂದನ್ನು ತಿದ್ದಬಹುದು.

5. (1)ನೆಯ ಉಪ–ನಿಯಮದಲ್ಲಿ ಅಥವಾ (4)ನೆಯ ಉಪ–ನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನೋಂದಣಿದಾರರು ರಾಜ್ಯ ಸರ್ಕಾರಕ್ಕೆ ಅಥವಾ ಆಯಾ ಸಂದರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ ಮುಖ್ಯಾಧಿಕಾರಿಗೆ ಅವಶ್ಯಕ ವಿವರಗಳನ್ನು ಒದಗಿಸಿ, ಅದರಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯ ತಿದ್ದುಪಡಿಯ ಬಗ್ಗೆ ವರದಿ ಮಾಡತಕ್ಕದ್ದು.

6. ಜನನ ಮತ್ತು ಮರಣಗಳ ವಹಿಯಲ್ಲಿಯ ಯಾವುದೇ ನಮೂದು ವಂಚನೆಯಿಂದ ಅಥವಾ ಅನುಚಿತವಾಗಿ ಮಾಡಲ್ಪಟ್ಟಿದೆಯೆಂದು ನೋಂದಣಿದಾರರು ಸಮಾಧಾನ ಹೊಂದುವ ರೀತಿಯಲ್ಲಿ ರುಜುವಾತಾಗಿದ್ದರೆ, ಈ ಸಂಬಂಧದಲ್ಲಿ 25ನೆಯ ಪ್ರಕರಣದ ಮೇರೆಗೆ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಮುಖ್ಯ ನೋಂದಣಾಧಿಕಾರಿಯವರಿಂದ ಪ್ರಾಧಿಕಾರ ಹೊಂದಿರುವ ಅಧಿಕಾರಿಗೆ ಅವಶ್ಯಕ ವಿವರಗಳೊಂದಿಗೆ ವರದಿ ಮಾಡತಕ್ಕದ್ದು ಮತ್ತು ಅವನು ಹೇಳಿಕೆಯನ್ನು ಕೊಟ್ಟ ತರುವಾಯ, ಈ ವಿಷಯದಲ್ಲಿ ಅವಶ್ಯಕ ಕ್ರಮ ತೆಗೆದುಕೊಳ್ಳತಕ್ಕದ್ದು.

7. ಈ ನಿಯಮಕ್ಕೆ ಒಳಪಟ್ಟು ನಮೂದನ್ನು ತಿದ್ದಲಾಗಿರುವ ಅಥವಾ ರದ್ದುಗೊಳಿಸಲಾಗಿರುವ ಪ್ರತಿ ಸಂದರ್ಭದಲ್ಲೂ, ಆ ಸಂಬಂಧದ ಮಾಹಿತಿಯನ್ನು 8ನೆಯ ಪ್ರಕರಣದ ಅಥವಾ 9ನೆಯ ಪ್ರಕರಣದ ಮೇರೆಗೆ ವಿವರಣೆಯನ್ನು ಕೊಟ್ಟಿರುವ ವ್ಯಕ್ತಿಯ ಖಾಯಂ ವಿಳಾಸಕ್ಕೆ ಕಳುಹಿಸತಕ್ಕದ್ದು.

ಮೇಲ್ಕಂಡ ಅವಕಾಶಗಳನ್ನು ಕಾನೂನಿನಲ್ಲಿ ಸ್ಪಷ್ಟವಾಗಿ ತಿಳಿಸಿದ್ದರೂ ಸಹ ಕೆಲವು ಜಿಲ್ಲೆ/ತಾಲ್ಲೂಕು/ಪಟ್ಟಣ ಪ್ರದೇಶಗಳಲ್ಲಿ ನೋಂದಣಿದಾರರು, ಸಾರ್ವಜನಿಕರು ತಿದ್ದುಪಡಿಗೆ ಕೋರಿಕೆ ಸಲ್ಲಿಸಿದಾಗ ಪ್ರತಿಯೊಂದು ಪ್ರಕರಣಗಳಿಗೂ ನ್ಯಾಯಾಲಯದ ಆದೇಶ ಪಡೆದು ಸಲ್ಲಿಸಲು ಸೂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಆರ್ಥಿಕವಾಗಿ ಹೆಚ್ಚಿನ ಹೊರೆ ಉಂಟಾಗುವುದಲ್ಲದೆ, ಅವರಿಗೆ ಅನಾವಶ್ಯಕವಾಗಿ ತೊಂದರೆಗೆ ಗುರಿಮಾಡಿದಂತಾಗುತ್ತದೆ. ಈ ವಿಷಯದ ಬಗ್ಗೆ ದಿನಾಂಕ:16.6.2011 ರಂದು ವಿಧಾನಸೌಧದಲ್ಲಿ ನಡೆದ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ ಸಭೆಯಲ್ಲಿ ಚರ್ಚೆಯಾಗಿದ್ದು, ಕಾನೂನಿನಲ್ಲಿರುವ ಅವಕಾಶಗಳು ಸರಿಯಾಗಿ ಜಾರಿಯಾಗುತ್ತಿಲ್ಲವೆಂದು ಸಮಿತಿಯ ಸದಸ್ಯರುಗಳು ಅಸಮಾದಾನ ಹಾಗೂ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರು ಜನನ, ಮರಣ ನೋಂದಣಿ ದಾಖಲೆಗಳಲ್ಲಿ ತಿದ್ದುಪಡಿ ಅಥವಾ ಇನ್ನಾವುದೇ ವಿಚಾರಗಳಿಗೆ ಬೇಡಿಕೆ ಸಲ್ಲಿಸಿದಾಗ ಜನನ, ಮರಣ ನೋಂದಣಿ ನಿಯಮಗಳಲ್ಲಿರುವ ಅವಕಾಶಗಳ ಬಗ್ಗೆ ಸರಿಯಾಗಿ ತಿಳಿದುಕೊಂಡು ಸಾರ್ವಜನಿಕರಿಗೆ ತೊಂದರೆಯಾಗದಿರುವಂತೆ ಜನನ, ಮರಣ ನೋಂದಣಿ ನಿಯಮಗಳನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ಸಂಜೀವಕುಮಾರ್,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್.1345

ಇಂಧನ ಸಚಿವಾಲಯ

ವಿಷಯ: ಮೆ:: ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್‌ರವರಿಗೆ ಹಂಚಿಕೆಯಾಗಿರುವ 9.00 ಮೆಗಾ ವ್ಯಾಟ್ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 18.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ: ಇಂಇ 239 ಎನ್‌ಸಿಇ 2002 ದಿನಾಂಕ: 10.10.2002.
2) ತಿದ್ದುಪಡಿ ಆದೇಶ ಸಂಖ್ಯೆ ಇಂಇ 78 ಎನ್‌ಸಿಇ 2003 ದಿನಾಂಕ: 04.4.2003.
3) ಸರ್ಕಾರಿ ಆದೇಶ ಸಂಖ್ಯೆ ಡಿಇ 289 ಎನ್‌ಸಿಇ 2003 ದಿನಾಂಕ: 09.1.2004.
4) ಸರ್ಕಾರಿ ಆದೇಶ ಸಂಖ್ಯೆ: ಇನ್ 423 ಎನ್‌ಸಿಇ 2006 ದಿನಾಂಕ: 09.11.2006.
5) ಸರ್ಕಾರಿ ಆದೇಶ ಸಂಖ್ಯೆ: ಇನ್ 438 ಎನ್‌ಸಿಇ 2006 ದಿನಾಂಕ: 15.02.2007.
6) ಸರ್ಕಾರಿ ಆದೇಶ ಸಂಖ್ಯೆ: ಇನ್ 176 ಎನ್‌ಸಿಇ 2011 ದಿನಾಂಕ: 04.08.2011
7) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/06/ಕೊಲಾವರ್ ಎಂಹೆಚ್‌ಎಸ್/ 2009/4553 ದಿನಾಂಕ: 07.12.2011.
8) ದಿನಾಂಕ 21.12.2011 ರಂದು ನಡೆದ ಹಂಚಿಕೆ ಸಮಿತಿ ಸಭೆ ನಡವಳಿ.

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೆ:: ಫಾಲ್ಗುಣಿ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕೊಲಾವರ ಗ್ರಾಮದ ಬಳಿ ಫಾಲ್ಗುಣಿ ನದಿಗೆ ಅಡ್ಡಲಾಗಿ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ತಿದ್ದುಪಡಿಯಲ್ಲಿ ಸದರಿ ಕಂಪನಿಯ ಹೆಸರನ್ನು ಮೆ:: ಫಾಲ್ಗುಣಿ ಪವರ್ ಪ್ರಾಜೆಕ್ಟ್ಸ್–2 (A divisinon of Ground and Air Tehcnical Services (P) Ltd.) ಎಂದು ತಿದ್ದುಪಡಿ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಮೇಲ್ಕಂಡ ಕಂಪನಿಯ ಕಿರು ಜಲ ವಿದ್ಯುತ್ ಯೋಜನೆಯ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿಗೆ ಬದಲಾಗಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು ಎಂದು ಬದಲಾವಣೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ 09.11.2006ರಿಂದ ಮೂರು ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ ಮೇಲ್ಕಂಡ ಯೋಜನೆಯ ಸಾಮರ್ಥ್ಯವನ್ನು 6.00 ಮೆಗಾ ವ್ಯಾಟ್ ನಿಂದ 9.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಆದೇಶದಲ್ಲಿ ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ಸ್ – 2 ಕಂಪನಿ ಹೆಸರನ್ನು ಮೆ:: ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲಾಗಿತ್ತು ಹಾಗೂ ಮೇಲಿನ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ 24.5.2010 ರಿಂದ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ॥ ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ತಾಲ್ಲೂಕಿನ ಕೊಲಾವರ ಗ್ರಾಮದ ಬಳಿ ಮಂಜೂರಾಗಿರುವ 9.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 9.00 ಮೆ.ವ್ಯಾ ನಿಂದ 18.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (8) ರಲ್ಲಿ ಓದಲಾಗಿರುವ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ : ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರ ಪ್ರಸ್ತಾವಿತ ಸಾಮರ್ಥ್ಯ ಹೆಚ್ಚಳ ಪ್ರಸ್ತಾವನೆಯನ್ನು ಹಂಚಿಕೆ ಸಮಿತಿಯು ಶಿಫಾರಸ್ಸಿಸಿರುತ್ತದೆ.

ಆದುದರಿಂದ, ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 463 ಎನ್‌ಸಿಇ 2011, ಬೆಂಗಳೂರು, ದಿನಾಂಕ: 07.05.2012.

ಮೆ॥ ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ತಾಲ್ಲೂಕಿನ, ಕೊಲಾವರ ಗ್ರಾಮದ ಬಳಿ ಫಾಲ್ಗುಣಿ ನದಿಗೆ ಅಡ್ಡಲಾಗಿ ಮಂಜೂರಾಗಿರುವ 9.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು **18.00 ಮೆಗಾ ವ್ಯಾಟ್** ಸಾಮರ್ಥ್ಯಕ್ಕೆ **ಹೆಚ್ಚಿಸಿ** ಆದೇಶಿಸಿದೆ.

ಸದರಿ ಯೋಜನೆಯನ್ನು ದಿನಾಂಕ 04.8.2011ರ ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ದಿನಾಂಕ 23.05.2013ರೊಳಗೆ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 1341

ಇಂಧನ ಸಚಿವಾಲಯ

ವಿಷಯ: ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 16.00 ಮೆ.ವ್ಯಾ ಸಾಮರ್ಥ್ಯವನ್ನು ಮೆ: ತಡಸ್ ವಿಂಡ್ ಎನರ್ಜಿ ಲಿಮಿಟೆಡ್, ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/TWEL–16 MW (VWILLP-200 MW)/2012/1115 ದಿನಾಂಕ: 14/18.04.2012

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್ಎಲ್ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Sl No.	Geographical Area Details of the Project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N **Longitude**: 75°08'56"- 75°14'23" E **Ridge peaks:** 701, 714, 682, 717, 713, 698, 733, 722m AMSL.	19.80 MW	59.40 MW	79.20 MW (99 x 800 KW)
2	A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- **Latitude**: 15°0'0"- 15°10'30" N **Longitude**: 75°15'0"- 75°28'19" E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL.	49.83 (part capacity of 67.65 MW)	70.97	120.80 MW (151 x 800 KW)

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್ಎಲ್ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 16.00 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು 30.06.2012ರೊಳಗೆ ಅನುಷ್ಠಾನಗೊಳಿಸುವ, ಉತ್ಪಾದನೆ ಆಗುವ ವಿದ್ಯುತ್ತನ್ನು REC Mechanism ನ ಅಡಿಯಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಸರಬರಾಜು ಮಾಡಲಾಗುವುದೆಂದು ವರದಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 147 ಎನ್‌ಸಿಇ 2012, ಬೆಂಗಳೂರು, ದಿನಾಂಕ: 02.05.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 16.00 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ:–

Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
Kunkur	Kundakhol/Dharwad	0.800	33/5	57	1.1	Lat: 15°5'50.3 N Long: 75°12'15.7'' E
Mattigatti	Kundakhol/Dharwad	0.800	79	58	1.1	Lat: 15°6'42.5 N Long: 75°11'9.5'' E
Mattigatti	Kundakhol/Dharwad	0.800	83	59	1.1	Lat: 15°6'49.7 N Long: 75°11'12.2'' E
Hanumanahalli	Kundakhol/Dharwad	0.800	13/2	60	1.1	Lat: 15°6'20.9 N Long: 75°11'59.4'' E
Mattigatti	Kundakhol/Dharwad	0.800	4	61	1.1	Lat: 15°7'2.9 N Long: 75°10'59.2'' E
Malali	Kundakhol/Dharwad	0.800	15/6	62	1.1	Lat: 15°6'33.6 N Long: 75°12'4.3'' E
Hanumanahalli	Kundakhol/Dharwad	0.800	30	63	1.1	Lat: 15°8'31.4 N Long: 75°11'12.5'' E
Hanumanahalli	Kundakhol/Dharwad	0.800	32/3A	64	1.1	Lat: 15°8'24.3 N Long: 75°11'14'' E
Hirebudihal	Kundakhol/Dharwad	0.800	148	65	1.1	Lat: 15°8'6.1 N Long: 75°11'27.9'' E
Hirebudihal	Kundakhol/Dharwad	0.800	148	66	1.1	Lat: 15°7'54.8 N Long: 75°12'42.9'' E
Kunkur	Kundakhol/Dharwad	0.800	46	67	1.1	Lat: 15°8'22" N Long: 75°10'55.9'' E
Malali	Kundakhol/Dharwad	0.800	13	68	1.1	Lat: 15°6'31.1 N Long: 75°11'10.2'' E
Malali	Kundakhol/Dharwad	0.800	11	69	1.1	Lat: 15°7'33.8" N Long: 75°11'43.4'' E
Guruvinahalli	Kundakhol/Dharwad	0.800	19	70	1.1	Lat: 15°7'44" N Long: 75°11'42.2'' E
Kunkur	Kundakhol/Dharwad	0.800	69	71	1.1	Lat: 15°7'56.5" N Long: 75°11'35.8'' E

Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
Guruvinahalli	Kundakhol/Dharwad	0.800	26	72	1.1	Lat: 15°7'19.1" N Long: 75°12'45.4'' E
Hirebendegeri	Shiggaon/Haveri	0.800	185/1	73	1.1	Lat: 15°7'6.4" N Long: 75°12'30.8'' E
Hanumanahalli	Kundakhol/Dharwad	0.800	4	74	1.1	Lat: 15°7'45.9" N Long: 75°12'44.6'' E
Kunkur	Kundakhol/Dharwad	0.800	37	75	1.1	Lat: 15°7'10.9" N Long: 75°12'46.7'' E
Mattigatti	Kundakhol/Dharwad	0.800	4	88	1.1	Lat: 15°6'20.1" N Long: 75°11'39.2'' E
	Total	**16.00**				

1 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು REC Mechanism ನ ಅಡಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.

3 ಸದರಿ ಯೋಜನೆಯನ್ನು **ದಿನಾಂಕ 30.6.2012ರೊಳಗಾಗಿ** ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 1342

ಇಂಧನ ಸಚಿವಾಲಯ

ವಿಷಯ : ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗಿರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 6.4 ಮೆ.ವ್ಯಾ ಸಾಮರ್ಥ್ಯವನ್ನು ಮೆ: ತಡಸ್ ವಿಂಡ್ ಎನರ್ಜಿ ಲಿಮಿಟೆಡ್, ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/TWEL-6.4 MW (VWILLP-200 MW)/2012/1117 ದಿನಾಂಕ: 14/18.04.2012

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Sl No.	Geographical Area Details of the Project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N **Longitude**: 75°08'56"- 75°14'23" E **Ridge peaks:** 701, 714, 682, 717, 713, 698, 733, 722m AMSL.	19.80 MW	59.40 MW	79.20 MW (99 x 800 KW)
2	A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- **Latitude**: 15°0'0"- 15°10'30" N **Longitude**: 75°15'0"- 75°28'19" E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL.	49.83 (part capacity of 67.65 MW)	70.97	120.80 MW (151 x 800 KW)

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 6.4 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು 30.06.2012ರೊಳಗೆ ಅನುಷ್ಠಾನಗೊಳಿಸುವ, ಉತ್ಪಾದನೆ ಆಗುವ ವಿದ್ಯುತ್ತನ್ನು REC Mechanism ನ ಅಡಿಯಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಸರಬರಾಜು ಮಾಡಲಾಗುವುದೆಂದು ವರದಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 149 ಎನ್‌ಸಿಇ 2012, ಬೆಂಗಳೂರು, ದಿನಾಂಕ: 02.05.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ **6.4 ಮೆ.ವ್ಯಾ.** ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ವರ್ಗಾಯಿಸಲಾಗಿದೆ:–**

LAND DETAILS OF THE PROJECT

Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
Hirebendegeri	Shiggaon/Haveri	0.800	60/3A	76	1.1	Lat: 15°5'22.3" N Long: 75°14'22.9'' E
Hirebendegeri	Shiggaon/Haveri	0.800	65	77	1.1	Lat: 15°5'14" N Long: 75°14'23.2'' E
Belavalakoppa	Shiggaon/Haveri	0.800	103/3&4	78	1.1	Lat: 15°5'4.8" N Long: 75°14'23'' E
Belavalakoppa	Shiggaon/Haveri	0.800	103/3&4	79	1.1	Lat: 15°4'55.5" N Long: 75°14'17.9'' E
Belavalakoppa	Shiggaon/Haveri	0.800	103/3&4	90	1.1	Lat: 15°4'33.4" N Long: 75°14'0.1'' E
Belavalakoppa	Shiggaon/Haveri	0.800	115/1&2A	51	1.1	Lat: 15°4'40.8" N Long: 75°13'12.2'' E
Hirebendegeri	Shiggaon/Haveri	0.800	63/3A	50	1.1	Lat: 15°4'32.1" N Long: 75°13'24.1'' E
Surapagatti	Shiggaon/Haveri	0.800	18	49	1.1	Lat: 15°4'21.3" N Long: 75°13'26.4'' E
	Total	**6.40**				

1 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು REC Mechanism ನ ಅಡಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.

3 ಸದರಿ ಯೋಜನೆಯನ್ನು ದಿನಾಂಕ 30.6.2012ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 1343

ಇಂಧನ ಸಚಿವಾಲಯ

ವಿಷಯ : ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 5.6 ಮೆ.ವ್ಯಾ ಸಾಮರ್ಥ್ಯವನ್ನು ಮೆ: ತಡಸ್ ವಿಂಡ್ ಎನರ್ಜಿ ಲಿಮಿಟೆಡ್, ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/TWEL-5.6 MW (VWILLP-200 MW)/2012/1116 ದಿನಾಂಕ: 13/18.04.2012

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Sl No.	Geographical Area Details of the Project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N **Longitude**: 75°08'56"- 75°14'23" E **Ridge peaks:** 701, 714, 682, 717, 713, 698, 733, 722m AMSL.	19.80 MW	59.40 MW	79.20 MW (99 x 800 KW)
2	A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- **Latitude**: 15°0'0"- 15°10'30" N **Longitude**: 75°15'0"- 75°28'19" E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL.	49.83 (part capacity of 67.65 MW)	70.97	120.80 MW (151 x 800 KW)

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 5.6 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು 30.06.2012ರೊಳಗೆ ಅನುಷ್ಠಾನಗೊಳಿಸುವ, ಉತ್ಪಾದನೆ ಆಗುವ ವಿದ್ಯುತ್ತನ್ನು REC Mechanism ನ ಅಡಿಯಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಸರಬರಾಜು ಮಾಡಲಾಗುವುದೆಂದು ವರದಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 148 ಎನ್‌ಸಿಇ 2012, ಬೆಂಗಳೂರು, ದಿನಾಂಕ: 02.05.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ **5.6 ಮೆ.ವ್ಯಾ.** ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ವರ್ಗಾಯಿಸಲಾಗಿದೆ:–**

LAND DETAILS OF THE PROJECT

Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
Hulsogi	Shiggaon/Haveri	0.8	159/6	42	1.1	Lat: 15°3'45.1" N Long: 75°10'29.9'' E
Hulsogi	Shiggaon/Haveri	0.8	200	43	1.1	Lat: 15°3'21.7" N Long: 75°10'43.9'' E
Hulsogi	Shiggaon/Haveri	0.8	159/ 1&2	44	1.1	Lat: 15°3'10" N Long: 75°10'47.7'' E
Hulsogi	Shiggaon/Haveri	0.8	176/B	45	1.1	Lat: 15°3'4" N Long: 75°10'55.5'' E
Hulsogi	Shiggaon/Haveri	0.8	160/1	46	1.1	Lat: 15°2'57.2" N Long: 75°10'48.6'' E
Hulsogi	Shiggaon/Haveri	0.8	107/C	47	1.1	Lat: 15°2'51.1" N Long: 75°10'51.4'' E
Hulsogi	Shiggaon/Haveri	0.8	172	48	1.1	Lat: 15°2'27.6" N Long: 75°11'2.3" E
	Total	**5.6**				

1 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು REC Mechanism ನ ಅಡಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.

3 ಸದರಿ ಯೋಜನೆಯನ್ನು **ದಿನಾಂಕ 30.6.2012ರೊಳಗಾಗಿ** ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 1344

ಇಂಧನ ಸಚಿವಾಲಯ

ವಿಷಯ : ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 4.8 ಮೆ.ವ್ಯಾ ಸಾಮರ್ಥ್ಯವನ್ನು ಮೆ: ತಡಸ್ ವಿಂಡ್ ಎನರ್ಜಿ ಲಿಮಿಟೆಡ್, ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/TWEL-4.8 MW (VWILLP-200 MW)/2012/1118 ದಿನಾಂಕ: 13/18.04.2012

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Sl No.	Geographical Area Details of the Project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N **Longitude**: 75°08'56"- 75°14'23" E **Ridge peaks:** 701, 714, 682, 717, 713, 698, 733, 722m AMSL.	19.80 MW	59.40 MW	79.20 MW (99 x 800 KW)
2	A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into	49.83 (part capacity of 67.65 MW)	70.97	120.80 MW (151 x 800 KW)

	this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- **Latitude**: 15°0'0"- 15°10'30" N **Longitude**: 75°15'0"- 75°28'19" E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL.			

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 4.8 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು 30.06.2012ರೊಳಗೆ ಅನುಷ್ಠಾನಗೊಳಿಸುವ, ಉತ್ಪಾದನೆ ಆಗುವ ವಿದ್ಯುತ್ತನ್ನು REC Mechanism ನ ಅಡಿಯಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಸರಬರಾಜು ಮಾಡಲಾಗುವುದೆಂದು ವರದಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 150 ಎನ್‌ಸಿಇ 2012, ಬೆಂಗಳೂರು, ದಿನಾಂಕ: 02.05.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ **4.8 ಮೆ.ವ್ಯಾ.** ಸಾಮರ್ಥ್ಯದ ಯೋಜನೆಯನ್ನು ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ವರ್ಗಾಯಿಸಲಾಗಿದೆ:–**

Land details of the Project

Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
Hiremankatti	Shiggaon/Haveri	0.8	66/1	80	1.1	Lat: 15°3'30.6" N Long: 75°12'48.3'' E
Hiremankatti	Shiggaon/Haveri	0.8	98/9B	81	1.1	Lat: 15°3'21" N Long: 75°12'21.5'' E
Hiremankatti	Shiggaon/Haveri	0.8	65/3A	82	1.1	Lat: 15°2'31.3" N Long: 75°11'53.8'' E
Mugali	Shiggaon/Haveri	0.8	33/1A&B	83	1.1	Lat: 15°2'21.4" N Long: 75°12'2.5'' E
Hiremankatti	Shiggaon/Haveri	0.8	78/2B+3/A	84	1.1	Lat: 15°2'12.9" N Long: 75°12'7.8'' E
Vanahalli	Shiggaon/Haveri	0.8	56/1	85	1.1	Lat: 15°2'12.7" N Long: 75°12'58.2'' E
	Total	**4.8**				

1 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ತಡಸ್ ವಿಂಡ್ ಎನರ್ಜಿ ಲಿಮಿಟೆಡ್** ರವರು REC Mechanism ನ ಅಡಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.

3 ಸದರಿ ಯೋಜನೆಯನ್ನು ದಿನಾಂಕ 30.6.2012ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 1362

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಜಾಲನೆ (Karnataka Government Secretariat Local Area Network-SECLAN) ಯೋಜನೆ ಮತ್ತು ಸೌಕರ್ಯ ನಿರ್ವಹಣೆ ಸೇವೆಯ ಯೋಜನೆ (Facility Management Service), ಇವುಗಳಿಗಾಗಿ ಉಸ್ತುವಾರಿ ಸಮಿತಿ(Monitoring Committee)ಯನ್ನು ರಚಿಸುವ ಬಗ್ಗೆ.

ಪ್ರಸ್ತಾವನೆ:

1. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಅಧೀನ ಸಂಸ್ಥೆಯಾದ ಇ–ಆಡಳಿತ ಕೇಂದ್ರದ ವತಿಯಿಂದ ವಿಧಾನ ಸೌಧ, ವಿಕಾಸ ಸೌಧ ಮತ್ತು ಬಹುಮಹಡಿಗಳ ಕಟ್ಟಡಗಳಲ್ಲಿರುವ ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಿಗೆ ಸ್ಥಳೀಯ ನಿಸ್ತಂತು ಜಾಲನೆ (SECLAN) ವ್ಯವಸ್ಥೆಯನ್ನು ಕಲ್ಪಿಸಿದ್ದು, ಇದನ್ನು ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿನ ಇ–ಆಡಳಿತದ ಅನ್ವಯಿಕೆಗಳಿಗಾಗಿ (for e-Governance applications) ಬಳಸಲಾಗುತ್ತಿದೆ. ಸ್ಥಳೀಯ ನಿಸ್ತಂತು ಜಾಲನೆ (SECLAN) ಯ ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ವಹಣೆ ಇತ್ಯಾದಿಗಳಿಗಾಗಿ ಮೆ॥ ಟಿಸಿಎಸ್ ಸಂಸ್ಥೆಗೆ ಜಾಲಬಂಧ ನಿರ್ವಾಹಕರಾಗಿ (Network Operator) ದಿನಾಂಕ: 04.12.2009ರ Letter of Intent ರ ಪ್ರಕಾರ ನೇಮಿಸಲಾಗಿದೆ.

2. ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿನ ಅಗತ್ಯತೆಗನುಗುಣವಾಗಿ ಸದರಿ ಇ–ಆಡಳಿತ ಕೇಂದ್ರವು ಮಾಹಿತಿ ತಂತ್ರಜ್ಞಾನದ ಮೂಲಸೌಲಭ್ಯಗಳು ಇತ್ಯಾದಿಗಾಗಿ ಉಪಕರಣಗಳ ಸರಬರಾಜು ಮತ್ತು ನಿರ್ವಹಣೆಯನ್ನು ಮಾಡುತ್ತಿದೆ. ಈ ಉಪಕರಣಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸುತ್ತಿರುವ ಕಾರಣ ಇವುಗಳ ನಿರ್ವಹಣೆಯನ್ನು ದಕ್ಷವಾಗಿ ಮಾಡಲು ಅನುವಾಗಲು ದಿನಾಂಕ: 12.01.2011ರ Letter of Intent ರನ್ವಯ ಮೆ॥ ಟಿಸಿಎಸ್ ಸಂಸ್ಥೆಗೆ ಸೌಕರ್ಯ ನಿರ್ವಹಣೆ ಕಾರ್ಯವನ್ನು (Facility Management Service) ವಹಿಸಲಾಗಿದೆ. ಸದರಿ ಸಂಸ್ಥೆಯು ಮೇಲ್ಕಂಡ ಎರಡೂ ಯೋಜನೆಗಳಲ್ಲಿ ಚೌಕಟ್ಟು ದಾಖಲೆ ನಿರ್ವಹಣೆ (Request for Proposal-RFP)ಯಲ್ಲಿ ನಿಗದಿಪಡಿಸಿರುವ ನಿಬಂದನೆಗಳು ಮತ್ತು ಷರತ್ತುಗಳಿಗನುಗುಣವಾಗಿ ಸೇವೆಯನ್ನು ನೀಡಬೇಕಾಗಿರುತ್ತದೆ.

3. ಮೇಲ್ಕಂಡ ಎರಡು ಯೋಜನೆಗಳ ಕಾರ್ಯಗತಗೊಳಿಸುವಿಕೆಯನ್ನು ಸಮರ್ಪಕವಾಗಿ ನೋಡಿಕೊಳ್ಳಲು ಒಂದು ಉಸ್ತುವಾರಿ ಸಮಿತಿಯನ್ನು ರಚಿಸುವುದು ಅಗತ್ಯವೆಂದು ಭಾವಿಸಲಾಗಿದೆ. ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 41 ಇಅಇ 2012, ಬೆಂಗಳೂರು ದಿನಾಂಕ: 08ನೇ ಮೇ, 2012

4. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಉಸ್ತುವಾರಿ ಸಮಿತಿಯನ್ನು ಈ ಮೂಲಕ ರಚಿಸಲಾಗಿದೆ:–

(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಬೆಂಗಳೂರು	–ಅಧ್ಯಕ್ಷರು
(2) ಸರ್ಕಾರದ ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)	–ಸದಸ್ಯರು
(3) ನಿರ್ದೇಶಕರು, ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ	–ಸದಸ್ಯರು

(4) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	–ಸದಸ್ಯರು
(5) ಸರ್ಕಾರದ ಉಪ /ಜಂಟಿ/ಅಪರ ಕಾರ್ಯದರ್ಶಿ(ಕಾರ್ಯಕಾರಿ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	–ಸದಸ್ಯರು
(6) ಆರ್ಥಿಕ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	–ಸದಸ್ಯರು
(7) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	–ಸದಸ್ಯರು
(8) ನಗರಾಭಿವೃದ್ಧಿ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	–ಸದಸ್ಯರು
(9) ಶಿಕ್ಷಣ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	–ಸದಸ್ಯರು
(10) ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	–ಸದಸ್ಯರು
(11) ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪ್ರತಿನಿಧಿ	–ಸದಸ್ಯರು
(12) ಕಾರ್ಯಪಾಲಕ ಅಭಿಯಂತರರು ಸಂಖ್ಯೆ–1, ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಬೆಂಗಳೂರು	–ಸದಸ್ಯರು
(13) ಸೀನಿಯರ್ ಪ್ರೋಗ್ರಾಮರ್–2, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ–ಆಡಳಿತ)	–ಸದಸ್ಯರು
(14) ಶ್ರೀ ಎಸ್.ಭಟ್ಟಾ ಚಾರ್ಜಿ, ಪ್ರಧಾನ ಸಮಾಲೋಚಕರು, ಇ–ಆಡಳಿತ ಕೇಂದ್ರ	–ಸದಸ್ಯರು
(15) ಯೋಜನಾ ವ್ಯವಸ್ಥಾಪಕರು, ರಾಜ್ಯ ದತ್ತ ಕೇಂದ್ರ, ಇ–ಆಡಳಿತ ಕೇಂದ್ರ	–ಸದಸ್ಯರು
(16) ಯೋಜನಾಧಿಕಾರಿ, ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಚಾಲನೆ (Karnataka Government Secretariat LAN) ಮತ್ತು ಸೌಕರ್ಯ ನಿರ್ವಹಣೆ ಸೇವೆ (Facility Management Service), ಇ–ಆಡಳಿತ ಕೇಂದ್ರ	– ಸದಸ್ಯ ಕಾರ್ಯದರ್ಶಿ /ಸಮಾವೇಶಕರು

5. ಮೇಲ್ಕಂಡ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು:–

(ಅ) ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಚಾಲನೆ (Karnataka Government Secretariat Local Area Network) ಮತ್ತು ಸೌಕರ್ಯ ನಿರ್ವಹಣೆ ಸೇವೆ (Facility Management Service) ಯೋಜನೆಗಳ ಮೇಲ್ವಿಚಾರಣೆ ಮಾಡುವುದು ಹಾಗೂ ಈ ಕುರಿತಂತೆ ಅದರ ಶಿಫಾರಸ್ಸುಗಳನ್ನು ಇ–ಆಡಳಿತ ಕೇಂದ್ರದಲ್ಲಿನ ಸಕ್ಷಮ ಪ್ರಾಧಿಕಾರಕ್ಕೆ ಮಂಡಿಸುವುದು;

(ಆ) ಸದರಿ ಯೋಜನೆಗಳ ನಿರ್ವಹಣೆ ಮಾಡುವ ಸಂಸ್ಥೆಗಳು ನೀಡುವ ಸೇವೆಯ ಮೌಲ್ಯಮಾಪನ ಮಾಡುವುದು ಹಾಗೂ ಈ ಕುರಿತಂತೆ ಅದರ ಶಿಫಾರಸ್ಸುಗಳನ್ನು ಇ–ಆಡಳಿತ ಕೇಂದ್ರದಲ್ಲಿನ ಸಕ್ಷಮ ಪ್ರಾಧಿಕಾರಕ್ಕೆ ಮಂಡಿಸುವುದು;

(ಇ) ಆ ಯೋಜನೆಗಳಿಗೆ ಸಂಬಂಧಿಸಿದಂತೆ ಅಡಚಣೆ ಇಲ್ಲದ ಕಾರ್ಯನಿರ್ವಹಣೆಗಾಗಿ ಇ–ಆಡಳಿತ ಕೇಂದ್ರದ ವ್ಯಾಪ್ತಿಗೆ ಸೇರಿದ ವಿಷಯಗಳ ಕುರಿತು ಪರಿಶೀಲಿಸಿ, ತದನಂತರ ಅದರ ಶಿಫಾರಸ್ಸುಗಳನ್ನು ಇ–ಆಡಳಿತ ಕೇಂದ್ರದಲ್ಲಿನ ಸಕ್ಷಮ ಪ್ರಾಧಿಕಾರಕ್ಕೆ ಮಂಡಿಸುವುದು;

(ಈ) ಸಂಬಂಧಿಸಿದ ನಿರ್ವಹಣಾ ಸಂಸ್ಥೆಯ ಸೇವೆಗಾಗಿ ಇ–ಆಡಳಿತ ಕೇಂದ್ರದ ವತಿಯಿಂದ ಸಂದಾಯ ಮಾಡಬೇಕಾದ ಮೊತ್ತದ ಪರಿಶೀಲನೆ ಮಾಡುವುದು ಹಾಗೂ ಈ ಕುರಿತಂತೆ ಅದರ ಶಿಫಾರಸ್ಸುಗಳನ್ನು ಇ–ಆಡಳಿತ ಕೇಂದ್ರದಲ್ಲಿನ ಸಕ್ಷಮ ಪ್ರಾಧಿಕಾರಕ್ಕೆ ಮಂಡಿಸುವುದು;

6. ಈ ಸಮಿತಿಯು ಸದರಿ ಯೋಜನೆಗಳ ಕಾರ್ಯನಿರ್ವಹಣೆ ಕುರಿತು ಆಗಿಂದಾಗ್ಯೆ ಸಭೆ ಸೇರತಕ್ಕದ್ದು. ಈ ಸಮಿತಿಯ ಸಭೆಗಳ ನಡವಳಿಯ ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಗೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಬಿ.ಬ್ರಹ್ಮಪ್ರಸಾದ್,
ಪೀಠಾಧಿಕಾರಿ–1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ–ಆಡಳಿತ)

ಪಿ.ಆರ್. 1353

ಒಳಾಡಳಿತ ಸಚಿವಾಲಯ

ವಿಷಯ : ಉದ್ಯೋಗಕ್ಕಾಗಿ ಸೇರುವ ಹಾಗೂ ಇತರೆ 11 ರೀತಿಯ ಪೊಲೀಸ್ ವೆರಿಫಿಕೇಷನ್/ಪೊಲೀಸ್ ಕ್ಲಿಯರೆನ್ಸ್ ದೃಢೀಕರಣ ಪತ್ರ ಪಡೆಯಲು ಬೆಂಗಳೂರು-ಒನ್ ಮತ್ತು ಕರ್ನಾಟಕ-ಒನ್ ಕೇಂದ್ರಗಳಲ್ಲಿ ನಿಗದಿತ ಶುಲ್ಕವನ್ನು ಪಾವತಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 130 ಎಸ್‌ಎಸ್‌ಟಿ 2011, ದಿನಾಂಕ:30/01/2012
2. ಕರ್ನಾಟಕ ರಾಜ್ಯ ಡಿಜಿ ಮತ್ತು ಐಜಿಪಿರವರ ಪತ್ರ ಸಂಖ್ಯೆ: 01/ಸಾಮಾನ್ಯ/ಎಡಿಜಿಪಿ/ಪೊಗವಿ/2011-12 ದಿನಾಂಕ:27/02/2012

ಪ್ರಸ್ತಾವನೆ :

ಬಹು ರಾಷ್ಟ್ರೀಯ ಸಂಸ್ಥೆಗಳಲ್ಲಿ ಉದ್ಯೋಗಕ್ಕಾಗಿ ಸೇರುವ ಅಭ್ಯರ್ಥಿಗಳ ಪೂರ್ವಾಪರ ಚರಿತ್ರೆ ತಪಾಸಣೆ ಮುಂತಾದ 11 ವಿವಿಧ ರೀತಿಯ ಪೊಲೀಸ್ ವೆರಿಫಿಕೇಷನ್/ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಪಡೆಯಲು ಉಲ್ಲೇಖ 1ರ ಆದೇಶದನ್ವಯ ಈ ಕೆಳಕಂಡ ಸೇವೆಗಳಿಗೆ ಶುಲ್ಕ ನಿಗದಿಪಡಿಸಲಾಗಿದೆ.

1	ಬಹುರಾಷ್ಟ್ರೀಯ ಕಂಪನಿಗಳು, ಖಾಸಗಿ ಕಂಪನಿಗಳು ಮತ್ತು ಇತರೆ ಕಂಪನಿಗಳಿಗೆ ಸೇರಲ್ಪಡುವ ಉದ್ಯೋಗಿಗಳ ಪೂರ್ವಾಪರ ಚಾರಿತ್ರ್ಯ ಪರಿಶೀಲನೆಯ (ಠಾಣಾ ದಾಖಲಾತಿಗಳಿಂದ) ಬಗ್ಗೆ ಹಣ ನೀಡಬೇಕಾದ ವ್ಯಕ್ತಿಯ ಅಥವಾ ಸಂಬಂಧಪಟ್ಟ ಕಂಪನಿಯವರು ನೀಡಬೇಕಾದ ಹಣ	ರೂ.300/-
2	ಬಹುರಾಷ್ಟ್ರೀಯ ಕಂಪನಿಗಳು, ಖಾಸಗಿ ಕಂಪನಿಗಳು ಮತ್ತು ಇತರೆ ಕಂಪನಿಗಳಿಗೆ ಸೇರಲ್ಪಡುವ ಉದ್ಯೋಗಕ್ಕೆ ಸೇರಲ್ಪಡುವ ಉದ್ಯೋಗಿಗಳ ಪೂರ್ವಾಪರ ಚಾರಿತ್ರ್ಯ ವಿಳಾಸದೊಂದಿಗೆ ಪರಿಶೀಲನೆ ಶುಲ್ಕ ಕಂಪನಿಯವರು ನೀಡಬೇಕಾದ ಹಣ	ರೂ.1,000/-
3	ಉದ್ಯೋಗಕ್ಕೆ ಸೇರಲ್ಪಡುವ ನೌಕರರ ವಿಳಾಸದೊಂದಿಗೆ ಪೂರ್ವಾಪರ ಚಾರಿತ್ರ್ಯ ಪರಿಶೀಲನಾ ಶುಲ್ಕ	ರೂ.250/-
4	ಮನೆಯಾಳುಗಳ ಪೂರ್ವಾಪರ ಚಾರಿತ್ರ್ಯ ಪರಿಶೀಲನಾ ಶುಲ್ಕ	ರೂ.250/-
5	ವಿಳಾಸದೊಂದಿಗೆ ಮನೆಯಾಳುಗಳ ಪೂರ್ವಾಪರ ಚಾರಿತ್ರ್ಯ ಪರಿಶೀಲನಾ ಶುಲ್ಕ	ರೂ.500/-
6	ಸಂಸ್ಥೆ/ಕಂಪನಿಗಳ ವಿಳಾಸದ ಪೂರ್ವಾಪರ ಚಾರಿತ್ರ್ಯ ಪರಿಶೀಲನಾ ಶುಲ್ಕ	ರೂ.1000/-
7	Verification in respect of Marriage alliance	ರೂ.300/-
8	ಸಾರ್ವಜನಿಕ ಉದ್ಯಮಗಳಲ್ಲಿ ತರಬೇತಿ ಹೊಂದಲು ಅಥವಾ ಅಪ್ರೆಂಟೀಸ್‌ಗಾಗಿ ಅಥವಾ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸಕ್ಕೆ ದಿನಗೂಲಿ ಆಧಾರದ ಮೇಲೆ ಕೆಲಸ ನಿರ್ವಹಿಸುವ ಉದ್ಯೋಗಿಗಳು/ಪ್ರಶಿಕ್ಷಣಾರ್ಥಿಗಳು ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ ಪಡೆಯುವ ಶುಲ್ಕ.	ರೂ.50/-
9	ತರಬೇತಿ ಸೇವೆಗೆ ಅಥವಾ ಎನ್.ಸಿ.ಸಿ ಮುಂತಾದ ಶಿಬಿರಗಳಿಗೆ ಹೋಗುವ ಅಭ್ಯರ್ಥಿಗಳಿಗೆ	ರೂ.50/-
10	ವಿಮಾನ ನಿಲ್ದಾಣದಲ್ಲಿ ಕೂಲಿ/ಲೋಡರ್ ಹುದ್ದೆಗಳಿಗೆ, ಕ್ಲಾಸ್-4 ಭದ್ರತಾ ಸಿಬ್ಬಂದಿ/ಸೂಪರ್ ವೈಸರ್ ಹುದ್ದೆಗೆ ವೈಯುಕ್ತಿಕವಾಗಿ ಪೊಲೀಸ್ ಪರಿಶೀಲನಾ ಪತ್ರಕ್ಕಾಗಿ ಅರ್ಜಿ ಸಲ್ಲಿಸುವವರಿಗೆ	ರೂ.100/-
11	ಕೇಂದ್ರ, ರಾಜ್ಯ ಸರ್ಕಾರ ನೌಕರಿಯ ಅಭ್ಯರ್ಥಿಯು ನೇರವಾಗಿ ಪೊಲೀಸ್ ಪರಿಶೀಲನಾ ಪತ್ರ ಕೇಳಿದ ಪಕ್ಷದಲ್ಲಿ	ರೂ.250/-

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಮೇಲ್ಕಂಡ ಉಲ್ಲೇಖ 2ರ ದಿನಾಂಕ.27/02/12 ರ ಪತ್ರದಲ್ಲಿ ಹಾಲಿ ಈಗಿರುವ ಚಲನ್ ಮುಖಾಂತರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಲೇಡಿ ಕರ್ಜನ್ ಮತ್ತು ಬೋರಿಂಗ್ ಆಸ್ಪತ್ರೆ ಎದುರು, ಶಿವಾಜಿನಗರ, ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರಗಳಲ್ಲಿನ ರಾಜ್ಯ ಹುಜೂರು ಖಜಾನೆಯಲ್ಲಿ ಶುಲ್ಕ ಪಾವತಿಸುವ ವ್ಯವಸ್ಥೆಯ ಜೊತೆಗೆ ಬೆಂಗಳೂರು ನಗರದಲ್ಲಿ ವಿವಿಧ ಭಾಗಗಳಲ್ಲಿರುವ ಬೆಂಗಳೂರು-ಒನ್ ಕೇಂದ್ರಗಳಲ್ಲಿ ಮತ್ತು ಮೈಸೂರು, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ದಾವಣಗೆರೆ, ಹುಬ್ಬಳ್ಳಿ-ಧಾರವಾಡ ನಗರ, ಗುಲಬರ್ಗಾ, ತುಮಕೂರು, ಬೆಳಗಾಂ ಜಿಲ್ಲೆಗಳಲ್ಲಿರುವ ಕರ್ನಾಟಕ-ಒನ್ ಕೇಂದ್ರಗಳ ಮೂಲಕ ಶುಲ್ಕ ಪಾವತಿಸುವ ವ್ಯವಸ್ಥೆ ಕಲ್ಪಿಸುವಂತೆ ಕೋರಿರುತ್ತಾರೆ. ಇದೊಂದು ಡೈರೆಕ್ಟರೇಟ್ ಆಫ್ ಇ.ಡಿ.ಸಿ.ಎಸ್.(ವಿದ್ಯುನ್ಮಾನ ಮಾಹಿತಿ ಸಂಗ್ರಹ ಸಂಪರ್ಕ ವ್ಯವಸ್ಥೆ) ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ರವರುಗಳನ್ನೊಳಗೊಂಡ ಸಹಕಾರಿ ಸಂಯೋಜಿತ ವ್ಯವಸ್ಥೆಯಾಗಿದ್ದು, ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಜಾರಿಗೊಳಿಸಲಾಗುತ್ತಿದೆ ಎಂದು ಅವರು ತಿಳಿಸಿರುತ್ತಾರೆ. ಬೆಂಗಳೂರು-ಒನ್ ಮತ್ತು ಹುಬ್ಬಳ್ಳಿ-ಧಾರವಾಡ ಕರ್ನಾಟಕ-ಒನ್ ಕೇಂದ್ರಗಳಿಗೆ ರೂ.5/-ವ್ಯಾವಹಾರಿಕ ಶುಲ್ಕವನ್ನು, ಇತರೆ ಕರ್ನಾಟಕ-ಒನ್ ಕೇಂದ್ರಗಳಲ್ಲಿ ರೂ.7/- ವ್ಯಾವಹಾರಿಕ ಶುಲ್ಕವನ್ನು ನಿಗದಿಪಡಿಸಿದೆ. ಈ ಶುಲ್ಕವು ಇ.ಡಿ.ಸಿ.ಎಸ್ ನಿರ್ದೇಶನಾಲಯಕ್ಕೆ ಪಾವತಿಸಲಾಗುತ್ತದೆ.

ಈ ವ್ಯವಸ್ಥೆಯನ್ನು ಜಾರಿಗೊಳಿಸುವುದರಿಂದ ಪೊಲೀಸ್ ಸೇವೆಗಳು ಇನ್ನಷ್ಟು ಸರಳಗೊಂಡು ಸಾರ್ವಜನಿಕರಿಗೆ ಸಮಯ ಹಾಗೂ ಪರಿಶ್ರಮದ ಉಳಿತಾಯವಾಗುವುದರಿಂದ ನಾಗರಿಕ ಸ್ನೇಹಿಯಾಗಲಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 130 ಎಸ್‌ಎಸ್‌ಟಿ 2011, ಬೆಂಗಳೂರು ದಿನಾಂಕ: 11/05/2012

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಸಿದೆ. ಮೇಲ್ಕಂಡ ಸೇವೆಗಳಿಗೆ ಹಾಲಿ ಚಲನ್ ಮುಖಾಂತರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಲೇಡಿ ಕರ್ಜನ್ ಮತ್ತು ಬೋರಿಂಗ್ ಆಸ್ಪತ್ರೆ ಎದುರು, ಶಿವಾಜಿನಗರ, ಬೆಂಗಳೂರು, ಹಾಗೂ ಜಿಲ್ಲಾ ಕೇಂದ್ರಗಳಲ್ಲಿನ ರಾಜ್ಯ ಹುಜೂರು ಖಜಾನೆಯಲ್ಲಿ ಪರಿಶೀಲನಾ ಶುಲ್ಕ ಪಾವತಿಸುವ **ವ್ಯವಸ್ಥೆಯು** ಜಾರಿಯಲ್ಲಿದೆ. ಈ ವ್ಯವಸ್ಥೆಯೊಂದಿಗೆ ಎಲ್ಲಾ ಬೆಂಗಳೂರು ಒನ್ ಕೇಂದ್ರಗಳು ಮತ್ತು ಮೈಸೂರು, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ದಾವಣಗೆರೆ, ಹುಬ್ಬಳ್ಳಿ-ಧಾರವಾಡ ನಗರ, ಗುಲಬರ್ಗಾ, ತುಮಕೂರು, ಬೆಳಗಾಂ ಜಿಲ್ಲೆಗಳಲ್ಲಿರುವ ಕರ್ನಾಟಕ-ಒನ್ ಕೇಂದ್ರಗಳಲ್ಲಿ ಶುಲ್ಕ ಪಾವತಿಸಲು ಕೆಳಕಂಡ ನಿಬಂಧನೆಗಳಿಗೊಳಪಡಿಸಿ, ಸರ್ಕಾರದ ಸಹಮತಿಯನ್ನು ನೀಡಿದೆ.

ಎ) ಪೊಲೀಸ್ ಇಲಾಖೆಗೆ ಪಾವತಿಸುವ ಪರಿಶೀಲನಾ ಶುಲ್ಕದ ಜೊತೆಗೆ ವ್ಯಾವಹಾರಿಕ ಶುಲ್ಕ (ರೂ.5/- ಬೆಂಗಳೂರು-ಒನ್ ಕೇಂದ್ರ ಮತ್ತು ಹುಬ್ಬಳ್ಳಿ-ಧಾರವಾಡ ಕೇಂದ್ರಗಳಲ್ಲಿ ಹಾಗೂ ರೂ.7/- ಇತರೆ ಕರ್ನಾಟಕ ಒನ್ ಕೇಂದ್ರಗಳು (ಮೈಸೂರು, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ದಾವಣಗೆರೆ, ಗುಲಬರ್ಗಾ, ತುಮಕೂರು, ಬೆಳಗಾಂ) ಸಂಗ್ರಹಿಸಬೇಕಾಗುತ್ತದೆ.

ಬಿ)ಬೆಂಗಳೂರು-ಒನ್ ಮತ್ತು ಕರ್ನಾಟಕ-ಒನ್ ಕೇಂದ್ರಗಳು ರಸೀದಿ ನೀಡತಕ್ಕದ್ದು. ಈ ರಸೀದಿಯಲ್ಲಿ ಪೊಲೀಸ್ ಇಲಾಖೆಗೆ ಸಂದಾಯವಾಗುವ ಶುಲ್ಕ ಮತ್ತು ಬೆಂಗಳೂರು-ಒನ್, ಕರ್ನಾಟಕ-ಒನ್ ಕೇಂದ್ರಗಳು ಸಂಗ್ರಹಿಸುವ ವ್ಯಾವಹಾರಿಕ ಶುಲ್ಕವನ್ನು ಪ್ರತ್ಯೇಕವಾಗಿ ನಮೂದಿಸತಕ್ಕದ್ದು.

ಸಿ) ಪ್ರಾರಂಭಿಕವಾಗಿ, ಸಂಗ್ರಹಿಸಿದ ಶುಲ್ಕವನ್ನು ವಾರಕ್ಕೊಮ್ಮೆಯಾದರೂ ಸರ್ಕಾರಕ್ಕೆ ಪಾವತಿಸತಕ್ಕದ್ದು.

ಡಿ) ಪೊಲೀಸ್ ಇಲಾಖೆಯ ಮಾಹಿತಿಗಾಗಿ ಹಾಗೂ ಸೇವೆಯನ್ನು ಒದಗಿಸಲು ಅನುವಾಗುವಂತೆ ಪೊಲೀಸ್ ಇಲಾಖೆ, ಇ-ಆಡಳಿತ ಸಚಿವಾಲಯ, ಬೆಂಗಳೂರು-ಒನ್ ಮತ್ತು ಕರ್ನಾಟಕೆ-ಒನ್ ಸಂಸ್ಥೆಗಳು ನೈಜ ಕಾಲಾಧಾರಿತ ವ್ಯವಸ್ಥೆಗೆ ಅಗತ್ಯವಾದ ತಂತ್ರಾಂಶ ಸಂಪರ್ಕ ವ್ಯವಸ್ಥೆ, ಕ್ರೋಢೀಕರಣ ಇವುಗಳನ್ನು ಏರ್ಪಾಡು ಮಾಡತಕ್ಕದ್ದು.

ಇ) ಸರ್ಕಾರಕ್ಕೆ ಸಂದಾಯಗೊಳ್ಳುವ ಸಂಗ್ರಹಿಸಿದ ಪರಿಶೀಲನಾ ಶುಲ್ಕವನ್ನು ಮುಂಬರುವ 3ರಿಂದ 6ತಿಂಗಳೊಳಗೆ T+2 ಅಥವಾ T+3 ಆಧಾರದಲ್ಲಿ ಒದಗಿಸಬೇಕು.

ಎಫ್) ಮುಂಬರುವ 3ರಿಂದ 6ತಿಂಗಳೊಳಗೆ ಮೇಲ್ಕಂಡ (ಡಿ) ಮತ್ತು(ಇ)ಗಳಿಗೆ ಅಗತ್ಯವಾದ ಮಾಹಿತಿ ತಂತ್ರಾಂಶ ಕ್ರೋಢಿಕರಣವನ್ನು ವ್ಯವಸ್ಥೆಗೊಳಿಸಬೇಕು.

2) ನಿಗದಿತ ಪರಿಶೀಲನಾ ಶುಲ್ಕದೊಂದಿಗೆ ಎಲ್ಲಾ ಬೆಂಗಳೂರು ಒನ್ ಕೇಂದ್ರಗಳು ಮತ್ತು ಹುಬ್ಬಳ್ಳಿ-ಧಾರವಾಡ, ಕೇಂದ್ರವು ವ್ಯಾವಹಾರಿಕ ಶುಲ್ಕವಾಗಿ ರೂ 5/- (ಐದು ರೂಪಾಯಿ ಮಾತ್ರ) ಸಂಗ್ರಹಿಸಲು, ಮತ್ತು ಮೈಸೂರು, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ದಾವಣಗೆರೆ, ಗುಲಬರ್ಗಾ, ತುಮಕೂರು, ಬೆಳಗಾಂ ಜಿಲ್ಲೆಗಳಲ್ಲಿ ವ್ಯಾವಹಾರಿಕ ಶುಲ್ಕವಾಗಿ ಕರ್ನಾಟಕ-ಒನ್ ಕೇಂದ್ರಗಳು ರೂ. 7/- (ಏಳು ರೂಪಾಯಿಗಳು ಮಾತ್ರ) ಅನ್ನು ಸಂಗ್ರಹಿಸಲು (ನಿಗದಿತ ಶುಲ್ಕ + ವ್ಯವಹಾರಿಕ ಶುಲ್ಕ) ಅನುಮತಿ ನೀಡಲಾಗಿದೆ.

3) ಬೆಂಗಳೂರು ಒನ್ ಕೇಂದ್ರಗಳು ಮತ್ತು ಹುಬ್ಬಳ್ಳಿ-ಧಾರವಾಡದ, ಕರ್ನಾಟಕ-ಒನ್ ಕೇಂದ್ರವು ರೂ 5/- ವ್ಯವಹಾರಿಕ ಶುಲ್ಕವನ್ನು ಮತ್ತು ಈ ಮುಂದಿನ ಮೈಸೂರು, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ದಾವಣಗೆರೆ, ಗುಲಬರ್ಗಾ, ತುಮಕೂರು, ಬೆಳಗಾಂ ಜಿಲ್ಲೆಗಳ ಕರ್ನಾಟಕ ಒನ್ ಕೇಂದ್ರಗಳು ರೂ. 7/-ವ್ಯಾವಹಾರಿಕ ಶುಲ್ಕವನ್ನು ಉಳಿಸಿಕೊಳ್ಳಬಹುದಾಗಿದೆ.

4) ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರತಕ್ಕದ್ದು.

5) ಈ ಆದೇಶವನ್ನು ಹಣಕಾಸು ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್‌ಡಿ/42/ವೆಚ್ಚ-11/2012 ದಿನಾಂಕ:2/4/2012- ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪ್ರಕಾಶ್ .ವೈ.ಕೆ,

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)

ಪಿ.ಆರ್. 1363

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾರ್ಯಚಟುವಟಿಕೆಗಳ ಮೇಲುಸ್ತುವಾರಿ ಸಲುವಾಗಿ ಸಮನ್ವಯ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : 1) ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27–04–2011ರಂದು ನಡೆದ ಪ್ರಾದೇಶಿಕ ವಿಜ್ಞಾನ ಕೇಂದ್ರದ ಪ್ರಗತಿ ಪರಿಶೀಲನಾ ಸಭೆಯ ನಡವಳಿಯ ನಿರ್ಣಯ.

2) ಸದಸ್ಯ ಕಾರ್ಯದರ್ಶಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ (ರಿ) ಮಂಗಳೂರು. ಇವರ ಪತ್ರ ಸಂಖ್ಯೆ: ಇಲ್ಲ, ದಿನಾಂಕ 27–04–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂ. (1)ರಲ್ಲಿನ ನಡವಳಿಯಲ್ಲಿ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27–04–2011ರಂದು ನಡೆದ ಪ್ರಾದೇಶಿಕ ವಿಜ್ಞಾನ ಕೇಂದ್ರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಮನ್ವಯ ಸಮಿತಿಯನ್ನು ರಚಿಸಲು ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮ ಸಂ. (2)ರಲ್ಲಿ ಸದಸ್ಯ ಕಾರ್ಯದರ್ಶಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ (ರಿ) ಮಂಗಳೂರು, ಇವರು ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಮತ್ತು ಜಿಲ್ಲಾಮಟ್ಟದ ವಿಜ್ಞಾನ ಕೇಂದ್ರಗಳ ಮುಖಾಂತರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪ್ರತಿ ಪ್ರಾದೇಶಿಕ ವಿಜ್ಞಾನ ಕೇಂದ್ರದ ಮಟ್ಟದಲ್ಲಿ ಒಂದು ಸಮನ್ವಯ ಸಮಿತಿ ನೇಮಕ ಮಾಡುವುದು. ಅತ್ಯವಶ್ಯವಾಗಿರುತ್ತದೆಂದು ತಿಳಿಸಿರುತ್ತಾರೆ. ಆದ್ದರಿಂದ ಪ್ರತಿ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ನಿರ್ದೇಶಕರು (ತಾಂತ್ರಿಕ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ 5 ಜನ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ನಿರ್ದೇಶಕರು (ತಾಂತ್ರಿಕ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇವರು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27–04–2011ರಂದು ನಡೆದ ಪ್ರಾದೇಶಿಕ/ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಪ್ರತಿ ಪ್ರಾದೇಶಿಕ ವಿಜ್ಞಾನ ಕೇಂದ್ರದ ಮಟ್ಟದಲ್ಲಿ ಸಮನ್ವಯ ಸಮಿತಿ ರಚಿಸುವಂತೆ ಸಲ್ಲಿಸಿರುವ ಶಿಫಾರಸ್ಸಿನ ಅನ್ವಯ ಮಂಗಳೂರು ಪಿಲಿಕುಳ ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಲ್ಲಿ ಸಮನ್ವಯ ಸಮಿತಿಯನ್ನು ರಚಿಸಲು ನಿರ್ಧರಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ.ವಿಯಇ 74 ವಿತ್ರಮ 2011, ಬೆಂಗಳೂರು, ದಿನಾಂಕ:05.05.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮಂಗಳೂರು ಪಿಲಿಕುಳ ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾರ್ಯಚಟುವಟಿಕೆಗಳ ಮೇಲುಸ್ತುವಾರಿ ಸಲುವಾಗಿ ಈ ಕೆಳಕಂಡಂತೆ ಸಮನ್ವಯ ಸಮಿತಿಯನ್ನು ರಚಿಸಿದ್ದು, ಈ ಸಮನ್ವಯ ಸಮಿತಿಯು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಲಾಗಿದೆ.

1)	ನಿರ್ದೇಶಕರು (ತಾಂತ್ರಿಕ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.	**ಅಧ್ಯಕ್ಷರು**
2)	ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಾರ್ಯವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಪ್ರತಿನಿಧಿಗಳು.	**ಸದಸ್ಯರು**
3)	ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಾರ್ಯವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು/ ಅವರ ಪ್ರತಿನಿಧಿಗಳು	**ಸದಸ್ಯರು**
4)	ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಾರ್ಯವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,	**ಸದಸ್ಯರು**
5)	ಪ್ರಾದೇಶಿಕ ವಿಜ್ಞಾನ ಕೇಂದ್ರದ ಸೊಸೈಟಿಯಿಂದ ನೇಮಿಸಲ್ಪಟ್ಟ ಓರ್ವ ಸದಸ್ಯರು	**ಸದಸ್ಯರು**
6)	ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಟೆಕ್ನಾಲಜಿ ಮ್ಯೂಸಿಯಂ, ಬೆಂಗಳೂರು ನಿರ್ದೇಶಕರು ಅಥವಾ ಅವರ ಪ್ರತಿನಿಧಿ	**ಸದಸ್ಯರು**

7) ಪ್ರಾದೇಶಿಕ ವಿಜ್ಞಾನ ಕೇಂದ್ರದ ಸೊಸೈಟಿಯ ಸದಸ್ಯ ಕಾರ್ಯದರ್ಶಿಗಳು/ಕಾರ್ಯಕಾರಿ ಕಾರ್ಯದರ್ಶಿಗಳು — **ಸದಸ್ಯ ಕಾರ್ಯದರ್ಶಿ**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಜಾತ ಟಿ.ವಿ.,
ಪೀಠಾಧಿಕಾರಿ (ವಿ&ತಂ)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 1351

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಜಾಲನೆ (Karnataka Government Secretariat LAN) ಯೋಜನೆಗೆ ISO 27001ರಲ್ಲಿನ ಸೂಚನೆಯ ಮೇರೆಗೆ ಮಾಹಿತಿ ರಕ್ಷಣಾ ಸಮಿತಿಯನ್ನು ರಚಿಸುವ ಬಗ್ಗೆ.

ಪ್ರಸ್ತಾವನೆ:

1. ವಿಧಾನ ಸೌಧ, ವಿಕಾಸ ಸೌಧ ಮತ್ತು ಬಹುಮಹಡಿಗಳ ಕಟ್ಟಡಗಳಲ್ಲಿರುವ ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಯ ವ್ಯಾಪ್ತಿಯಲ್ಲಿ ಬರುವ ಇ-ಆಡಳಿತ ಕೇಂದ್ರ, ಬೆಂಗಳೂರು ಸಂಸ್ಥೆಯು ಸ್ಥಳೀಯ ನಿಸ್ತಂತು ಜಾಲನೆ (SECLAN) ವ್ಯವಸ್ಥೆಯನ್ನು ಕಲ್ಪಿಸಿದ್ದು, ಇದನ್ನು ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಇ-ಆಡಳಿತದ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಸ್ಥಳೀಯ ನಿಸ್ತಂತು ಜಾಲನೆ (SECLAN)ಯ ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ವಹಣೆ ಇತ್ಯಾದಿಗಳಿಗಾಗಿ ಮೆ॥ ಟಿಸಿಎಸ್ ಸಂಸ್ಥೆಗೆ ಜಾಲಬಂಧ ನಿರ್ವಾಹಕರ (Network operator) ಕಾರ್ಯವನ್ನು 2009ರಲ್ಲಿ ವಹಿಸಲಾಗಿದೆ.

2. ಚೌಕಟ್ಟು ದಾಖಲೆ ನಿರ್ವಹಣೆ (Request for Proposal-RFP)ರ 5.14 ಮತ್ತು 7.3 ಸೆಕ್ಷನ್ ರಲ್ಲಿ ನಿಗದಿಪಡಿಸಿರುವಂತೆ ಮೇಲ್ಕಂಡ ಸಂಸ್ಥೆಯು ISO /IEC 27001ರ ಮಾನದಂಡವನ್ನು ಜಾರಿಗೊಳಿಸಬೇಕಾಗಿದ್ದು ಈ ಬಗ್ಗೆ ಇ–ಆಡಳಿತ ಕೇಂದ್ರವು ನಿಗದಿಪಡಿಸಿರುವ ಸಂಸ್ಥೆಯಿಂದ ದೃಢೀಕರಣ ಪತ್ರವನ್ನು ಅಂಗೀಕಾರ ಪರೀಕ್ಷೆಯು ಮುಗಿದ ಆರು ತಿಂಗಳ ಒಳಗಾಗಿ ಪಡೆಯ ಬೇಕಾಗಿರುತ್ತದೆ.

3. ISO 27001 ರಲ್ಲಿ ನಿಗದಿ ಪಡಿಸಿರುವಂತೆ ಒಂದು ಮಾಹಿತಿ ರಕ್ಷಣಾ ನಿರ್ವಹಣೆ ವ್ಯವಸ್ಥೆ (Information Security Management System – ISMS)ಅನ್ನು ಸೃಜಿಸುವುದು, ಕಾರ್ಯಗತಗೊಳಿಸುವುದು, ನಿರ್ವಹಣೆ, ಪರಿಶೀಲನೆ ಹಾಗೂ ಬೆಳಸುವುದು ಒಂದು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಇದಕ್ಕಾಗಿ ಸೂಕ್ತ ಸಂಪನ್ಮೂಲ ವ್ಯವಸ್ಥೆ ಹಾಗೂ ಸಂಬಂಧಿಸಿದ ಎಲ್ಲಾ ಸಿಬ್ಬಂದಿಗೆ ಇದರ ಅರಿವು ಹಾಗೂ ಸೂಕ್ತ ತರಬೇತಿ ಸಾಮರ್ಥ್ಯತೆಯನ್ನು ಕಲ್ಪಿಸಬೇಕಾಗುತ್ತದೆ. ಅದಲ್ಲದೇ ಪ್ರಸ್ತಾಪಿತ ಸಮಿತಿಯು ISO /IEC 27001ರಲ್ಲಿ ನಿಗದಿಪಡಿಸಿರುವಂತೆ ISMS Plan-Do-Check-Act [PDCA] ಕಾರ್ಯವಿಧಾನದಲ್ಲಿ ಭಾಗವಹಿಸಬೇಕಾಗುತ್ತದೆ.

4. ಈ ಹಿನ್ನೆಲೆಯಲ್ಲಿ, ಒಂದು ಮಾಹಿತಿ ರಕ್ಷಣಾ ಸಮಿತಿಯನ್ನು ರಚಿಸುವುದು ಅಗತ್ಯವಿರುತ್ತದೆ. ಅದರಂತೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 42 ಇಅಇ 2012, ಬೆಂಗಳೂರು, ದಿನಾಂಕ: 08ನೇ ಮೇ, 2012

5. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಮಾಹಿತಿ ರಕ್ಷಣಾ ಸಮಿತಿಯನ್ನು ರಚಿಸಲಾಗಿದೆ,

(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಬೆಂಗಳೂರು	ಮುಖ್ಯ ಮಾಹಿತಿ ರಕ್ಷಣಾ ಅಧಿಕಾರಿ
(2) ಪ್ರೋ. ಆರ್. ಕೃಷ್ಣಮೂರ್ತಿ, ಮುಖ್ಯ ಸಂಶೋಧನಾ ವಿಜ್ಞಾನಿ, ಐ.ಐ.ಎಸ್.ಸಿ ಬೆಂಗಳೂರು	ರಕ್ಷಣಾ ಸಲಹೆಗಾರರು
(3) ಡಾ॥ ದೇಬಬ್ರತ ದಾಸ್, ಅಸೋಸಿಯೇಟ್ಸ್ ಪ್ರೋಫೆಸರ್, ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ (ಐಐಐಟಿ)	ರಕ್ಷಣಾ ಸಲಹೆಗಾರರು

(4) ಶ್ರೀ ಭಟ್ಟಾಚಾರ್ಜಿ, ಪ್ರಧಾನ ಸಮಾಲೋಚಕರು, ಇ-ಆಡಳಿತ ಕೇಂದ್ರ	ರಕ್ಷಣಾ ಸಲಹೆಗಾರರು
(5) ಯೋಜನಾ ವ್ಯವಸ್ಥಾಪಕರು, ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಜಾಲನೆ (SECLAN)	ಬಾಹ್ಯ ಏಜೆನ್ಸಿ
(6) ಯೋಜನಾ ವ್ಯವಸ್ಥಾಪಕರು, ಸೌಕರ್ಯ ನಿರ್ವಹಣೆ ಸೇವೆ (Facility Management Service)	ಬಾಹ್ಯ ಏಜೆನ್ಸಿ
(7) ಯೋಜನಾ ವ್ಯವಸ್ಥಾಪಕರು, ರಾಜ್ಯ ದತ್ತ ಕೇಂದ್ರ (State Data Centre)	ಬಾಹ್ಯ ಏಜೆನ್ಸಿ
(8) ಯೋಜನಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆ (Karnataka State Wide Area Network)	ಬಾಹ್ಯ ಏಜೆನ್ಸಿ
(9) ಕೆಪಿಎಮ್‌ಜಿ ಸಮಾಲೋಚಕರು,	ಬಾಹ್ಯ ಏಜೆನ್ಸಿ
(10) ಸರ್ಕಾರದ ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)	ಬಳಕೆದಾರ ಇಲಾಖೆಯ ಪ್ರತಿನಿಧಿ
(11) ಸರ್ಕಾರದ ಉಪ/ಜಂಟಿ/ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಕಾರ್ಯಕಾರಿ)	ಬಳಕೆದಾರ ಇಲಾಖೆಯ ಪ್ರತಿನಿಧಿ
(12) ಆರ್ಥಿಕ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	ಬಳಕೆದಾರ ಇಲಾಖೆಯ ಪ್ರತಿನಿಧಿ
(13) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	ಬಳಕೆದಾರ ಇಲಾಖೆಯ ಪ್ರತಿನಿಧಿ
(14) ನಗರಾಭಿವೃದ್ಧಿ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	ಬಳಕೆದಾರ ಇಲಾಖೆಯ ಪ್ರತಿನಿಧಿ
(15) ಶಿಕ್ಷಣ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	ಬಳಕೆದಾರ ಇಲಾಖೆಯ ಪ್ರತಿನಿಧಿ
(16) ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	ಬಳಕೆದಾರ ಇಲಾಖೆಯ ಪ್ರತಿನಿಧಿ
(17) ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪ್ರತಿನಿಧಿ	ಬಳಕೆದಾರ ಇಲಾಖೆಯ ಪ್ರತಿನಿಧಿ
(18) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರ ಸಚಿವಾಲಯ	ಬಳಕೆದಾರ ಇಲಾಖೆಯ ಪ್ರತಿನಿಧಿ
(19) ಕಾರ್ಯಪಾಲಕ ಅಭಿಯಂತರರು, ಸಂಖ್ಯೆ-1 ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಬೆಂಗಳೂರು	ಬಳಕೆದಾರ ಇಲಾಖೆಯ ಪ್ರತಿನಿಧಿ
(20) ಶ್ರೀಮತಿ ಚಂಪಾ.ಇ, ಯೋಜನಾಧಿಕಾರಿ, ಇ–ಆಡಳಿತ ಕೇಂದ್ರ, ಬೆಂಗಳೂರು	ಮಾಹಿತಿ ರಕ್ಷಣಾ ವ್ಯವಸ್ಥಾಪಕರು ಹಾಗೂ SECLAN ಯೋಜನಾ ಅಧಿಕಾರಿ/ಸಮಾವೇಶಕರು

6. ಸದರಿ ಸಮಿತಿಯ ಕಾರ್ಯನಿರ್ವಹಣೆ, ಜವಾಬ್ದಾರಿ ಇತ್ಯಾದಿಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿ ನಮೂದಿಸಲಾಗಿದೆ. ಈ ಸಮಿತಿಯು ಕಾರ್ಯನಿರ್ವಹಣೆ ಕುರಿತು ಆಗಿಂದಾಗ್ಗೆ ಸಭೆ ಸೇರತಕ್ಕದ್ದು. ಈ ಸಮಿತಿಯ ಸಭೆಗಳ ನಡವಳಿಯ ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ–ಆಡಳಿತ)ಗೆ ಮಂಡಿಸತಕ್ಕದ್ದು.


ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಬಿ.ಬ್ರಹ್ಮಪ್ರಸಾದ್,
ಪೀಠಾಧಿಕಾರಿ–1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ–ಆಡಳಿತ)

ಅನುಬಂಧ

Roles and Responsibilities of Information Security Committee (ISC)

An Information Security Committee (ISC), headed by the CEO is constituted to provide direction to and monitor the ISMS implementation and operations. The Committee shall constitute of the Information Security Manager, SECLAN Project Officer, and Security Consultants/Advisors to CEG. Representatives from external Third party agencies involved in the SECLAN operations may be included on a need basis.



The Responsibilities of the Information Security Committee are:

- Initiate, control and co-ordinate the implementation of information security initiatives for the SECLAN.
- Review and evaluate the ISMS for the SECLAN
- Evaluate the recommendations from ISM and decide on any changes in ISMS.
- Submit their decisions on changes to ISMS to the CEO for approval.
- Review and approval of the Risk Assessments conducted.
- Review critical information security incidents and reports, and ensure the implementation of preventive and corrective action plans.
- Identifying and agreeing to the roles and responsibilities of stakeholders in the implementation of information security controls.
- Approve major initiatives to augment information security.

1.1.1.1 Chief Information Security Officer (CISO)

The Chief Information Security Officer (CISO) reports to the Chief Executive Officer of CEG, GoK. The responsibilities of the CISO include the following:

- Overall responsibility for Information Security in the SECLAN.
- Head the Information Security Committee (ISC).
- Developing, along with the ISC, the security Objectives, Strategy and Policy.
- Review and approve the ISMS documentation for SECLAN.
- Establish and review the risk assessment methodology and select appropriate controls for risk mitigation.
- Monitor the compliance to ISMS and ISO 27001 requirements.
- Report to the ISC on the status of the ISMS, incidents, risks and current threats.
- Interact with external agencies that could be of help to maintain information security for the SECLAN.

1.1.1.2 Information Security Manager (ISM)

The Information Security Manager (ISM) reports to the CISO. The responsibilities of the ISM include the following:

- Support the CISO in execution of his/her responsibilities.

- Act as an intermediary between the CISO and the Information Security Committee members at the operational level.
- Define ISMS policy in co-ordination with CISO, and ensure that it is periodically reviewed.
- Facilitate the review and evaluation of the ISMS policy and documents.
- Recommend changes to ISMS to the Information Security Committee, based on inputs received from internal and external audits and reviews.
- Document the security policy, operating procedures, guidelines and any others required for ISMS, and any changes to these documents.
- Maintain the latest versions of the ISMS documentation.
- Maintain at least one hard copy of the latest released version of the ISMS Policy document.
- Publish release notes for all changes made to the ISMS documents during the calendar year.
- Plan for, co-ordinate and monitor implementation of security controls.
- Monitor the effectiveness of implementation of security policies/procedures and report the same to CISO.
- Conduct periodic risk assessments for the SECLAN Information Assets, and recommend appropriate risk handling strategy to the CISO.
- Co-ordinate with ISM of FMS for implementation and monitoring of security controls relevant to the SECLAN operations.
- Review the implementation of agreed security controls by entities external to SECLAN, including FMS and third party service providers.
- Facilitate internal and external security reviews and ensure that action is taken to rectify any short falls/non-conformities identified by the auditors.
- Develop and maintain a business continuity and disaster recovery plan for the SECLAN.
- Monitor the business continuity and disaster recovery activities.
- Conduct periodic drills/tests of the business continuity and disaster recovery plans.
- Ensure that adequate training and awareness on information security is provided to all Users.
- Respond to and investigate all reported security incidents, events and weaknesses.

1.1.1.3 SECLAN Project Officer

The Project Officer reports to the CISO and co-ordinates activities for the project that they are responsible for. The responsibilities of the Project Officer include the following:

- Plan for and co-ordinate Information Security Committee (ISC) Meetings as per the requirements.
- Participate and contribute in the ISC Meetings.
- Facilitate security awareness and training sessions for the project teams.

1.1.1.4 Secretariat Department DPAR

The DPAR of the respective Secretariat department are the Single Points of Contact for all information security related matters pertinent to the employees engaged in their departments. The responsibilities of the DPAR include:

- Participate in the Information Security Committee meetings, when requested.
- Co-operate with ISM during investigation of security events / incidents pertinent to the employees associated with their department.
- Take any corrective and preventive actions, as determined and requested by the ISM, for resolution of the security incidents relevant to employees associated with their department.

1.1.1.5 Security Advisor/Consultant

The Security Advisor/Consultant is engaged by CEG and reports to the CISO. The responsibilities of the Security Advisor/Consultant include:

- Assist the CISO and Information Security Committee in the review of ISMS.
- Provide independent expert advice and suggestions for implementation of the ISMS.

- Brief the Information Security Committee on current threats and recommended safeguards.

1.1.1.6 Secretariat Department Representative

The responsibilities of the Secretariat Department representative with respect to ISMS are:

- Participate in the Information Security Committee meetings, when requested.
- Co-operate with the ISM in implementation of the SECLAN security policies and procedures in their respective departments.
- Facilitate investigation of any reported security event / incident that affect their department.

1.1.1.7 Third Party Representative

External third parties involved in the SECLAN would nominate a person for coordination on aspects on information security. The third parties could be involved with Network and FMS operations, building infrastructure management (like PWD), Building physical security etc.
The responsibilities of the third party representative with respect to ISMS are:

- Coordinate with the ISM for implementation of information security policies and procedures for the SECLAN operations that they are associated with.
- Participate in the Information Security Committee meetings, when requested.
- Facilitate awareness on SECLAN Information Security Policy among the members of the Third party involved with SECLAN operations.

1.1.1.8 Network Operator

Network Operator refers to the team that is responsible for handling the design, supply, installation, commission, operation and maintenance of the SECLAN Infrastructure. The responsibilities of this team with respect to ISMS are:

- Implement the IT security policies and procedures required by the ISMS, in co-ordination with the ISM.
- Assist the ISM with monitoring the effectiveness of implemented IT security controls.
- Ensure all SECLAN IT components are hardened as per the published guidelines.
- Identify and recommend to ISM on improvements to security policies/procedures.

1.1.1.9 FMS Operator

FMS Operator refers to the Facilities Management Services team that operates and manages the IT components provided to the End Users. The responsibilities of this team with respect to SECLAN ISMS are:

- Implement the IT security policies and procedures required to be implemented on the End User systems by the SECLAN ISMS, in co-ordination with the FMS & SECLAN ISM.
- Assist the FMS & SECLAN ISM with monitoring the effectiveness of implemented IT security controls.
- Report any security incidents, events or weaknesses in the FMS systems that are relevant to the SECLAN infrastructure.

1.1.1.10 Users of the SECLAN

Users refer to all the End Users, Network Operators, FMS Operators, CEG employees and CEG's third party personnel (including consultants, contractors and vendor personnel) who are associated with the SECLAN Infrastructure. End Users here refer to all the Secretariat employees and guests who are provided with access to the SECLAN.

Responsibilities of Users of the SECLAN with respect to ISMS are listed below. These responsibilities also apply to all the roles defined in earlier sections.

- Be aware of the security policy, procedures and guidelines and complying with it.
- Access only the data that they are authorized to.
- Identify and maintain the confidentiality level for each information asset under their ownership.
- Take all necessary precautions to protect the confidentiality and integrity of the organizational information assets that they use or have access to.
- Limit or restrict use of the internet and SECLAN information assets to business use only.
- Participate in information security awareness and trainings.
- Report any security incidents, events or weaknesses that are observed.
- Cooperate with authorized persons conducting audits or investigations into concerns covered by the security policy.
- Participate in business continuity and disaster recovery drills/tests, as and when required.

ಜಿ.ಬಿ.ಬ್ರಹ್ಮಪ್ರಸಾದ್,
ಪೀಠಾಧಿಕಾರಿ–1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)

PR-1355

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಮಮಇ 130 ಪಿಹೆಚ್‌ಪಿ2012, ಬೆಂಗಳೂರು, ದಿನಾಂಕ : 13–4–2012.

ದಿನಾಂಕ : 25–7–2006ರ ಸರ್ಕಾರಿ ಆದೇಶ ಸಂಖ್ಯೆ : ಮಮಇ 242 ಎಸ್‌ಜೆಡಿ 2006ರ ಎರಡನೇ ಕಂಡಿಕೆಯ ಮೂರನೆಯ ಸಾಲಿನಲ್ಲಿನ "ಗುರುತಿನ ಚೀಟಿ ಅವಶ್ಯವಿರುವ ಹಿರಿಯ ನಾಗರಿಕರಿಂದ ರೂ. 25/– ಮೊತ್ತವನ್ನು ಸಂಗ್ರಹಿಸಿ" ಎನ್ನುವ ಪದಗಳ ಬದಲಾಗಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಗೆ ಕಾಣಿಸಿರುವ ಪದಗಳನ್ನು ಸೇರಿಸಿ ತಿದ್ದಿ ಓದಿಕೊಳ್ಳತಕ್ಕದ್ದು.

"ಗುರುತಿನ ಚೀಟಿ ಅವಶ್ಯವಿರುವ ಹಿರಿಯ ನಾಗರೀಕರಿಂದ ರೂ. 50/–(ರೂಪಾಯಿಗಳು ಐವತ್ತು ಮಾತ್ರ) ಮೊತ್ತವನ್ನು ಸಂಗ್ರಹಿಸಿ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ–2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 1243

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ|| ಗೌಸ್‌ಪಾಶ, ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ ತಾಳ್ಯ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ : ಜೆಆರ್‌ಓ(1)/191/2011–12, ದಿನಾಂಕ : 30–1–2012.

ಪ್ರಸ್ತಾವನೆ :

ಡಾ॥ ಗೌಸ್‌ಪಾಶ, ಇವರು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಯಾಗಿ, ಸರ್ಕಾರಿ ಅಧಿಸೂಚನೆ ಸಂಖ್ಯೆ : ಆಕುಕ 739 ಹೆಚ್‌ಎಸ್‌ಹೆಚ್ 2008, ದಿನಾಂಕ : 9–1–2009 ರನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರ ತಾಳ್ಯ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇಲ್ಲಿ ದಿನಾಂಕ : 27–1–2009 ರಂದು ಹುದ್ದೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಖಾಯಂಪೂರ್ವ ಸೇವಾವಧಿಯಲ್ಲಿರುತ್ತಾರೆ. ನಂತರ ದಿನಾಂಕ : 1–6–2011 ರಿಂದ 31–5–2014 ರವರೆಗೆ ಖಾಸಗಿಯಾಗಿ ಮೂರು ವರ್ಷದ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿರುವುದರಿಂದ ವ್ಯಾಸಂಗ ನಡೆಸಲು ಅನುಮತಿ ನೀಡಿ ವ್ಯಾಸಂಗದ ಅವಧಿಗೆ ವೇತನ ರಹಿತ ರಜೆ ಮಂಜೂರು ಮಾಡುವಂತೆ ಕೋರಿ ಸದರಿ ವೈದ್ಯರು ದಿನಾಂಕ : 31–5–2011 ರಂದು ಮನವಿ ಸಲ್ಲಿಸಿರುತ್ತಾರೆ. ಆದರೆ, ಸದರಿ ವೈದ್ಯರು ಖಾಯಂಪೂರ್ವ ಸೇವಾ ಅವಧಿಯಲ್ಲಿರುವುದರಿಂದ ನೇಮಕಾತಿ ಷರತ್ತಿನನ್ವಯ ಸ್ನಾತಕೋತ್ತರ ವ್ಯಾಸಂಗ ನಡೆಸಲು ಅವಕಾಶವಿಲ್ಲದಿರುವುದರಿಂದ ಪ್ರೊಬೇಷನರಿ ನಿಯಮಗಳ ಪ್ರಕಾರ ಸೇವೆಯಿಂದ ವಿಮೋಚನೆಗೊಳಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 17 ಹೆಚ್‌ಎಸ್‌ಎಲ್ 2012, ಬೆಂಗಳೂರು, ದಿನಾಂಕ : 18–4–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾ॥ ಗೌಸ್‌ಪಾಶ, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಳ್ಯ ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಖಾಯಂಪೂರ್ವ ಸೇವಾವಧಿಯಲ್ಲಿ ಸರ್ಕಾರದ ಅನುಮತಿ ಪಡೆಯದೆ ಖಾಸಗಿಯಾಗಿ 3 ವರ್ಷಗಳ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿರುವುದರಿಂದ ಇವರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತರಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6 ರಡಿಯಲ್ಲಿ ಸದರಿಯವರನ್ನು ದಿನಾಂಕ : 1–6–2011 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ಸೇವೆಗಳು).

ಪಿ.ಆರ್. 1239

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಸಚಿವಾಲಯ

ವಿಷಯ : ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಜನ್ಮ ದಿನಾಂಕ ಜನವರಿ 28 ಅನ್ನು ಸರ್ಕಾರದ ಹಬ್ಬವನ್ನಾಗಿ ಆಚರಿಸುವ ಬಗ್ಗೆ.

ಪ್ರಸ್ತಾವನೆ :

ಕರ್ನಾಟಕದ ಕೊಡಗು ಜಿಲ್ಲೆಯ ಹೆಮ್ಮೆಯ ದೇಶದ ವೀರಸೇನಾನಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪನವರ ಆದರ್ಶ, ಶಿಸ್ತು ಮತ್ತು ದೇಶಸೇವೆಯನ್ನು ಸ್ಮರಣೆ ಮಾಡುವುದು ಇಂದಿಗೂ ಅವಶ್ಯ ಜನವರಿ 28ನೇ ತಾರೀಖು ಶ್ರೀಯುತರ ಜನ್ಮ ದಿನಾಂಕವಾಗಿದ್ದು, ಇದನ್ನು ರಾಜ್ಯದ ವಿವಿಧ ಸೇನಾನಿಗಳ ಹಬ್ಬವಾಗಿ ಆಚರಿಸುವುದು ಕರ್ನಾಟಕದ ಬಹುತೇಕ ಜನತೆಯ ಆಪೇಕ್ಷೆಯಾಗಿರುತ್ತದೆ.

ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಜನ್ಮ ದಿನಾಂಕ ಜನವರಿ 28 ಅನ್ನು ಸರ್ಕಾರದ ಹಬ್ಬವನ್ನಾಗಿ ಆಚರಿಸುವ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ : ಕಸಂವಾಪ್ರ 347 ಕಸಧ 2012, ಬೆಂಗಳೂರು, ದಿನಾಂಕ : 12–4–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಜನ್ಮ ದಿನಾಂಕ : ಜನವರಿ 28 ಅನ್ನು ರಾಜ್ಯ ವೀರಸೇನಾನಿಗಳ ಹಬ್ಬವನ್ನಾಗಿ ಆಚರಿಸಲು ಸರ್ಕಾರವು ಹರ್ಷಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ವಿ. ರಾಮಚಂದ್ರರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಪಿ.ಆರ್. 1244